# ಸಿರಾಖನು

## (ಸಿರಾಖನ ಮಗನಾದ ಯೆಷೂವನ ಜ್ಞಾನಾಮೃತ)

### ಮುನ್ನುಡಿ

'ಸಿರಾಖನ ಮಗ ಯೆಷೂವನ ಜ್ಞಾನಾಮೃತ' ಪ್ರಪ್ರಥಮವಾಗಿ ಹಿಬ್ರು ಭಾಷೆಯಲ್ಲಿ ಯೆಷೂವನಿಂದ ಬರೆಯಲಾಯಿತು. ಕಾಲಕ್ರಮೇಣ ಯೆಷೂವನ ಮೊಮ್ಮಗನು ಅದನ್ನು ಗ್ರೀಕ್ ಭಾಷೆಗೆ ಭಾಷಾಂತರಿಸಿದನು. ಈ ಗ್ರಂಥವನ್ನು 'ಎಕ್ಲೇಸಿಯಾಸ್ಟಿಕಸ್' ಎಂದು ಕೆಲವರು ಕರೆಯುವುದುಂಟು.

ಯೆಹೂದ್ಯ ಜ್ಞಾನೋಕ್ತಿಗಳನ್ನೊಳಗೊಂಡಿರುವ ಈ ಗ್ರಂಥ ಯೆಹೂದ್ಯ ಧರ್ಮವನ್ನು ಯಶಸ್ವಿಯಾಗಿ ಸಮರ್ಥಿಸುತ್ತದೆ. ದೇವರು ತಮ್ಮ ಜನರಿಗೆ ನಿಜವಾದ ಸುಜ್ಞಾನವನ್ನು ದಯಪಾಲಿಸಿದ್ದಾರೆಂಬುದನ್ನು ಸ್ಪಷ್ಟಪಡಿಸುತ್ತದೆ. ಧರ್ಮ, ನೀತಿ, ದಿನನಿತ್ಯದ ಬದುಕು – ಇವಕ್ಕೆ ಸಂಬಂಧಪಟ್ಟ ವಿಷಯಗಳನ್ನು ಸುದೀರ್ಘವಾಗಿಯೂ ಸಂಕ್ಷಿಪ್ತವಾಗಿಯೂ ಜ್ಞಾನೋಕ್ತಿಗಳ ರೂಪದಲ್ಲಿ ಕೊಡಲಾಗಿದೆ.

'ಸರ್ವೇಶ್ವರ', 'ದೇವರು' ಎಂಬ ಪದಗಳಿಗೆ ಗೌರವಾರ್ಥ ಬಹುವಚನವನ್ನು ಗದ್ಯಭಾಗದಲ್ಲಿ ಬಳಸಲಾಗಿದೆ. ಪದ್ಯಭಾಗಗಳಲ್ಲಿ ಏಕವಚನವನ್ನು ಪ್ರಯೋಗಿಸಲಾಗಿದೆಯಾದರೂ ಗಾದೆಗಳಲ್ಲೂ ವಚನಗಳಲ್ಲೂ ಸಂದರ್ಭಕ್ಕನುಸಾರ ಏಕವಚನ ಹಾಗು ಬಹುವಚನಗಳೆರಡನ್ನೂ ಪ್ರಯೋಗಿಸಲಾಗಿದೆ.

### ಪರಿವಿಡಿ


| | | | | |
|---|---|---|---|---|
| ಅನುವಾದಕನ ನಿವೇದನೆ | | | | |
| ಸುಜ್ಞಾನದ ಸ್ತುತಿ (ಭಾಗ –1) | – | 1.1 | – | 23.27 |
| ಅ. ಕರ್ತವ್ಯ, ಪ್ರತಿಫಲ, ಬುದ್ಧಿವಾದ | – | 1.1 | – | 16–23 |
| ಆ. ದೇವರ ಜ್ಞಾನ, ಮಾನವನ ಪ್ರತಿಕ್ರಿಯೆ | – | 16.24 | – | 23.27 |
| ಸುಜ್ಞಾನದ ಸ್ತುತಿ (ಭಾಗ–2) | | | | |
| ಅ. ಸುಜ್ಞಾನ – ಸದ್ಗುಣ | – | 24.1 | – | 32.13 |
| ಆ. ದೇವರ ಜ್ಞಾನ, ಮಾನವನ ಭಕ್ತಿ ಮತ್ತು ಕೆಲಸಕಾರ್ಯ | – | 32.14 | – | 42.14 |
| ಇ. ಪ್ರಕೃತಿಯಲ್ಲಿ ದೇವರ ಮಹಿಮೆ | – | 42.15 | – | 43.33 |
| ಈ. ಪೂರ್ವಜರ ಹಿರಿಮೆ | – | 44.1 | – | 50.21 |
| ಉಪಸಂಹಾರ – ಅನುಬಂಧ | – | 50.22 | – | 51.30 |


### ಅನುವಾದಕನ ನಿವೇದನೆ

ಧರ್ಮಶಾಸ್ತ್ರವು, ಪ್ರವಾದನೆಗಳು ಹಾಗು ಈ ಪ್ರವಾದಿಗಳ ಹೆಜ್ಜೆಯ ಜಾಡಿನಲ್ಲಿ ನಡೆದ ಪುಣ್ಯಾತ್ಮರು, ಸದ್ಬೋಧನೆಯೆಂಬ ಅಮೂಲ್ಯ ಐಶ್ವರ್ಯವನ್ನೇ ನಮಗೆ ಬಿಟ್ಟುಹೋಗಿದ್ದಾರೆ. ಈ ಬೋಧನೆಯಲ್ಲಿ ಹುದುಗಿರುವ ಶಿಕ್ಷಣ ಹಾಗು ಜ್ಞಾನಸಂಪತ್ತಿನ ಕೀರ್ತಿ ಇಸ್ರಯೇಲರಿಗೆ ಸಲ್ಲಬೇಕು. ಇವುಗಳನ್ನು ಓದುವವರು ಬುದ್ಧಿವಂತರಾದರೆ ಸಾಲದು; ಇವುಗಳನ್ನು ಕಾರ್ಯರೂಪಕ್ಕೆ ತರಲು ಆಸಕ್ತಿಯುಳ್ಳವರಾಗಬೇಕು; ತಮ್ಮ ನುಡಿ ಹಾಗು ಬರಹಗಳ ಮೂಲಕ ಇತರರಿಗೂ ಇವುಗಳ ಲಾಭ ದೊರಕುವಂತೆ ಮಾಡಬೇಕು. ನನ್ನ ಅಜ್ಜನಾದ

ಯೆಷೂವ ಅವರು ಧರ್ಮಶಾಸ್ತ್ರ, ಪ್ರವಾದನೆಗಳು, ಹಾಗು ಹಿರಿಯರು ಬರೆದ ಇತರ ಗ್ರಂಥಗಳು, ಇವುಗಳನ್ನು ಓದುವುದರಲ್ಲಿ ಬಹುಕಾಲ ಆಸಕ್ತಿಯುಳ್ಳವರಾಗಿದ್ದರು. ಅಂತೆಯೇ ಅದರಲ್ಲಿ ಪ್ರವೀಣತೆಯನ್ನೂ ಪಡೆದರು. ಈ ವಿಷಯಗಳನ್ನು ಕಲಿಯಲು ಆಸಕ್ತಿಯುಳ್ಳವರು ಹಾಗು ಇವುಗಳು ನೀಡುವ ಬೋಧನೆಯನ್ನು ಅನುಸರಿಸಬೇಕು ಎನ್ನುವಂಥವರು ಇನ್ನೂ ಹೆಚ್ಚು ಪ್ರವೀಣರಾಗಲೆಂಬ ಉದ್ದೇಶದಿಂದ ಜ್ಞಾನ ಮತ್ತು ಶಿಕ್ಷಣದ ಬಗ್ಗೆ ತಾವೇ ಬರೆದಿಟ್ಟಿದ್ದಾರೆ. ಅದನ್ನು ಶ್ರಮವಹಿಸಿ ನಾನು ಭಾಷಾಂತರಿಸಿದ್ದೇನೆ.

ವಾಚಕರು ಗಮನವಿಟ್ಟು ಓದುವ ಉದಾರ ಮನಸ್ಸನ್ನು ತೋರಬೇಕು; ಸಮರ್ಪಕವಾದ ಪದಗಳ ಕೊರತೆ ಕಂಡುಬಂದಲ್ಲಿ ಕ್ಷಮೆ ನೀಡಬೇಕು ಎಂಬುದು ನನ್ನ ಬಿನ್ನಹ. ಹಿಬ್ರು ಭಾಷೆಯಲ್ಲಿ ಬರೆದದ್ದನ್ನು ಇನ್ನೊಂದು ಭಾಷೆಗೆ ಅನುವಾದಿಸಿದಾಗ ಮೂಲದಲ್ಲಿದ್ದ ಸ್ವಾರಸ್ಯ ಇರುವುದಿಲ್ಲ. ಅಷ್ಟೇ ಅಲ್ಲದೆ, ಧರ್ಮಶಾಸ್ತ್ರ, ಪ್ರವಾದನೆ ಮತ್ತು ಇತರ ಗ್ರಂಥಗಳನ್ನು ಅನುವಾದಿಸಿದಾಗ ಎಷ್ಟೋ ವ್ಯತ್ಯಾಸವಿರುತ್ತದೆ.

ಯುವರ್ಗೆಟೀಸ್ ಮಹಾರಾಜನ ಆಳ್ವಿಕೆಯ ಮೂವತ್ತೆಂಟನೆ ವರ್ಷದಲ್ಲಿ ನಾನು ಈಜಿಪ್ಟಿಗೆ ಬಂದು ಕೆಲವು ದಿನ ತಂಗಿದ್ದಾಗ ಅಮೂಲ್ಯವಾದ ಆ ಗ್ರಂಥದ ಒಂದು ಪ್ರತಿ ನನಗೆ ಸಿಕ್ಕಿತು. ನಾನು ಈಜಿಪ್ಟಿನಲ್ಲಿರುವವರೆಗೂ ಆ ಪ್ರತಿಯನ್ನು ಜಾಗ್ರತೆಯಿಂದಲೂ ಜಾಣತನದಿಂದಲೂ ಭಾಷಾಂತರಿಸಿದೆ. ಅದನ್ನು ಮುಗಿಸಲು ಬಹಳ ಕಾಲ ಹಾಗು ಶ್ರಮೆ ಬೇಕಾಯಿತು. ಈ ಕೆಳಕಂಡ ಪುಸ್ತಕವೇ ಆ ಶ್ರಮದ ಫಲ. ಧರ್ಮಶಾಸ್ತ್ರಕ್ಕೆ ಪ್ರಾಮಾಣಿಕವಾಗಿ ಬಾಳುವಂಥವರು ತಮ್ಮ ನಡತೆಯನ್ನು ತಿದ್ದಿಕೊಂಡು ಪ್ರಯೋಜನ ಪಡೆಯಲಿ. ವಿಶೇಷವಾಗಿ ಪ್ರವಾಸಿಗಳಿಗೆ ಈ ಗ್ರಂಥವು ಉಪಯುಕ್ತವಾಗಿರಲಿ ಎಂಬ ಹಾರೈಕೆಯಿಂದ ಈ ಗ್ರಂಥವನ್ನು ಪ್ರಕಟಿಸಿದ್ದೇನೆ.

## ಸುಜ್ಞಾನದ ಸ್ತುತಿ

**1** 'ಸುಜ್ಞಾನ' ಎಂಬುದೆಲ್ಲವೂ ಬರುವುದು
ಸರ್ವೇಶ್ವರನಿಂದಲೆ
ನಿತ್ಯಕ್ಕೂ ಅದಿರುವುದು ಆತನ ಬಳಿಯಲ್ಲೇ.
2 ಎಣಿಸಬಲ್ಲವನಾರು ಕಡಲ ಮರಳಿನ ಕಣಗಳನು
ಮಳೆಯ ಹನಿಗಳನು, ಅನಂತಕಾಲದ
ದಿನಗಳನು?
3 ಅಳೆಯಬಲ್ಲವನಾರು ಆಕಾಶದ ಎತ್ತರವನು,
ಭೂಮಿಯ ಉದ್ದಗಲವನು, ಪಾತಾಳದ
ಆಳವನು?
ಅಂತೆಯೇ ಸುಜ್ಞಾನದ ನೆಲೆಯನು?
4 ಸೃಷ್ಟಿಯಾಯಿತು ಸುಜ್ಞಾನ ಸಕಲಕ್ಕೂ
ಮೊದಲೇ
ವಿವೇಚನಾಗ್ರಹಿಕೆ ಕಾಲಕ್ಕೆ ಮುಂಚೆಯೇ.
5 ಉನ್ನತ ಸ್ವರ್ಗದ ದೇವರ ವಾಣಿಯೇ
ಸುಜ್ಞಾನದ ಮೂಲ
ಆತನ ಶಾಶ್ವತವಾದ ಆಜ್ಞೆಗಳೇ ಅದರ
ಮಾರ್ಗ.
6 ಬಯಲಾಯಿತೆ ಸುಜ್ಞಾನದ ಮೂಲ
ಯಾರಿಗಾದರೂ?
ಅರಿತಿರುವರೆ ಅದರ ಭವ್ಯ ಕಲ್ಪನೆಗಳನು
ಯಾರಾದರೂ?

7 ಪ್ರಕಟವಾಯಿತೆ ಸುಜ್ಞಾನದ ಅರಿವು
ಯಾರಿಗಾದರೂ?
ಗ್ರಹಿಸಿರುವರೆ ಅದರ ಮಾರ್ಗಗಳನು
ಯಾರಾದರೂ?
8 ಸುಜ್ಞಾನಿ ಒಬ್ಬನಿಹನು; ಆತನು ಅತ್ಯಂತ
ಭಯಂಕರನು
ಆತನೇ ಸಿಂಹಾಸನಾರೂಢನಾಗಿರುವ
ಸರ್ವೇಶ್ವರನು.
9 ಸುಜ್ಞಾನವನ್ನು ನಿರ್ಮಿಸಿದಾಗ ಸರ್ವೇಶ್ವರನೇ
ಅದನ್ನು ವೀಕ್ಷಿಸಿ ತೂಕಮಾಡಿದಾತ ಆತನೇ
ಅದನ್ನು ಸುರಿಸಿದನು ಸಮಸ್ತ ಸೃಷ್ಟಿ
ಕಾರ್ಯಗಳ ಮೇಲೆ.
10 ಸಕಲ ಜೀವಿಗಳಲಿ ನೆಲೆಸುವುದದು ಆತನ
ಇಚ್ಛೆಯಂತೆ
ದಯಪಾಲಿಸಿರುವನದನ್ನು ಹೇರಳವಾಗಿ
ಆತನನ್ನು ಪ್ರೀತಿಸುವವರಿಗೆ.

**ದೇವರಲ್ಲಿ ಭಯಭಕ್ತಿ**

11 ದೇವರಲ್ಲಿ ಭಯಭಕ್ತಿಯು ತರುತ್ತದೆ ಮಹಿಮೆ,
ಗೌರವ,
ಸಂತೋಷ, ಪರಮಾನಂದದ ಮುಕುಟ.
12 ದೇವಭಯದಿಂದ ಅರಳುತ್ತದೆ ಅಂತರಂಗ,
ಅದು ಬೀರುತ್ತದೆ ಹರ್ಷ ಹಾಗು
ದೀರ್ಘಾನಂದ.
13 ಸರ್ವೇಶ್ವರನಲ್ಲಿ ಭಯಭಕ್ತಿಯುಳ್ಳವನಿಗೆ
ಕಾದಿದೆ ಶುಭಾಂತ್ಯ
ಮರಣ ದಿನದಲ್ಲಿ ಲಭಿಸುವುದು
ದಯೆದಾಕ್ಷಿಣ್ಯ.
14 ದೇವರಲ್ಲಿ ಭಯಭಕ್ತಿಯೇ ಜ್ಞಾನದ ಉದಯ
ನಂಬಿಕಸ್ಥರಿಗೆ ಅದರ ಉಗಮಸ್ಥಾನ
ತಾಯಿಯ ಉದರ.
15 ಮಾನವರಲ್ಲಿದೆ ಅದರ ನಿತ್ಯ ನಿವಾಸ
ಅವರ ಸಂತಾನದ ನೆಚ್ಚಿಗೆಗೆ ಅದು ಯೋಗ್ಯ.
16 ದೇವ ಭಯಭಕ್ತಿಯಿಂದ ಜ್ಞಾನಸಿದ್ಧಿ
ಅದರ ಸತ್ಫಲಗಳಿಂದ ತೃಪ್ತಿ.
17 ತುಂಬುವುದದು ಭಕ್ತರ ಗೃಹಗಳನ್ನು
ಒಳ್ಳೇವಸ್ತುಗಳಿಂದ
ಅವರ ಉಗ್ರಾಣಗಳನ್ನು ತನ್ನ ಉತ್ಪನ್ನದಿಂದ.
18 ದೇವರಲ್ಲಿ ಭಯಭಕ್ತಿಯೇ ಸುಜ್ಞಾನದ
ಶಿರೋಮಣಿ

ಸೊಂಪಾಗಿ ಬೆಳೆಯುವುವು ಅದರಿಂದ
ಶಾಂತಿ ಸಮೃದ್ಧಿ.
19 ಸರ್ವೇಶ್ವರನು ವೀಕ್ಷಿಸಿ ಅದನ್ನು
ಪರೀಕ್ಷಿಸಿರುವನು
ಮಳೆಗರೆದನು ಕೌಶಲ್ಯವನು, ಗ್ರಹಿಕೆಯನು
ಅಧಿಕರಿಸಿಹನು ಅದನಪ್ಪಿಕೊಂಡವರ
ಗೌರವವನು.
20 ಸರ್ವೇಶ್ವರನಲಿ ಭಯಭಕ್ತಿಯೇ ಸುಜ್ಞಾನದ
ಮೂಲವು
ದೀರ್ಘಾಯುಸ್ಸೇ ಅದರ ಕೊಂಬೆಯು.
21 ಸರ್ವೇಶ್ವರನ ಭಯ ತೊಲಗಿಸುವುದು
ಪಾಪವನು
ಅದಿರುವ ಎಡೆಯಲ್ಲಿ ತಡೆಗಟ್ಟುವುದು
ಕೋಪವನು.
22 ನ್ಯಾಯಸಮ್ಮತವಾಗದು ದುಷ್ಟವಾದ ಕೋಪ
ಮನುಷ್ಯನ ಕೋಪದ ಸೆಳೆತವೇ ಪತನಕ್ಕೆ
ಕಾರಣ.
23 ಸಹನೆಯುಳ್ಳವನು ತಾಳಿಕೊಳ್ಳುವನು ಸೂಕ್ತ
ಕಾಲದವರೆಗೆ
ಚಿಲುಮೆಯಂತೆ ಉಕ್ಕುವುದು ಪರಮಾನಂದ
ಕೊನೆಗೆ.
24 ಮೌನವಾಗಿರುವನು ಅವನು ಸಮಯ
ಬರುವವರೆಗೆ
ಅವನೆಷ್ಟು ವಿವೇಕಿಯೆಂದು ನುಡಿಯುವುವು
ಭಕ್ತರ ಬಾಯಿಗಳೆ.

**ಸುಜ್ಞಾನ – ಸನ್ನಡತೆ**

25 ವಿವೇಕದ ದೃಷ್ಟಾಂತಗಳಿವೆ ಸುಜ್ಞಾನದ
ನಿಧಿಯಲಿ
ಪಾಪಿಗಾದರೋ ಭಕ್ತಿ ಕಾಣಿಸುವುದು
ಅಸಹ್ಯವಾಗಿ.
26 ದೈವಾಜ್ಞೆಗಳನು ನೀ ಪಾಲಿಸಿ ಸುಜ್ಞಾನವನು
ಬಯಸುವೆಯಾದರೆ
ದಯಪಾಲಿಸುವನು ಆತ ಅದನ್ನು
ಧಾರಾಳವಾಗಿ ನಿನಗೆ.
27 ಕಾರಣ, ದೇವರಲ್ಲಿ ಭಯಭಕ್ತಿಯೇ ಸುಜ್ಞಾನ,
ಸುಶಿಕ್ಷಣ
ಆತ ಮೆಚ್ಚುವಂಥದು ಪ್ರಾಮಾಣಿಕತೆ ಮತ್ತು
ವಿನಯ.
28 ದೇವರ ಭಯಭಕ್ತಿಯಲ್ಲಿ ನಿನಗಿರದಿರಲಿ
ಅಪನಂಬಿಕೆ

ದ್ವಂದ್ವ ಮನಸ್ಸಿನಿಂದ ಸೇರಬೇಡ
ಆತನ ಸನ್ನಿಧಿಗೆ.
29 ವರ್ತಿಸಬೇಡ ಜನರ ಮುಂದೆ ಕಪಟತನದಿಂದ
ಮಾತಾಡುವಾಗ ನಡೆದುಕೊ ಎಚ್ಚರದಿಂದ.
30 ಉಬ್ಬಿಕೊಳ್ಳಬೇಡ, ಬಿದ್ದು ಹೋದೀಯೇ
ಕೆಳಗೆ!
ಇದರಿಂದ ಅಪಮಾನವಾದೀತು ನಿನಗೆ.
31 ನಿನ್ನ ಗುಟ್ಟು ರಟ್ಟಾದೀತು ಜನರ ಮುಂದೆ
ನಿನ್ನನು ಒಗೆದುಬಿಟ್ಟಾರು ದೇವರು
ತಮ್ಮ ಜನರ ಮಧ್ಯೆ
ಏಕೆನೆ, ನೀನು ಸೇರಲಿಲ್ಲ ದೇವರ ಸನ್ನಿಧಿಗೆ
ಭಯಭಕ್ತಿಯಿಂದ
ನಿನ್ನ ಅಂತರಂಗ ತುಂಬಿಕೊಂಡಿತ್ತು
ಮೋಸ ವಂಚನೆಯಿಂದ.

### ದೇವರಲ್ಲಿ ಭರವಸೆ

**2** ಮಗನೇ, ದೇವರ ಸೇವೆಮಾಡಲು
ಬಯಸುವಿಯೋ?
ಹಾಗಾದರೆ ಶೋಧನೆಗಳನ್ನೆದುರಿಸಲು
ನಿನ್ನಾತ್ಮವನ್ನು ಸಿದ್ಧಪಡಿಸಿಕೊ!
2 ನಿನ್ನ ಹೃದಯದಲ್ಲಿರಲಿ ಪ್ರಾಮಾಣಿಕತೆ,
ಸ್ಥಿರತೆ
ಕಷ್ಟ ಬಂದಾಗ ನಿನಗಿರದಿರಲಿ ಚಂಚಲತೆ.
3 ಆತನನ್ನು ಸೇರಿಕೊಂಡಿರು; ಬಿಟ್ಟಗಲಬೇಡ
ಅಭಿವೃದ್ಧಿ ಹೊಂದುವೆ ಅಂತಿಮ ದಿನ.
4 ನಿನ್ನ ಮೇಲೆ ಬಂದುದೆಲ್ಲವನು ಸ್ವೀಕರಿಸು
ಬಡತನ ಬಂದರೂ ದೀರ್ಘಶಾಂತಿಯಿಂದಿರು.
5 ಬಂಗಾರದ ಪರೀಕ್ಷೆಯಾಗುವುದು ಬೆಂಕಿಯಲ್ಲಿ
ಆತನ ಭಕ್ತರ ಪರೀಕ್ಷೆ ಅವಮಾನದ
ಕುಲುಮೆಯಲ್ಲಿ.
6 ಆತನಲ್ಲಿಡು ಭರವಸೆ;
ನೆರವೀಯುವನಾತ ನಿನಗೆ,
ಸರಿಪಡಿಸಿಕೊ ನಿನ್ನ ನಡತೆಯನು;
ನಿರೀಕ್ಷೆಯಿಡು ಆತನಲೇ.
7 ದೇವರಲ್ಲಿ ಭಯಭಕ್ತಿಯುಳ್ಳವರೇ,
ಆತನ ಕರುಣೆಗಾಗಿ ಕಾದಿರಿ
ಸನ್ಮಾರ್ಗವನ್ನು ಬಿಟ್ಟು ತೊಲಗಬೇಡಿ;
ಬಿದ್ದು ಹೋದೀರಿ!
8 ದೇವರಿಗೆ ಭಯಪಡುವವರೇ, ಆತನಲ್ಲಿಡಿ
ಭರವಸೆ

ತಕ್ಕ ಪ್ರತಿಫಲ ದೊರಕುವುದು ನಿಮಗೆ ತಪ್ಪದೆ.
9 ದೇವರಿಗೆ ಭಯಪಡುವವರೇ, ಒಳಿತನ್ನು
ನಿರೀಕ್ಷಿಸಿರಿ
ನಿತ್ಯ ಸಂತೋಷವನ್ನೂ ಕೃಪೆಯನ್ನೂ
ಹಾರೈಸಿರಿ.
10 ಹಿಂದಿನವರನ್ನು ಗಮನಿಸಿರಿ; ತಂದುಕೊಳ್ಳಿರಿ
ಲಕ್ಷ್ಯಕೆ
ದೇವರನ್ನು ನಂಬಿದವರಿಗೆ ಆಗಿದ್ದುಂಟೆ ನಾಚಿಕೆ?
ಭಯಭಕ್ತಿಯಿಂದ ಬಾಳಿದವನನು ಆತ
ಕೈಬಿಟ್ಟದ್ದುಂಟೆ?
11 ಏಕೆನೆ, ಸರ್ವೇಶ್ವರನು ದಯಾಪೂರಿತನು,
ಕನಿಕರವುಳ್ಳವನು
ಪಾಪಗಳನ್ನು ಕ್ಷಮಿಸುವವನು, ಕಷ್ಟದಲ್ಲಿ
ರಕ್ಷಿಸುವವನು.
12 ಅಂಜುಬುರುಕರೇ, ದುರ್ಬಲರೇ,
ಕಪಟ ಪಾಪಿಗಳೇ, ಧಿಕ್ಕಾರ ನಿಮಗೆ !
13 ದುರ್ಬಲಮನಸ್ಸುಳ್ಳವನಿಗೆ ಧಿಕ್ಕಾರ!
ಆತನಿಗೆ ನಂಬಿಕೆಯಿಲ್ಲ; ಎಂತಲೇ ಆಶ್ರಯ
ದೊರಕುವುದಿಲ್ಲ.
14 ಸಹನಾಶಕ್ತಿ ಕಳೆದುಕೊಂಡವರೇ, ನಿಮಗೆ
ಧಿಕ್ಕಾರ !
ಏನು ಮಾಡುವಿರಿ ಆತ ನಿಮ್ಮನ್ನು
ಪರೀಕ್ಷಿಸುವಾಗ ?
15 ದೇವರಿಗೆ ಭಯಪಡುವವರು
ಆತನ ಮಾತುಗಳನ್ನು ಮೀರರು
ಆತನನ್ನು ಪ್ರೀತಿಸುವವರು
ಆತನ ಮಾರ್ಗಗಳನ್ನು ಅನುಸರಿಸುವರು.
16 ದೇವರಿಗೆ ಭಯಪಡುವವರು, ಅರಸುವರು
ಆತನಿಗೆ ಮೆಚ್ಚಿಕೆಯಾದುದನೇ
ಆತನನು ಪ್ರೀತಿಸುವವರು, ನಿರತರಾಗಿರುವರು
ಆತನ ನಿಯಮಗಳಲೇ.
17 ದೇವರಿಗೆ ಭಯಪಡುವವರು ಅಣಿಮಾಡುವರು
ತಮ್ಮ ಹೃದಯಗಳನು
ಆತನ ಮುಂದೆ ತಗ್ಗಿಸಿಕೊಳ್ಳುವರು
ತಮ್ಮ ಅಂತರಾತ್ಮವನು.
18 ಮಾನವನ ಕೈಗೆ ಸಿಕ್ಕಿಬೀಳದಂತೆ
ಒಪ್ಪಿಸಿಬಿಡೋಣ ನಮ್ಮನ್ನೇ ದೇವರಿಗೆ
ಕಾರಣ, ಆತನ ಮಹಿಮೆಯಿದ್ದಂತೆಯೇ
ಇರುವುದು ಆತನ ಕೃಪೆ.

## ಹೆತ್ತವರಿಗೆ ಮಾಡಬೇಕಾದ ಕರ್ತವ್ಯಗಳು

**3** ಮಕ್ಕಳೇ, ನಿಮ್ಮ ತಂದೆಯಾದ ನನ್ನ
ಮಾತನು ಕೇಳಿರಿ
ನೀವು ಸುರಕ್ಷಿತವಾಗಿರಲು ಅದರಂತೆ ನಡೆಯಿರಿ.
2 ಸರ್ವೇಶ್ವರ, ಮಕ್ಕಳಿಗಿಂತ ಮಿಗಿಲಾಗಿ ತಂದೆಗೆ
ಗೌರವ ನೀಡಿದ್ದಾರೆ
ಗಂಡುಮಕ್ಕಳ ಮೇಲೆ ತಾಯಿಗೆ
ಅಧಿಕಾರವನ್ನು ಅನುಗ್ರಹಿಸಿದ್ದಾರೆ.
3 ತಂದೆಯನ್ನು ಸನ್ಮಾನಿಸುವವನು ತನ್ನ ಪಾಪಕ್ಕೆ
ಪ್ರಾಯಶ್ಚಿತ್ತ ಮಾಡಿದವನಂತೆ;
4 ತಾಯಿಯನ್ನು ಗೌರವಿಸುವವನು,
ನಿಧಿ ಶೇಖರಿಸಿಟ್ಟುಕೊಂಡವನಂತೆ.
5 ತಂದೆಯನ್ನು ಗೌರವಿಸುವವನಿಗೆ ತನ್ನ ಸ್ವಂತ
ಮಕ್ಕಳಿಂದ ಆಗುವುದು ಸಂತೋಷ
ಅವನು ಪ್ರಾರ್ಥನೆ ಮಾಡುವಾಗಲೆಲ್ಲ
ದೊರಕುವುದವನಿಗೆ ಪ್ರತ್ಯುತ್ತರ.
6 ತಂದೆಯನು ಗೌರವಿಸುವವನು ಬದುಕುವನು
ಬಹುಕಾಲ
ಸರ್ವೇಶ್ವರನಿಗೆ ವಿಧೇಯನಾಗಿರುವವನು
ತಾಯಿಗೆ ಬರಮಾಡುವನು ಸಮಾಧಾನ.
7 ಅಂಥವನು ಸರ್ವೇಶ್ವರನಿಗೆ ಸೇವೆ
ಮಾಡುವಂತೆಯೆ
ಮಾಡುವನು ಸೇವೆ ಹೆತ್ತವರಿಗೆ.
8 ಹೆತ್ತವರನ್ನು ಸನ್ಮಾನಿಸು ನಿನ್ನ ನಡೆನುಡಿಗಳಿಂದ
ಹೀಗೆ ನಿನಗೆ ದೊರಕುವುದು ಆಶೀರ್ವಾದ
ಆತನಿಂದ.
9 ತಂದೆಯ ಆಶೀರ್ವಾದ ಮಕ್ಕಳ ಮನೆಯನ್ನು
ಸ್ಥಿರಗೊಳಿಸುತ್ತದೆ
ತಾಯಿಯ ಶಾಪ ಅವುಗಳ ಅಸ್ತಿವಾರವನ್ನೇ
ಕಿತ್ತುಹಾಕುತ್ತದೆ.
10 ಹಿಗ್ಗದಿರು, ತಂದೆಗೆ ಅವಮಾನವಾಗುವಾಗ
ತಂದೆಯ ಅವಮಾನ ನೀಡದು ನಿನಗೆ ಸನ್ಮಾನ.
11 ಮನುಷ್ಯನಿಗೆ ಗೌರವ ಲಭಿಸುವುದು ತಂದೆಯ
ಘನತೆಯಿಂದ
ಅವಮಾನದಲ್ಲಿ ಬದುಕುವ ತಾಯಿ, ಮಕ್ಕಳಿಗೆ
ಕಳಂಕ.
12 ಮಗನೇ, ನಿನ್ನ ಮುಪ್ಪಿನ ತಂದೆಗೆ
ಸಹಾಯಕನಾಗಿರು
ಅವನು ಬದುಕುವವರೆಗೆ ಅವನ ಮನಸ್ಸನು

ನೋಯಿಸದಿರು.
13 ತಾಳ್ಮೆಯಿಂದಿರು ಅವನ ಬುದ್ಧಿ ಮಂಕಾದಾಗ
ಅವನನ್ನು ಹೀನೈಸಬೇಡ ನೀನು
ಬಲವಂತನಾಗಿರುವಾಗ.
14 ತಂದೆಗೆ ಮಾಡಿದ ಉಪಶಮನ ಅಳಿದು
ಹೋಗದು
ಬದಲಿಗೆ, ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತವಾಗಿ
ಪರಿಣಮಿಸುವುದು.
15 ದೇವರು ಅದನ್ನು ಸ್ಮರಿಸಿಕೊಳ್ಳುವರು
ನೀನು ಕಷ್ಟಕ್ಕೆ ಗುರಿಯಾದಾಗ
ಬಿಸಿಲಿನಲ್ಲಿ ಮಂಜಿನಂತೆ, ಕರಗುವುವು
ನಿನ್ನ ಪಾಪಗಳೆಲ್ಲ.
16 ತಂದೆಯನ್ನು ಕೈಬಿಡುವವನು
ದೇವದೂಷಕನಂತಿರುವನು
ತಾಯಿಯ ಕೋಪ ಕೆರಳಿಸುವವನು ದೇವರಿಂದ
ಶಾಪಗ್ರಸ್ಥನು.

### ವಿನಮ್ರತೆ

17 ಮಗನೇ, ಕರ್ತವ್ಯ ನಿರ್ವಹನೆಯಲ್ಲಿ
ವಿನಯದಿಂದ ವರ್ತಿಸುವಿಯಾದರೆ,
ದೇವರಿಗೆ ಯೋಗ್ಯರಾದವರ ಪ್ರೀತಿಗೆ
ನೀನೂ ಪಾತ್ರನಾಗುವೆ.
18 ನೀನು ದೊಡ್ಡವನಾಗಿರುವಷ್ಟು ನಿನ್ನನ್ನೇ
ತಗ್ಗಿಸಿಕೊಂಡೆಯಾದರೆ
ದೇವರ ಸನ್ನಿಧಿಯಲ್ಲಿ ನಿನಗೆ ಗಿಟ್ಟುವುದು
ಕರುಣೆ.
19 ಗಣ್ಯರೂ ಗರ್ವಿಗಳೂ ಅನೇಕರಿರುವರು
ದೇವರು ತಮ್ಮ ಗುಟ್ಟನ್ನು ದೀನರಿಗೆ ಬಯಲು
ಮಾಡುವರು.
20 ಕಾರಣ, ಅಪೂರ್ವವಾದುದು ದೇವರ ಬಲ
ದೀನರಿಂದ ಆತನಿಗೆ ಸಲ್ಲುವುದು ಘನಮಾನ.
21 ನಿನ್ನ ಕೈಯಲ್ಲಾಗದ ಕೆಲಸಕ್ಕೆ ಕೈಹಾಕಬೇಡ
ನಿನ್ನ ಶಕ್ತಿಗೆ ನಿಲುಕದವುಗಳನ್ನು ಹುಡುಕ
ಬೇಡ.
22 ಆಲೋಚಿಸುತ್ತಿರು ನಿನಗೆ ಹೇಳಿದ ಕೆಲಸವನ್ನು
ಕುರಿತೇ
ಮುಚ್ಚುಮರೆಯಾದ ವಿಷಯಗಳು ಬೇಕಿಲ್ಲ
ನಿನಗೆ.
23 ಅಧಿಕ ಪ್ರಸಂಗಿಯಾಗಿ ಕೈ ಹಾಕಬೇಡ ನಾನಾ
ಕಾರ್ಯಗಳಿಗೆ

ನಿನಗೆ ತಿಳಿಯಪಡಿಸಿದವುಗಳೇ ಮೀರಿವೆ
ಮಾನವನ ಗ್ರಹಿಕೆಗೆ.
24 ಸ್ವಂತ ಅಭಿಪ್ರಾಯವನ್ನೆಚ್ಚಿಕೊಂಡು
ಹಿಡಿದಿಹರನೇಕರು ಅಡ್ಡಹಾದಿ
ಕೆಟ್ಟ ಭ್ರಮೆಯಿಂದ ತಪ್ಪಿ ಹೋಗಿದೆ
ಅವರ ಬುದ್ಧಿ.

### ಗರ್ವ

25 ಕಾಣಿಸುವುದಿಲ್ಲ ನಿನಗೆ, ಕಣ್ಣಿಲ್ಲದಿದ್ದರೆ
ತಿಳಿದವನಂತೆ ನಟಿಸಬೇಡ, ಅರಿವಿಲ್ಲದಿದ್ದರೆ.
26 ಅಪಾಯದೊಂದಿಗೆ ಆಟವಾಡುವಾತನು
ಬೀಳುವನು ಅದರಲ್ಲೇ
ಹಟಮಾರಿ ಕಡೆಗೆ ಅನುಭವಿಸುವನು ಕೇಡನ್ನೇ.
27 ಮೊಂಡುಹೃದಯಿಗೆ ತಪ್ಪದು ಕಷ್ಟದ ಭಾರ
ಪಾಪಾತ್ಮನು ಕೂಡಿಸುವನು ಪಾಪಕ್ಕೆ ಪಾಪ.
28 ಖಂಡನೆಯಿಂದ ಗುಣವಾಗದು ಗರ್ವಿಗೆ
ದುಷ್ಟತನದ ಬಳ್ಳಿ ಬೇರೂರಿದೆ ಅವನಲ್ಲೇ.
29 ವಿವೇಕ ಮನಸ್ಸುಳ್ಳವರು ಪಾಠ ಕಲಿಯುವರು
ಸಾಮತಿಗಳಿಂದ
ಲಕ್ಷ್ಯವಿಟ್ಟು ಕೇಳುವನು ಜ್ಞಾನಿ ಹೆಬ್ಬಯಕೆಯಿಂದ.

### ಬಡವರಿಗೆ ದಾನಧರ್ಮ

30 ಉರಿಯುವ ಬೆಂಕಿ ನಂದಿಹೋಗುವುದು
ನೀರಿನಿಂದ
ಪಾಪಕ್ಕೆ ಪ್ರಾಯಶ್ಚಿತ್ತ ದೊರಕುವುದು
ದಾನಧರ್ಮದಿಂದ.
31 ಉಪಕಾರ ತೀರಿಸುವವನಿಗೆ ಯೋಚನೆಯುಂಟು
ಭವಿಷ್ಯದಲ್ಲಿ
ಆಧಾರ ಪಡೆಯುವನವನು ಪತನದ
ವೇಳೆಯಲ್ಲಿ.

**4** ಮಗನೇ, ಬಡವನ ಜೀವನಾಧಾರವನ್ನು
ಕಸಿದುಕೊಳ್ಳಬೇಡ
ಗತಿಗೆಟ್ಟು ಬಂದವನನ್ನು ಬಹು ಸಮಯ
ಕಾಯಿಸಬೇಡ.
2 ಹಸಿದವರನ್ನು ಗೋಳಾಡಿಸಬೇಡ
ಕಷ್ಟದಲ್ಲಿರುವವರನ್ನು ಕಾಡಬೇಡ.
3 ನೊಂದ ಹೃದಯವನ್ನು ಇನ್ನೂ
ನೋಯಿಸಬೇಡ
ಗತಿಯಿಲ್ಲದವನಿಗೆ ದಾನಮಾಡಲು

ತಡಮಾಡಬೇಡ.
4 ಕುಗ್ಗಿದವನ ಮೊರೆಯನ್ನು ತಿರಸ್ಕರಿಸಬೇಡ
ಬಡವನಿಂದ ಮುಖವನ್ನು ತಿರುಗಿಸಿಕೊಳ್ಳಬೇಡ.
5 ಗತಿಗೆಟ್ಟು ಕೇಳುವವನಿಗೆ ಕಣ್ಣು ತಪ್ಪಿಸಬೇಡ
ನಿನ್ನನ್ನು ಶಪಿಸಲು ಅವನಿಗೆ ಆಸ್ಪದಕೊಡಬೇಡ.
6 ವೇದನೆಯಲ್ಲಿರುವ ಅವನು ನಿನ್ನನ್ನು
ಶಪಿಸಿಯಾನು
ಅವನ ಸೃಷ್ಟಿಕರ್ತನು ಅವನ ಮೊರೆಯನ್ನು
ಕೇಳಿಯಾನು.
7 ಪ್ರೀತಿಪಾತ್ರನಾಗಿರು ಸಭಿಕರಿಗೆ
ನಿನ್ನ ತಲೆಬಾಗಿಸು ಹಿರಿಯರಿಗೆ.
8 ಬಡವನಿಗೆ ಕಿವಿಗೊಡು
ಸನ್ನುಡಿಗಳಿಂದ ಅವನಿಗೆ ಸದುತ್ತರ ಕೊಡು.
9 ತುಳಿತಕ್ಕೀಡಾದವರನ್ನು ಪಾರುಮಾಡಲು
ಹೆದರಬೇಡ
ನ್ಯಾಯತೀರಿಸುವಾಗ ಚಂಚಲಚಿತ್ತನಾಗಿ
ಇರಬೇಡ.
10 ಅನಾಥರಿಗೆ ತಂದೆಯಂತಿರು
ವಿಧವೆಗೆ ಪತಿಯಂತೆ ಆಧಾರವಾಗಿರು.
ಆಗ ನೀನು ಪರಾತ್ಪರನಿಗೆ ಮಗನಾಗುವೆ
ತಾಯಿ ಪ್ರೀತಿಗಿಂತ ಹೆಚ್ಚಿನ ಪ್ರೀತಿಯನ್ನು
ಆತನಿಂದ ಪಡೆಯುವೆ.

**ಸುಜ್ಞಾನವೆಂಬ ಬೋಧಕಿ**

11 ಸುಜ್ಞಾನವೆಂಬಾಕೆ ಮಕ್ಕಳನ್ನು
ಉನ್ನತಿಗೆ ಏರಿಸುವಳು
ತನ್ನನ್ನು ಅರಸುವವರನ್ನು
ತನಗೇ ವಶಮಾಡಿಕೊಳ್ಳುವಳು.
12 ಆಕೆಯನ್ನು ಪ್ರೀತಿಸುವವನು,
ಪ್ರೀತಿಸುವುದು ಜೀವವನ್ನೇ
ತಡವಿಲ್ಲದೆ ಆಕೆಯನ್ನು ಅರಸುವವನು
ಪಡೆವನು ಅಮಿತಾನಂದವನ್ನೇ.
13 ಆಕೆಯನ್ನು ಬಿಗಿಯಾಗಿ ಹಿಡಿದುಕೊಳ್ಳುವವನು
ಆಗುವನು ಕೀರ್ತಿವಂತ
ಅವನು ಹೋದೆಡೆಯಲ್ಲೆಲ್ಲ ಲಭಿಸುವುದವನಿಗೆ
ದೇವರ ಆಶೀರ್ವಾದ.
14 ಆಕೆಗೆ ಸೇವೆಮಾಡುವವನು ಪರಮಪಾವನನನ್ನು
ಸೇವೆ ಮಾಡುತ್ತಾನೆ,
ಆಕೆಯನ್ನು ಪ್ರೀತಿಸುವವನನ್ನು ಸರ್ವೇಶ್ವರ
ಪ್ರೀತಿಸುತ್ತಾನೆ.

15 ಆಕೆಗೆ ಕಿವಿಗೊಡುವವರು
ಜನಾಂಗಗಳಿಗೆ ನ್ಯಾಯತೀರಿಸುವರು,
ಆಕೆಗೆ ಗಮನಕೊಡುವವರು
ಸುರಕ್ಷಿತವಾಗಿ ಬದುಕುವರು.
16 ಆಕೆಯನ್ನು ನೆಚ್ಚಿಕೊಂಡಿರುವವನು
ಪಡೆಯುವು ಆಕೆಯನ್ನು ಬಾಧ್ಯವಾಗಿ
ಆತನ ಪೀಳಿಗೆಯೂ ಆಕೆಯನ್ನು
ಇಟ್ಟುಕೊಳ್ಳುವುದು ತನ್ನ ಸ್ವಾಧೀನವಾಗಿ.
17 ಪ್ರಾರಂಭದಲ್ಲಿ ಆಕೆ ಮಾನವರೊಂದಿಗೆ
ಅಡ್ಡದಿಡ್ಡ ನಡೆಯುವಳು;
ಅವನಲ್ಲಿ ಅಳುಕು ಅಂಜಿಕೆಗಳನ್ನು
ಹುಟ್ಟಿಸುತ್ತಾ ಸಾಗುವಳು;
ಆತ್ಮದ ಬಗ್ಗೆ ನಂಬಿಕೆ ಹುಟ್ಟುವ ತನಕ
ಶಿಕ್ಷೆಯಿತ್ತು ಬಾಧಿಸುವಳು;
ನೀತಿನಿಯಮಗಳಿಂದ ಆತನನ್ನು
ಪರೀಕ್ಷಿಸುವಳು.
18 ತದನಂತರ ಅವನನ್ನು ನೇರವಾದ ಮಾರ್ಗಕ್ಕೆ
ತಿರುಗಿಸುವಳು
ಅವನಲ್ಲಿ ಸಂತೋಷವನ್ನು ಮೂಡಿಸುವಳು
ಅವನಿಗೆ ತನ್ನ ಗುಟ್ಟುಗಳನು ತಿಳಿಸುತ್ತಾ
ನಡೆಯುವಳು.
19 ಆಗಲೂ ಅವನು ಅಡ್ಡದಾರಿ ಹಿಡಿದರೆ,
ಅವನನ್ನು ತೊರೆದುಬಿಡುವಳು
ತಾನು ಮಾಡಿದ್ದನು ತಾನೇ ಉಣ್ಣಲೆಂದು
ಕೈಬಿಟ್ಟುಬಿಡುವಳು.

## ಆತ್ಮವಿಶ್ವಾಸ

20 ಸಂದರ್ಭನೋಡಿಕೊಂಡು, ದುರಾತ್ಮನ ಬಗ್ಗೆ
ಎಚ್ಚರದಿಂದಿರು;
ನಿನ್ನ ಅಂತರಾತ್ಮದ ವಿಷಯದಲಿ
ನಾಚಿಕೆಪಡದಿರು.
21 ಒಂದು ವಿಧವಾದ ನಾಚಿಕೆಯಿದೆ,
ಪಾಪವೇ ಅದರ ಫಲ;
ಮತ್ತೊಂದು ವಿಧವಾದ ನಾಚಿಕೆಯಿದೆ,
ಕೀರ್ತಿಕೃಪೆಗಳೇ ಅದರ ಫಲ.
22 ಇತರರ ಮುಖಸ್ತುತಿ ಮಾಡಿ
ನಿನಗೇ ಹಾನಿ ತಂದುಕೊಳ್ಳಬೇಡ,
ಮಿತಿಮೀರಿ ತಲೆಬಾಗಿ
ನೀನೇ ನೆಲಸಮವಾಗಬೇಡ.
23 ಪರರಿಗೆ ಹಿತವಾಗಿದ್ದಲ್ಲಿ,

ನಿನ್ನ ಮಾತನ್ನು ತಡೆಹಿಡಿಯಬೇಡ,
ನಿನ್ನಲ್ಲಿರುವ ಜ್ಞಾನ ಬೆಳಕನ್ನು ಅಡಗಿಸಬೇಡ.
24 ಮಾತಿನಿಂದ ಜ್ಞಾನ ಪ್ರಕಟವಾಗುತ್ತದೆ,
ಸನ್ನುಡಿಯಿಂದ ಶಿಕ್ಷಣ ವ್ಯಕ್ತವಾಗುತ್ತದೆ.
25 ಮಾತಾಡಬೇಡ ಎಂದೂ ಸತ್ಯಕ್ಕೆ ವಿರುದ್ಧವಾಗಿ,
ಬದಲಿಗೆ ನಾಚಿಕೆಪಡು ನಿನ್ನ ಅಜ್ಞಾನಕ್ಕಾಗಿ.
26 ನಿನ್ನ ಪಾಪಗಳನ್ನು ಒಪ್ಪಿಕೊಳ್ಳಲು ನಾಚಿಕೆ
ಪಡಬೇಡ,
ನದಿಯ ಓಟವನ್ನು ತಡೆಹಿಡಿಯಲು
ಪ್ರಯತ್ನಿಸಬೇಡ.
27 ಮೂಢನಿಗೆ ಅಡಿಯಾಳಾಗಬೇಡ,
ಬಲವಂತನ ಪಕ್ಷ ವಹಿಸಬೇಡ.
28 ಮರಣದ ಪರ್ಯಂತರ ಹೋರಾಡು
ಸತ್ಯಕ್ಕಾಗಿ
ದೇವರಾದ ಸರ್ವೇಶ್ವರ ಕಾದಾಡುವನು
ನಿನಗಾಗಿ.
29 ಮಾತಾಡುವುದಕ್ಕೆ ತವಕಪಡಬೇಡ,
ಕೆಲಸಮಾಡಲು ಮೈಗಳ್ಳನೂ ಉದಾಸೀನನೂ
ಆಗಬೇಡ.
30 ನಿನ್ನ ಮನೆಯಲ್ಲಿ ಹುಲಿಯಂತಿರಬೇಡ,
ನಿನ್ನ ಸೇವಕರ ಎದುರಿನಲ್ಲಿ
ಚಂಚಲನಾಗಿರಬೇಡ.
31 ತೆಗೆದುಕೊಳ್ಳುವುದರಲ್ಲಿ
ಕೈಯೊಡ್ಡುವವನಾಗಿರಬೇಡ,
ಹಿಂದಕ್ಕೆ ಕೊಡುವುದರಲ್ಲಿ
ಬಿಗಿಮುಷ್ಟಿಯಾಗಿರಬೇಡ.

### ಸಿರಿತನ ಮತ್ತು ಸೊಕ್ಕು

**5** ನಿನ್ನ ಆಸ್ತಿಯನ್ನೇ ನೆಚ್ಚಿಕೊಂಡಿರಬೇಡ,
ಅದರಲ್ಲೇ ಸಂತುಷ್ಟನಾಗಿರಬೇಡ.
2 ನಿನ್ನ ಇಚ್ಛಾಸಕ್ತಿಗಳಿಗೆ ಬಲಿಯಾಗಬೇಡ,
ನಿನ್ನ ಮನದಾಶೆಗೆ ಗುಲಾಮನಾಗಬೇಡ.
3 ಕೊಚ್ಚಿಕೊಳ್ಳಬೇಡ, ನನ್ನನ್ನು ಕಟ್ಟಿ
ಆಳುವವರಾರೆಂದು
ಸರ್ವೇಶ್ವರ ನಿನ್ನ ಸೊಕ್ಕನ್ನು
ಮುರಿದುಬಿಟ್ಟಾನು!
4 ಪಾಪಮಾಡಿದ ನನಗೇನಾಯಿತು?
ಎಂದುಕೊಳ್ಳಬೇಡ
ಏಕೆಂದರೆ ದೀರ್ಘಶಾಂತನು ಸರ್ವೇಶ್ವರ !

5 ಪಾಪಕ್ಕೆ ಪಾಪವನ್ನು ಕೂಡಿಸಿ ಹಾಕಿಕೊಳ್ಳಬೇಡ,
ದೇವರಿಂದ ಕ್ಷಮೆ ಪಡೆಯುವ ಬಗ್ಗೆ
ನಿರ್ಭಯದಿಂದಿರಬೇಡ.
6 ದೇವರು ಕರುಣಾಸಾಗರ ಎಂದು
ನೆಪಹೇಳಬೇಡ,
ಲೆಕ್ಕವಿಲ್ಲದ ಪಾಪಮಾಡಿದರೂ ಕ್ಷಮೆ
ದೊರಕುವುದೆಂದು ನೆನೆಯಬೇಡ.
ದಯೆಯಿದ್ದಂತೆ ಕೋಪವೂ ಆತನಲ್ಲಿದೆ
ಪಾಪಿಗಳ ಮೇಲೆ ಆತನ ಕೋಪ ಎರಗಲಿದೆ.
7 ಸರ್ವೇಶ್ವರನಿಗೆ ಅಭಿಮುಖನಾಗಲು
ತಡಮಾಡಬೇಡ,
'ಇಂದು, ನಾಳೆ' ಎಂದು ದಿನವನ್ನು
ಮುಂದೂಡಬೇಡ.
ಸರ್ವೇಶ್ವರನ ಕೋಪ ಎರಗಬಹುದು
ದಿಢೀರೆಂದು
ನೀ ಹಾಳಾಗಿ ಹೋಗುವೆ ಮುಯ್ಯಿತೀರಿಸುವ
ದಿನದಂದು.
8 ಮನಸ್ಸಿಡಬೇಡ ಅನ್ಯಾಯದ ಗಳಿಕೆಯಲಿ
ಅದರಿಂದ ಯಾವ ಲಾಭವಿರದು ವಿನಾಶದ
ದಿನದಲಿ.

## ಸರಳತೆ ಮತ್ತು ಸಂಯಮ

9 ತೂರಿಕೊಳ್ಳಬೇಡ ಕಂಡಕಂಡ ಗಾಳಿಗಳಲಿ
ಸಂಚರಿಸಬೇಡ ಕಂಡಕಂಡ ಹಾದಿಗಳಲಿ
(ಎರಡು ನಾಲಗೆಯುಳ್ಳ ಪಾಪಿಗಳು
ವರ್ತಿಸುವರು ಈ ಪರಿ).
10 ನಿನ್ನ ಮನವರಿಕೆ ಸ್ಥಿರವಾಗಿರಲಿ
ನಿನ್ನ ಮಾತು ಒಂದೇ ಆಗಿರಲಿ.
11 ಕಿವಿಗೊಡುವುದರಲ್ಲಿ ಚುರುಕಾಗಿರು,
ಉತ್ತರಕೊಡುವುದರಲ್ಲಿ ತಾಳ್ಮೆಯಿಂದಿರು.
12 ಗೊತ್ತಿದ್ದರೆ ನೆರೆಯವನ ಪ್ರಶ್ನೆಗೆ ಉತ್ತರಕೊಡು
ಇಲ್ಲದಿದ್ದರೆ ಬಾಯಿಮುಚ್ಚಿಕೊಂಡು
ಸುಮ್ಮನಿರು.
13 ಕೀರ್ತಿಯೂ ಅಪಕೀರ್ತಿಯೂ ಬರುವುದು
ಮಾತಿನಿಂದ,
ಮನುಷ್ಯ ಪತನವಾಗುವುದು ಅವನ
ನಾಲಗೆಯಿಂದ.
14 ಚಾಡಿಕೋರನೆಂದು ಕರೆಯಿಸಿಕೊಳ್ಳಬೇಡ,
ನಿನ್ನ ನಾಲಗೆಯಿಂದ ಇತರರನು ಬಲೆಯೊಡ್ಡಿ
ಬೀಳಿಸಬೇಡ.

ನಾಚಿಕೆ ಕಾದಿರುವುದು ಕಳ್ಳನಿಗೆ
ಕಠಿಣವಾದ ತೀರ್ಪಾಗುವುದು ಸುಳ್ಳನಿಗೆ.
15 ವಿಷಯ ಸಣ್ಣದಿರಲಿ, ದೊಡ್ಡದಿರಲಿ,
ತಿಳಿಗೇಡಿಯಾಗಿರಬೇಡ
ಗೆಳೆಯನಾಗಿರುವ ಬದಲು ಹಗೆಯಾಗಿರಬೇಡ.

**6** ಲಜ್ಜಾಪಮಾನಗಳು ಕೆಟ್ಟ ಹೆಸರಿನಿಂದ
ಬರುತ್ತವೆ.
ಎರಡು ನಾಲಗೆಯುಳ್ಳ ಪಾಪಿಗಳ ಗತಿ
ಇಂತಹುದೇ.
2 ಆಶಾಪಾಶದಿಂದ ಉಬ್ಬಿಹೋಗಬೇಡ
ಮನಸ್ಸು ಬಂದಂತೆ
ನಿನ್ನ ಹೃದಯವನ್ನು ಅವು ಸೀಳಿಬಿಟ್ಟಾವು
ಹೋರಿಯಂತೆ.
3 ನಿನ್ನ ಎಲೆಗಳನ್ನು ನೀನೇ ತಿಂದು ಫಲವನ್ನು
ಹಾಳುಮಾಡಿಕೊಳ್ಳುವೆ
ಅಂತಿಮವಾಗಿ, ಒಣಗಿದ ಬರಲುಮರದಂತೆ
ನಿಂತುಕೊಳ್ಳುವೆ.
4 ಯಾವನಲ್ಲಿ ಕೆಟ್ಟ ಮನಸ್ಸಿದೆಯೋ
ಅದು ಕೆಡಿಸುವುದು ಅವನನ್ನೆ
ಅವನನ್ನು ನಗೆಗೀಡು ಮಾಡುವುದದು
ವೈರಿಗಳ ಎದುರಿನಲ್ಲೆ.
5 ಸವಿನುಡಿ ಹೆಚ್ಚಿಸುವುದು ಸ್ನೇಹಿತರನ್ನು
ಸರಳ ನುಡಿ ಹೆಚ್ಚಿಸುವುದು ಸತ್ಕಾರವನ್ನು.
6 ಸಮಾಧಾನದಿಂದ ವರ್ತಿಸು ಹಲವರೊಡನೆ
ಸಲಹೆಗಾರ ಮಾತ್ರ ನಿನಗಿರಲಿ
ಸಾವಿರದಲ್ಲೊಬ್ಬನೇ.
7 ಸ್ನೇಹಬೆಳೆಸುವ ಮುನ್ನ ವ್ಯಕ್ತಿಯನ್ನು ಪರೀಕ್ಷಿಸು
ಯಾರನ್ನೂ ಕೂಡಲೇ ನಂಬಿಬಿಡಲು
ಅವಸರಪಡದಿರು.
8 ಸ್ನೇಹಬೆಳೆಸುವ ಗೆಳೆಯರಿದ್ದಾರೆ ಸಮಯ
ಸಾಧಕರಾಗಿ
ಕೈಕೊಡುವರವರು ನಿನಗೆ ಕಷ್ಟಕಾಲದಲಿ.
9 ಇಂದು ಗೆಳೆಯ, ನಾಳೆ ಶತ್ರು ಆಗುವವನೂ
ಇದ್ದಾನೆ
ಇಂಥವನು ನಿನ್ನೊಡನೆ ಜಗಳವಾಡಿ
ನಿನ್ನ ಮಾನಕಳೆಯುತ್ತಾನೆ.
10 ಸಹವಾಸ ಮಾಡುವವರಿದ್ದಾರೆ
ನಿನ್ನ ತಿಂಡಿ ತೀರ್ಥಕ್ಕಾಗಿ

ನಿನ್ನ ಸಂಗಡ ಇರುವುದಿಲ್ಲ ಕಷ್ಟದಲ್ಲಿ
ಸಹಾಯ ಮಾಡಲಿಕ್ಕಾಗಿ.
11 ನಿನ್ನ ಸುಖದ ದಿನಗಳಲ್ಲಿ
ಪ್ರಾಣಸ್ನೇಹಿತನಂತಿರುವನು
ನಿನ್ನ ಆಳುಹೋಳುಗಳನ್ನು ಬೆದರಿಸಿ
ಕೆಲಸಮಾಡಿಸಿಕೊಳ್ಳುವನು.
12 ನಿನ್ನ ದುಃಖದ ದಿನಗಳಲ್ಲಿ
ವಿರೋಧಿಯಾಗುವನು
ತನ್ನ ಮುಖವನ್ನು ನಿನ್ನಿಂದ ಮರೆಸಿಕೊಳ್ಳುವನು.
13 ನಿನ್ನ ವೈರಿಗಳಿಂದ ಆದಷ್ಟು ದೂರವಿರು
ನಿನ್ನ ಸಂಗಡಿಗರ ವಿಷಯದಲ್ಲಿ
ಎಚ್ಚರಿಕೆಯಿಂದಿರು.
14 ನಂಬಿಗಸ್ಥ ಗೆಳೆಯ,
ಸುರಕ್ಷಿತ ಆಶ್ರಯಗಿರಿಯಂತೆ
ಅಂಥವನು ಸಿಕ್ಕುವುದು ಸಂಪತ್ತಿನ
ನಿಧಿ ಸಿಕ್ಕಿದಂತೆ.
15 ಯಾವುದೂ ಸಾಟಿಯಿಲ್ಲ ನಂಬಿಕಸ್ಥ
ಗೆಳೆಯನಿಗೆ
ಅಷ್ಟಿಷ್ಟಲ್ಲ ಅಂಥವನ ಶ್ರೇಷ್ಠತೆ.
16 ನಂಬಿಕಸ್ಥ ಗೆಳೆಯ ಸಂಜೀವಿನಿಯಂತೆ
ಸಿಗುವನವನು ದೇವರಿಗೆ
ಭಯಪಡುವವನಿಗೆ.
17 ದೇವಭಕ್ತನು ಸ್ನೇಹಿತನನ್ನು ಆಪ್ತನನ್ನಾಗಿಸಿ
ಕೊಳ್ಳುವನು,
ಏಕೆಂದರೆ ತನ್ನಂತೆಯೇ ಅವನನ್ನು ಕಂಡು
ಭಾವಿಸುವನು.

### ಸುಜ್ಞಾನದಿಂದ ಕಲಿಕೆ

18 ಮಗನೇ, ತಾರುಣ್ಯದಿಂದಲೆ ಆರಿಸಿಕೊ
ಶಿಕ್ಷಣವನು,
ಕೂದಲು ನರೆಯುವತನಕ ಹೊಂದುವೆ
ಸುಜ್ಞಾನವನು.
19 ಜ್ಞಾನದ ಕೃಷಿಮಾಡು ಉತ್ತು ಬಿತ್ತುವ
ರೈತನಂತೆ
ಉತ್ತಮ ಫಲಕ್ಕಾಗಿ ಕಾದುಕೊಂಡಿರುವವನಂತೆ.
ಅದರ ಕೃಷಿ ಶ್ರಮವು ಅಲ್ಪ
ಅದರಿಂದ ಲಭಿಸುವ ಫಲವು ತ್ವರಿತ;
20 ನಿಷ್ಠೂರವಾಗಿರುವುದದು ಶಿಕ್ಷಣವಿಲ್ಲದವರಿಗೆ
ಅದರ ನೆಲೆ ಹಿಡಿಸದು ವಿವೇಕಹೀನರಿಗೆ;
21 ವಿವೇಕಹೀನನಿಗೆ ಭಾರವದು ಬಂಡೆಯಂತೆ

ತಳ್ಳಿಹಾಕುವನದನ್ನು ತಡಮಾಡದೆ.
22 ಶಿಕ್ಷಣ ತನ್ನ ಹೆಸರಿಗೆ ತಕ್ಕಂತೆ ಕಠಿಣ
ಆಗದದು ಎಲ್ಲರಿಗೂ ಪ್ರತ್ಯಕ್ಷ.
23 ಮಗನೇ, ಆಲಿಸು ನನ್ನ ನೀತಿಯ ನುಡಿಯನು
ಅಲ್ಲಗಳೆಯಬೇಡ ನನ್ನ ಸಲಹೆಯನು.
24 ನಿನ್ನ ಕಾಲುಗಳಿಗೆ ಕಟ್ಟು ಸುಜ್ಞಾನದ
ಸಂಕೋಲೆಗಳನು
ನಿನ್ನ ಕೊರಳಲ್ಲಿ ಧರಿಸಿಕೊ
ಅದರ ಸರಪಣಿಯನು.
25 ಹೊತ್ತುಕೊ ಅದನ್ನು ನಿನ್ನ ಹೆಗಲಮೇಲೆ
ಮರುಗಬೇಡ ಅದರ ಬಂಧನಗಳಿಗೆ.
26 ಅದರ ನೆರೆ ಸೇರು ಪೂರ್ಣ ಹೃದಯದಿಂದ
ಅದರ ಸದಾಚಾರವನ್ನು ಕಾಪಾಡು
ಪೂರ್ಣಶಕ್ತಿಯಿಂದ.
27 ವೇದ್ಯವಾಗುವುದದು ಲವಲವಿಕೆಯಿಂದ
ಹುಡುಕಿದರೆ
ಕಳೆದುಕೊಳ್ಳಬೇಡ ಅದು ನಿನ್ನ ಕೈವಶವಾದ
ಮೇಲೆ.
28 ಕೊನೆಯಲ್ಲಿ ದೊರಕುವುದು ನಿನಗೆ
ಅದರಿಂದ ವಿಶ್ರಾಂತಿ
ಆಗ ಅದು ಪರಿಣಮಿಸುವುದು ನಿನಗೆ
ಆನಂದವಾಗಿ.
29 ಅದರ ಸಂಕೋಲೆಗಳು ಇರುವುವು ನಿನಗೆ
ಬಲವಾದ ಕವಚದಂತೆ
ಅದರ ಎಳೆಯ ಕೊಂಬೆಗಳು ಶೋಭಾಯಮಾನ
ನಿಲುವಂಗಿಗಳಂತೆ.
30 ಅದರ ಮೇಲಿರುವುದು ಚಿನ್ನದ ಆಭರಣ
ಅದರ ಕಟ್ಟು ಪಟ್ಟಿಗಳೆಲ್ಲವು ನೀಲಾಂಬರ.
31 ಧರಿಸಿಕೊಳ್ಳುವೆ ನೀನದನ್ನು ಸುಂದರ
ನಿಲುವಂಗಿಯಂತೆ
ಹಾಕಿಕೊಳ್ಳುವೆ ಅದನ್ನು ಸಂತಸದ ಹಾರದಂತೆ.
32 ಮಗನೇ, ಶಿಕ್ಷಣ ನಿನಗೆ ಲಭ್ಯ,
ನೀನು ಇಷ್ಟಪಟ್ಟರೆ;
ಜಾಣನಾಗುವೆ ನೀನು ಮನಸ್ಸಿಟ್ಟು ಕಲಿತರೆ.
33 ಪಡೆದುಕೊಳ್ಳುವೆ ಅದನ್ನು ಆಲಿಸಲು ಒಲಿದರೆ
ಬುದ್ಧಿವಂತನಾಗುವೆ ಅದಕ್ಕೆ ಕಿವಿಗೊಟ್ಟರೆ
34 ಹಿರಿಯರ ಗುಂಪಿಗೆ ಸೇರಿಕೊಂಡಿರು
ಜ್ಞಾನಿಯಾದವನಿಗೆ ಅಂಜಿಕೊಂಡಿರು.
35 ಸದಾ ಸಿದ್ಧನಾಗಿರು ಒಳ್ಳೆಯ ಮಾತುಕತೆ
ಕೇಳಲು

ನಿನ್ನ ಕಿವಿಗೆ ಬೀಳದೆ ಹೋಗದಿರಲಿ
ಜ್ಞಾನೋಕ್ತಿಗಳು.
36 ಜ್ಞಾನಿಯನ್ನು ಕಂಡಾಗ, ಅವನಲ್ಲಿಗೆ
ಹೋಗಿ ಬಾ ಲವಲವಿಕೆಯಿಂದ,
ಅವನ ಬಾಗಿಲ ಮೆಟ್ಟಲುಗಳು ಸವೆದುಹೋಗಲಿ
ನಿನ್ನ ಪಾದಗಳಿಂದ.
37 ನಿನ್ನ ಮನಸ್ಸು ನಾಟಿರಲಿ ಸರ್ವೇಶ್ವರನ
ವಿಧಿನಿಯಮಗಳ ಮೇಲೆ
ನಿರಂತರ ಮನನ ಮಾಡುತ್ತಿರು ಆತನ
ಆಜ್ಞೆಗಳನ್ನೆ.
ಸ್ಥಿರಗೊಳಿಸುವನಾತ ನಿನ್ನ ಹೃದಯವನ್ನು
ದಯಪಾಲಿಸುವನಾತ ನೀನಾಶಿಸುವ
ಜ್ಞಾನಾಮೃತವನ್ನು.

**ಹಲವಿಧ ಬುದ್ಧಿಮತಿಗಳು**

**7** ಕೆಟ್ಟದ್ದನ್ನು ಬಿಟ್ಟುಬಿಡು;
ನಿನಗೆ ಯಾವ ಕೇಡೂ ತಟ್ಟದು.
2 ದುಷ್ಟನಿಂದ ದೂರವಿರು;
ಬಿಟ್ಟುಹೋಗುವನವನು ನಿನ್ನನು.
3 ಮಗನೇ, ಬಿತ್ತನೆ ಮಾಡಬೇಡ
ಅಧರ್ಮವೆಂಬ ನೇಗಿಲು ಗೆರೆಗಳಲಿ
ಆಗ ಕೊಯಿಲು ಮಾಡುವುದಿಲ್ಲ
ಏಳರಷ್ಟು ಅದರಲಿ.
4 ಸರ್ವೇಶ್ವರನಿಂದ ಉನ್ನತ ಪದವಿಯನ್ನು
ಹುಡುಕಬೇಡ
ಅರಸನಿಂದ ಗೌರವಸ್ಥಾನವನ್ನು ಅರಸಬೇಡ.
5 ನೀತಿವಂತನೆಂದು ತೋರಿಸಿಕೊಳ್ಳಬೇಡ
ಸರ್ವೇಶ್ವರನ ಸನ್ನಿಧಿಯಲಿ
ನಿನ್ನ ಪಾಂಡಿತ್ಯಕ್ಕಾಗಿ ಕೊಚ್ಚಿಕೊಳ್ಳಬೇಡ
ಅರಸನ ಎದುರಿನಲಿ.
6 ಪ್ರಯತ್ನಪಡಬೇಡ ನ್ಯಾಯಾಧೀಶನಾಗಲು
ನಿನ್ನ ಶಕ್ತಿ ಸಾಲದಿರಬಹುದು
ಅಧರ್ಮವನ್ನು ನಿರ್ಮೂಲಗೊಳಿಸಲು.
7 ಊರಜನರ ವಿರುದ್ಧ ದ್ರೋಹ ಮಾಡಬೇಡ
ಜನರ ಎದುರಿನಲ್ಲಿ ನಿನ್ನನ್ನೇ ತಗ್ಗಿಸಿಕೊಳ್ಳಬೇಡ.
8 ಕೂಡಿಸಬೇಡ ಪಾಪಕ್ಕೆ ಪಾಪ,
ಒಂದಕ್ಕಾದರೂ ತಪ್ಪದು ನಿನಗೆ ದಂಡ.
9 ಹೇಳಿಕೊಳ್ಳಬೇಡ ನೀನರ್ಪಿಸುವ ಕಾಣಿಕೆಗಳನ್ನು
ದೇವನೀಕ್ಷಿಸುವನೆಂದು

ಮಹೋನ್ನತನಿಗೆ ನೀನರ್ಪಿಸುವ ಬಲಿಗಳನ್ನು
ಆತ ಸ್ವೀಕರಿಸುವನೆಂದು.
10 ಪ್ರಾರ್ಥನೆ ಮಾಡುವಾಗ ಬೇಸರಪಡಬೇಡ
ದಾನಧರ್ಮ ಮಾಡುವುದನ್ನು
ಅಲಕ್ಷಿಸಬೇಡ.
11 ದುಃಖಿತರನ್ನು ಕಂಡು ಹಾಸ್ಯ ಮಾಡಬೇಡ
ತಗ್ಗಿಸುವಾತನಿಗೆ ಏರಿಸಲೂ ಸಾಧ್ಯ.
12 ಸುಳ್ಳು ಕಲ್ಪಿಸಬೇಡ ಸಹೋದರನಿಗೆ
ವಿರೋಧವಾಗಿ
ಅಂತೆಯೇ ನಿನ್ನ ಸ್ನೇಹಿತನಿಗೆ ವಿರೋಧವಾಗಿ.
13 ಸುಳ್ಳು ಎಂಥದ್ದೇ ಇರಲಿ, ಅದರ ಹವ್ಯಾಸಬೇಡ
ಹಿತವಾಗದು ನಿನಗೆ ಇಂಥ ಹವ್ಯಾಸದಿಂದ.
14 ಮಿತಿಮೀರಿ ಮಾತಾಡಬೇಡ ಹಿರಿಯರ ಮಧ್ಯೆ
ಪ್ರಾರ್ಥನೆಯ ಸಮಯದಲ್ಲಿ ಬೇಕಿಲ್ಲ ಮಾತಿನ
ಪುನರಾವರ್ತನೆ.
15 ಹೀನೈಸಬೇಡ ಕಾಯಕಷ್ಟವನು,
ಒಕ್ಕಲುತನವನು
ನೇಮಿಸಿರುವನು ಅವುಗಳನು ಪರಾತ್ಪರನು.
16 ಸೇರಿಕೊಳ್ಳಬೇಡ ಪಾಪಾತ್ಮರ ಗುಂಪಿಗೆ
ದಂಡನೆ ಬಂದೇ ತೀರುವುದು ಅಧರ್ಮಿಗಳಿಗೆ.
17 ನಿನ್ನನ್ನೇ ಬಹಳವಾಗಿ ತಗ್ಗಿಸಿಕೊ
ದೇವಕೋಪಾಗ್ನಿ ವಿಳಂಬವಾಗದೆಂದು
ನೆನಸಿಕೊ.

ಇತರರೊಂದಿಗೆ ಒಡನಾಟ
18 ಸ್ನೇಹಿತನಿಗೆ ಪ್ರತಿಯಾಗಿ ಇನ್ನಾವ ಆಸ್ತಿಯನ್ನೂ
ಆರಿಸಿಕೊಳ್ಳಬೇಡ
ನಂಬಿಕಸ್ಥ ಸಹೋದರನಿಗೆ ಬದಲು ಓಫೀರಿನ
ಚಿನ್ನವನ್ನೂ ಆಯ್ದುಕೊಳ್ಳಬೇಡ.
19 ಬುದ್ಧಿ ಸುಗುಣಗಳಿಂದ ಕೂಡಿದ ಹೆಂಡತಿಯನು
ಕಳೆದುಕೊಳ್ಳಬೇಡ
ಅವಳ ಶೀಲ ಬಂಗಾರಕ್ಕಿಂತಲೂ ಅಮೂಲ್ಯ.
20 ಕೇಡು ಬಗೆಯಬೇಡ ನಂಬಿಕೆಯಿಂದ
ದುಡಿಯುವ ಮನೆಯಾಳಿಗೆ,
ತನ್ನನ್ನೇ ಸಂಪೂರ್ಣವಾಗಿ ಒಪ್ಪಿಸಿಕೊಂಡ
ಕೂಲಿಯಾಳಿಗೆ.
21 ಒಳ್ಳೆಯ ಮನೆಯಾಳನ್ನು ಕಾಣು ಪ್ರೀತಿಯಿಂದ
ಅವನ ಬಿಡುಗಡೆಯ ಬಗ್ಗೆ ವರ್ತಿಸದಿರು
ವಂಚನೆಯಿಂದ.
22 ನಿನಗೆ ದನಕರುಗಳುಂಟೋ? ಇದ್ದರೆ

ಅವುಗಳ ಕಡೆ ಲಕ್ಷ್ಯವಿರಲಿ
ನಿನಗೆ ಪ್ರಯೋಜನಕರವಾಗಿದ್ದರೆ
ಅವು ನಿನ್ನ ಬಳಿಯಲ್ಲೇ ಇರಲಿ.

## ಮಡದಿ ಮಕ್ಕಳು

23 ನಿನಗೆ ಮಕ್ಕಳಿದ್ದಾರೆಯೇ? ಶಿಕ್ಷಣ ನೀಡು
ಅವರಿಗೆ
ಅವರನ್ನು ಸ್ವಾಧೀನದಲ್ಲಿಟ್ಟುಕೊ
ಬಾಲ್ಯದಿಂದಲೆ.
24 ನಿನಗೆ ಹೆಣ್ಣುಮಕ್ಕಳಿದ್ದಾರೆಯೇ? ಅವರ
ದೇಹವನು ಕಾಪಾಡು
ಹೆಚ್ಚಿನ ಮಮತೆಯಿಂದ ಸ್ವೇಚ್ಛೆಯಾಗಿರಲು
ಬಿಡದಿರು.
25 ನಿನ್ನ ಮಗಳನ್ನು ಮದುವೆ ಮಾಡಿಕೊಡು;
ಅದೊಂದು ಮುಖ್ಯ ಕಾರ್ಯ ಮುಗಿದಂತೆ.
ಆದರೆ ಆಕೆಯನ್ನು ಕೊಡಬೇಕು
ಬುದ್ಧಿವಂತನಾದವನಿಗೆ.
26 ನಿನ್ನ ಮೆಚ್ಚಿಗೆಗೆ ತಕ್ಕ ಹೆಂಡತಿಯಿದ್ದರೆ,
ಅವಳನ್ನು ಓಡಿಸಬೇಡ
ನಿನಗೆ ಪ್ರೀತಿಯಿಲ್ಲದೆ ಹೋದರೆ, ಅಂಥವಳನ್ನು
ನಂಬಬೇಡ.

## ಹೆತ್ತವರು

27 ಹೃತ್ಪೂರ್ವಕವಾಗಿ ತಂದೆಯನ್ನು ಸನ್ಮಾನಿಸು
ತಾಯಿಯ ಪ್ರಸವವೇದನೆಯನ್ನು
ಮರೆಯದಿರು.
28 ನೆನಪಿರಲಿ, ನೀನು ಜನ್ಮತಾಳಿದ್ದು
ಅವರಿಂದಲೇ ಅಲ್ಲವೆ?
ನಿನಗೆ ಅವರು ಮಾಡಿದ್ದಕ್ಕೆ ಪ್ರತಿಯಾಗಿ
ಏನು ಈಡು ಕೊಡಬಲ್ಲೆ?

## ಯಾಜಕರು

29 ಪೂರ್ಣಹೃದಯದಿಂದ ದೇವರಿಗೆ ಭಯಪಡು
ಆತನ ಯಾಜಕರಿಗೆ ಸನ್ಮಾನ ಮಾಡು.
30 ಪೂರ್ಣಶಕ್ತಿಯಿಂದ ಪ್ರೀತಿಸು
ನಿನ್ನ ಸೃಷ್ಟಿಕರ್ತನನು
ಬಿಟ್ಟು ಹೋಗಬೇಡ ಆತನ ದಾಸರನು.
31 ದೇವರಿಗೆ ಭಯಪಡು;
ಯಾಜಕರಿಗೆ ಮರ್ಯಾದೆ ಕೊಡು.
ಪ್ರಥಮ ಫಲ, ಪ್ರಾಯಶ್ಚಿತ್ತ ಬಲಿ,

ತೊಡೆಯ ಕಾಣಿಕೆ
ಶುದ್ಧೀಕರಣ ಬಲಿ, ಪವಿತ್ರ ವಸ್ತುಗಳ
ಪ್ರಥಮ ಕೊಡುಗೆ
ಇವುಗಳನ್ನು ಸಲ್ಲಿಸು ಆ ಯಾಜಕರಿಗೆ
ನಿನಗೆ ವಿಧಿಸಲ್ಪಟ್ಟ ಮೇರೆಗೆ.

**ದೀನ-ದಲಿತರು**

32 ಬಡವನಿಗೆ ಕೊಡುಗೆ ನೀಡು ಧಾರಾಳವಾಗಿ
ಈ ಪರಿ ಆಶೀರ್ವಾದ ಪಡೆವೆ ಪರಿಪೂರ್ಣವಾಗಿ.
33 ದಾನಮಾಡು ಎಲ್ಲ ಜೀವಾತ್ಮಗಳಿಗೆ
ದಯೆತೋರದೆ ಇರಬೇಡ ಸತ್ತವನಿಗೆ.
34 ದೂರ ಹೋಗಬೇಡ ಅಳುವವರಿಂದ
ದುಃಖಪಡು ದುಃಖಿಸುವವರ ಸಂಗಡ.
35 ಆಲಸ್ಯವಾಗಬಾರದು ವ್ಯಾಧಿಗ್ರಸ್ತರಿಗೆ ನೀಡುವ
ಭೇಟಿಯಿಂದ
ಪ್ರೀತಿಪಾತ್ರನಾಗುವೆ ನೀನು
ಇಂಥ ಸತ್ಕಾರ್ಯಗಳಿಂದ.
36 ನಿನ್ನ ಅಂತ್ಯವನು ಸ್ಮರಿಸಿಕೊ
ಎಲ್ಲ ವ್ಯವಹಾರಗಳಲ್ಲು
ಆಗ ನೀನು ಪಾಪದಲ್ಲಿ ಬೀಳುವುದಿಲ್ಲ
ಎಂದಿಗು.

**ಸಾಮಾನ್ಯ ಜಾಣತನ**

**8** ವಾದಿಸಬೇಡ ಬಲಶಾಲಿಯೊಂದಿಗೆ
ಸಿಕ್ಕಿಬಿದ್ದೀಯೆ ಅವನ ಕೈಯೊಳಗೆ !
2 ಸಿರಿವಂತನೊಂದಿಗೆ ಹೋರಾಡಬೇಡ
ನಿನಗಿಂತಲೂ ಅವನಿಗಿದೆ ಹೆಚ್ಚಾದ ಐಶ್ವರ್ಯ.
ಚಿನ್ನವು ಅನೇಕರನ್ನು ವಿನಾಶಕ್ಕೆ ಒಯ್ದಿದೆ
ಅಂತೆಯೇ ಅರಸರ ತಲೆಯನ್ನೂ ಕೆಡಿಸಿದೆ.
3 ಬಾಯಿಬಡುಕನೊಂದಿಗೆ ವಾದಿಸಬೇಡ
ಉರಿವ ಅವನ ಬೆಂಕಿಗೆ ಎಣ್ಣೆ ಹೊಯ್ಯಬೇಡ.
4 ಕುಚೋದ್ಯ ಮಾಡಬೇಡ ಉದ್ಧಟನೊಂದಿಗೆ
ಅವನು ನಿನ್ನ ಹಿರಿಯರನ್ನೂ ಈಡು
ಮಾಡಿಯಾನು ಅವಮಾನಕ್ಕೆ.
5 ಹಂಗಿಸಬೇಡ ಪಾಪಕ್ಕೆ ವಿಮುಖರಾಗುವವರನ್ನು
ಮರೆಯದಿರು ನಾವೆಲ್ಲ ಶಿಕ್ಷೆಗೆ
ಪಾತ್ರರೆಂಬುದನು.
6 ಮುಪ್ಪಿನವರನ್ನು ಅವಮಾನಪಡಿಸದಿರು
ನಮ್ಮಲ್ಲಿಯೂ ಕೆಲವರು ಮುದುಕರಾಗಬಹುದು!

7 ಸತ್ತವನನ್ನು ಕಂಡು ಸಂತೋಷಪಡಬೇಡ
ನಾವೆಲ್ಲರೂ ಸಾಯಬೇಕೆಂಬುದನ್ನು
ಮರೆಯಬೇಡ
8 ಅಲಕ್ಷ್ಯಮಾಡಬೇಡ ಬುದ್ಧಿವಂತರ
ಸಂಭಾಷಣೆಯನು
ಮನನಮಾಡಿಕೊ ಅಂಥವರ
ಜ್ಞಾನೋಕ್ತಿಗಳನು
ಏಕೆನೆ, ಗಳಿಸುವೆ ಅವರಿಂದ ಸುಬೋಧೆಯನು
ಕಲಿಯುವೆ ಘನವಂತರಿಗೆ ಸೇವೆಮಾಡುವ
ರೀತಿಯನು.
9 ಹಿರಿಯರ ಮಾತುಕತೆಗಳನ್ನು ಅಲಕ್ಷಿಸಬೇಡ,
ಅವರು ಸಹ ಕಲಿತುಕೊಂಡರಲ್ಲವೆ
ತಮ್ಮ ಹಿರಿಯರಿಂದ?
10 ಪಾಪಿಯ ಬೆಂಕಿಯನ್ನು ಹೊತ್ತಿಸದಿರು
ಅವನ ಕಿಚ್ಚಿನಲ್ಲಿ ಬೆಂದು ಹೋಗದಿರು.
11 ಸಿಟ್ಟಿನಿಂದ ಎದ್ದೇಳಬೇಡ
ಧರ್ಮನಿಂದಕನ ಎದುರಿನಲ್ಲಿ
ಅವನು ನಿನ್ನ ಹಿಡಿಯಲು ಹವಣಿಸಿಯಾನು
ಮಾತಿನಲ್ಲಿ.
12 ಸಾಲ ಕೊಡಬೇಡ ನಿನಗಿಂತ ಬಲಿಷ್ಠನಿಗೆ
ಕೊಟ್ಟರೆ, ಕಳಕೊಂಡವನಂತಿರುವೆ.
13 ಶಕ್ತಿಮೀರಿ ಹೊಣೆಯಾಗಿ ನಿಲ್ಲಬೇಡ ಯಾರಿಗೂ
ನಿಂತರೆ ಸಿದ್ಧನಾಗಿರು ಆ ಸಾಲವನ್ನು
ತೀರಿಸಲು.
14 ದಾವಾ ಹಾಕಬೇಡ ನ್ಯಾಯಾಧಿಪತಿಗೆ
ವಿರುದ್ಧವಾಗಿ
ಅವನ ಸ್ಥಾನನೋಡಿ, ತೀರ್ಪು ಕೊಟ್ಟಾರು
ಅವನ ಪರವಾಗಿ.
15 ಪ್ರಯಾಣಮಾಡಬೇಡ ದುಡುಕುವ
ವ್ಯಕ್ತಿಯೊಂದಿಗೆ
ಅವನು ಗುರಿಪಡಿಸಿಯಾನು ನಿನ್ನನ್ನು ದುಃಖಕೆ;
ಅವನು ಮಾಡುವನು ತನ್ನ ಮನಸ್ಸಿಗೆ ಬಂದಂತೆ
ಅವನ ಅವಿವೇಕತನದಿಂದ ನೀನೂ
ಹಾಳಾಗುವೆ ಅವನೊಂದಿಗೆ.
16 ಕಲಹ ಮಾಡಬೇಡ ಕೋಪಿಷ್ಠನೊಂದಿಗೆ
ಏಕಾಂತದಲಿ ಹೋಗಬೇಡ ಅವನ ಜೊತೆಗೆ;
ರಕ್ತಕ್ಕೆ ಬೆಲೆಯಿಲ್ಲ ಅವನ ದೃಷ್ಟಿಯಲಿ
ನಿನ್ನನ್ನು ಬಡಿದುಬಿಟ್ಟಾನು ನೆರವೇ ಇಲ್ಲದ
ಸ್ಥಳದಲಿ.
17 ಮೂರ್ಖನೊಂದಿಗೆ ಸಮಾಲೋಚನೆ

ಮಾಡಬೇಡ
ಏಕೆಂದರೆ ಅವನು ಗುಟ್ಟನ್ನು ಮುಚ್ಚಿಡಲಾರ.
18 ಗುಟ್ಟಿನ ಕೆಲಸ ಮಾಡಬೇಡ ಅಪರಿಚಿತನ
ಮುಂದೆ
ನಾಳೆ ಏನು ಮಾಡಿಯಾನೆಂಬುದು ನೀನರಿಯೆ.
19 ನಿನ್ನ ಹೃದಯವನ್ನು ತೆರೆಯಬೇಡ
ಕಂಡಕಂಡವರಿಗೆ
ಅವರು ಪ್ರತೀಕಾರ ಮಾಡಿಯಾರು ನಿನಗೆ.

### ಮಹಿಳೆಯರು

**9** ಸಂಶಯಬೇಡ ನಿನ್ನ ಹೆಂಡತಿಯ ಬಗ್ಗೆ
ನಿನ್ನ ವಿರುದ್ಧ ಕೆಟ್ಟಪಾಠ ಕಲಿಸಬೇಡ
ಅವಳಿಗೆ.
2 ನಿನ್ನ ಪ್ರಾಣವನ್ನು ಒಪ್ಪಿಸಬೇಡ ಸ್ತ್ರೀಯ ಕೈಗೆ
ತುಳಿದುಬಿಟ್ಟಾಳು ಅವಳು ನಿನ್ನನ್ನೆ.
3 ಹೋಗಬೇಡ ವೇಶ್ಯೆಯ ಬಳಿಗೆ
ಸಿಕ್ಕಿಬಿದ್ದೀಯೆ ಅವಳ ಪಾಶದಲ್ಲೆ.
4 ಗಾಯಕಿಯ ಸಂಗವನ್ನು ಬೆಳೆಸದಿರು
ಅವಳ ಯತ್ನಗಳಿಗೆ ಸಿಕ್ಕಿಬೀಳದಿರು.
5 ಯುವತಿಯ ಮೇಲೆ ಕಣ್ಣಿಡಬೇಡ
ಅವಳ ನಿಮಿತ್ತ ತೆರಬೇಕಾದೀತು ದಂಡ.
6 ಜಾರಸ್ತ್ರೀಯರ ಮೇಲೆ ಮನಸ್ಸಿಡಬೇಡ
ಹೀಗೆ ಸೊತ್ತೆಲ್ಲವನ್ನೂ ಕಳೆದುಕೊಳ್ಳಬೇಡ.
7 ಊರ ಬೀದಿಗಳಲಿ ನಡೆವಾಗ ಅತ್ತಿತ್ತ ದೃಷ್ಟಿ
ಬೀರದಿರು
ಅಲ್ಲಿನ ನಿರ್ಜನ ಸ್ಥಳಗಳಲ್ಲಿ ತಿರುಗಾಡದಿರು.
8 ನಿನ್ನ ದೃಷ್ಟಿಯನ್ನು ಹೊರಳಿಸಿಬಿಡು
ಚೆಲುವೆಯಿಂದ
ಪರಸ್ತ್ರೀಯ ಮೇಲೆ ಕಣ್ಣಿಡಬೇಡ
ಆಕೆಯ ಚೆಲುವಿನ ನಿಮಿತ್ತ.
ಅನೇಕರು ಮೋಸಹೋಗಿರುವರು
ಸ್ತ್ರೀ ಸೌಂದರ್ಯದಿಂದ
ಬೆಂಕಿಯಂತೆ ಮೋಹ ಉದ್ರೇಕಗೊಳ್ಳುವುದು
ಅದರಿಂದ.
9 ಊಟಮಾಡಬೇಡ ಗಂಡನುಳ್ಳ
ಗರತಿಯರೊಂದಿಗೆ
ಕುಡಿದು ಮತ್ತನಾಗಬೇಡ ಅವಳೊಂದಿಗೆ.
ಒಂದು ವೇಳೆ ನಿನ್ನ ಮನಸ್ಸು ಒಲಿದೀತು
ಆಕೆಯ ಕಡೆಗೆ

ವಿನಾಶಕ್ಕೆ ನಿನ್ನನ್ನು ಒಯ್ದೀತು ಅಂಥ ಬಯಕೆ.

### ಇತರರೊಂದಿಗೆ ಒಡನಾಟ

10 ಬಿಟ್ಟುಬಿಡಬೇಡ ಹಳೆಯ ಗೆಳೆಯನನ್ನು
ಅವನಿಗೆ ಸಮಾನನಲ್ಲ ಹೊಸಬನು.
ಹೊಸ ಗೆಳೆಯನು ಹೊಸ ದ್ರಾಕ್ಷಾರಸವಿದ್ದಂತೆ
ಅದನ್ನು ಆನಂದದಿಂದ ಕುಡಿಯುವೆ
ಹಳೆಯದಾದಾಗಲೆ.
11 ಅಸೂಯೆಪಡಬೇಡ ದುರಾಚಾರಿಯ
ಏಳಿಗೆಯನ್ನು ಕಂಡು
ಏನಾದೀತೆಂಬುದನ್ನು ನೀನರಿಯೆ ಅವನ
ಅಂತ್ಯ ಗತಿಯು.
12 ಸಂತೋಷಿಸಬೇಡ ದುರುಳರು ಮೆಚ್ಚುವ
ವಸ್ತುಗಳಲಿ
ದಂಡನೆಯಾಗದೆ ಅವರು ಸಮಾಧಿ
ಸೇರರೆಂಬುದು ನೆನಪಿನಲ್ಲಿರಲಿ.
13 ದೂರವಿರು ನಿನ್ನನ್ನು ಕೊಲ್ಲಲು
ಅಧಿಕಾರವುಳ್ಳವನಿಂದ
ಆಗ ಸ್ವಂತತ್ರನಾಗಿರುವೆ ಮರಣಭಯದ
ಶಂಕೆಯಿಂದ;
ತಪ್ಪುಮಾಡದಿರು ಅವನ ಬಳಿಯಲ್ಲಿ;
ತೆಗೆದಾನು ಅವನು ನಿನ್ನ ಪ್ರಾಣವನ್ನು
ತಿಳಿದುಕೋ ಬಲೆಬೀಸಿರುವಲ್ಲಿ
ನೀ ಹೋಗುತ್ತಿರುವೆಯೆಂಬುದನ್ನು,
ಊರ ಕೋಟೆಯ ಮೇಲೆ
ನಡೆಯುತ್ತಿರುವೆಯೆಂಬುದನ್ನು.
14 ನೆರೆಯವನನ್ನು ಅರ್ಥಮಾಡಿಕೊ
ನಿನ್ನ ಶಕ್ತಿಯ ಮೇರೆಗೆ
ಸಮಾಲೋಚನೆ ನಡೆಸು ಬುದ್ಧಿವಂತನೊಂದಿಗೆ.
15 ನಿನ್ನ ಮಾತುಕತೆ ನಡೆಯಲಿ
ಬುದ್ಧಿವಂತರೊಂದಿಗೆ
ಮಾತನಾಡು ಮಹೋನ್ನತರ ಧರ್ಮ
ಶಾಸ್ತ್ರವನ್ನು ಕುರಿತೆ.
16 ಸಜ್ಜನರು ನಿನ್ನೊಂದಿಗೆ ಉಣ್ಣಲಿ, ಕುಡಿಯಲಿ
ದೇವರ ಭಯಭಕ್ತಿಯಲ್ಲೇ ನಿನಗೆ
ಹೆಚ್ಚಳವಿರಲಿ.
17 ಕಲೆಬಲ್ಲವನ ಕೆಲಸದ ನಿಮಿತ್ತ ಕಲಾಕೃತಿ
ಯನ್ನು ಹೊಗಳುತ್ತಾರೆ
ಜನನಾಯಕನು ತನ್ನ ಭಾಷಣದಿಂದ
ಜ್ಞಾನಿಯೆನಿಸಿಕೊಳ್ಳುತ್ತಾನೆ.

18 ಬಾಯಿಬಡುಕನು ತನ್ನೂರಿಗೆ ಅಪಾಯಕರ
ಮಾತಿನಲ್ಲಿ ದುಡುಕುವವನು ದ್ವೇಷಕರ.

### ಆಡಳಿತಗಾರರು

**10** ಜ್ಞಾನಿಯಾದ ಅಧಿಪತಿಯಿಂದ
ಜನರಿಗೆ ದೊರಕುವುದು ಶಿಕ್ಷಣ
ವಿವೇಕಿಯಾದವನ ಆಡಳಿತ ಕ್ರಮಬದ್ಧ.
2 ಜನಾಧಿಪತಿ ಇದ್ದಂತೆ ಅವನ ಉದ್ಯೋಗಸ್ಥರು
ಗ್ರಾಮಾಧಿಕಾರಿಯಂತೆ ಊರಜನರು.
3 ಪ್ರಜೆಗಳು ನಾಶವಾಗುತ್ತಾರೆ
ಶಿಸ್ತು ಇಲ್ಲದ ಅರಸನಿಂದ
ರಾಷ್ಟ್ರವು ಅಭಿವೃದ್ಧಿ ಹೊಂದುತ್ತದೆ
ಅಧಿಕಾರಿಗಳ ವಿವೇಕದಿಂದ.
4 ಜಗತ್ತಿನ ಮೇಲೆ ಅಧಿಕಾರ ಇರುವುದು
ದೇವರ ಕೈಯಲ್ಲಿ
ತಕ್ಕ ಅಧಿಕಾರಿಗಳನ್ನು ಒದಗಿಸುವನವನು
ಸೂಕ್ತ ಸಮಯದಲ್ಲಿ.
5 ಮಾನವರ ಏಳಿಗೆ ದೇವರ ಕೈಯಲ್ಲಿದೆ
ನೀಡುವನಾತ ಅಧಿಕಾರಿಗಳಿಗೆ ತಕ್ಕ
ಮರ್ಯಾದೆ.

### ಅಹಂಕಾರ

6 ನಿನ್ನ ನೆರೆಯವನು ಮಾಡುವ ಪ್ರತೀ ತಪ್ಪಿಗೂ
ಮುನಿಸಿಕೊಳ್ಳಬೇಡ
ಬಲಾತ್ಕಾರದಿಂದ ಯಾವುದನ್ನೂ ಮಾಡಬೇಡ.
7 ಹೇಯವಾದುದು ಅಹಂಕಾರ
ದೇವ-ಮಾನವರ ದೃಷ್ಟಿಯಲ್ಲಿ
ಹೀಗೆ ಇಮ್ಮಡಿಯಾದುದು ಅಹಂಕಾರಿ
ಮಾಡುವ ಹಾನಿ.
8 ಅಧರ್ಮ, ಬಲಾತ್ಕಾರ, ಹಾಗು ಹಣ
ಇವುಗಳಿಂದ ಅಧಿಕಾರ ತಪ್ಪಿಹೋಗುತ್ತದೆ
ಹೀಗೆ ಅಧಿಪತ್ಯ ಮತ್ತೊಂದು ರಾಷ್ಟ್ರದ
ಕೈಸೇರುತ್ತದೆ.
9 ಮಣ್ಣು, ಬೂದಿ ಆಗಿರುವ ಮಾನವ
ಉಬ್ಬಿಕೊಳ್ಳುವುದೆಂತು?
ಅವನು ಬದುಕಿರುವಾಗಲೇ ಕರುಳು ಕೊಳೆತು
ಹೋಗುವುದುಂಟು.
10-11 ದೀರ್ಘವಾದ ರೋಗದಿಮದ ವೈದ್ಯನೂ
ಸಮಸ್ಯೆಗೀಡಾಗುವನು

ಇಂದು ಅರಸನಾದವನು ನಾಳೆ ಶವವಾಗುವನು
ಸತ್ತಮೇಲೆ ಮನುಷ್ಯನು ಕ್ರಿಮಿಕೀಟ, ಮೃಗಗಳ
ಪಾಲಾಗುವನು.
12 ಅಹಂಕಾರ ಅಂಕುರಿಸುವುದು, ಮಾನವನು
ದೇವರನ್ನು ಬಿಟ್ಟ ದಿನವೇ
ಅವನ ಆತ್ಮ ತನ್ನ ನಿರ್ಮಾಪಕನನ್ನು ಬಿಟ್ಟು
ತೊಲಗಿದೆ ಆಗಾಗಲೇ.
13 ಅಹಂಕಾರವೇ ಪಾಪದ ಒರತೆ
ಅಹಂಕಾರ ಪೀಡಿತನು ಹರಡುವುದು
ಹೊಲೆಯನ್ನೆ;
ಎಂತಲೆ ದೇವರು ಅಧಿಕ ವಿಪತ್ತನು ಹೇರುವರು
ಅವನ ಮೇಲೆ
ಹೀಗೆ ಅವನನ್ನು ಧ್ವಂಸಮಾಡುವರು
ಸಂಪೂರ್ಣವಾಗಿಯೆ.
14 ಸರ್ವೇಶ್ವರ ಉರುಳಿಸುವನು ಗದ್ದುಗೆಯಿಂದ
ಅಧಿಕಾರಿಗಳನು
ಅವರ ಸ್ಥಾನಕ್ಕೆ ಏರಿಸಿರುವನು ದೀನದಲಿತರನು.
15 ಬೇರುಸಹಿತ ಕಿತ್ತೊಗೆದನು ಜನಾಂಗಗಳನು
ತಂದಿರಿಸಿದನು ಅವರ ಸ್ಥಳದಲ್ಲಿ ದೀನರನು.
16 ಆತನು ಜನಾಂಗಗಳ ಸೊತ್ತನ್ನು ಅಳಿಸಿಹನು
ಭೂತಳದವರೆಗೂ ಅವರನ್ನು
ನಾಶಮಾಡಿಹನು.
17 ಅವರಲ್ಲಿ ಕೆಲವರನ್ನು ತೆಗೆದು ಹಾಕಿ,
ನಾಶಮಾಡಿದನು
ಭೂಮಿಯಲ್ಲಿ ಅವರ ಹೆಸರೇ ಇಲ್ಲದಂತೆ
ಮಾಡಿದನು.
18 ಅಹಂಕಾರ ಮಾನವನಿಗೋಸ್ಕರ
ಉಂಟಾದುದಲ್ಲ
ಮಿತಿಮೀರಿದ ಕೋಪ, ಸ್ತ್ರೀಯಿಂದ
ಜನಿಸಿದವರಿಗಲ್ಲ.

ಗೌರವಾನ್ವಿತರು

19 ಸನ್ಮಾನವುಳ್ಳ ಸಂತತಿ ಎಂಥದು? ಮಾನವ
ಸಂತತಿಯೇ;
ಸನ್ಮಾನವುಳ್ಳ ಜನರು ಎಂಥವರು? ದೇವನಿಗೆ
ಅಂಜುವವರೇ.
ಸನ್ಮಾನಹೀನ ಸಂತತಿ ಎಂಥದು? ಮಾನವ
ಸಂತತಿಯೇ;
ಈ ಸನ್ಮಾನಹೀನ ಜನರು ಎಂಥವರು?
ದೈವಾಜ್ಞೆಗಳ ಮೀರುವವರೇ.

20 ಸಹೋದರರಲ್ಲಿ ಸನ್ಮಾನ ಸಲ್ಲುವುದು
ಹಿರಿಯನಿಗೆ
ದೇವರ ದೃಷ್ಟಿಯಲ್ಲಿ ಸನ್ಮಾನ ಪಾತ್ರರು
ಆತನಿಗೆ ಅಂಜುವವರೇ.
21 ಸರ್ವೇಶ್ವರನಲ್ಲಿನ ಭಯಭಕ್ತಿ ಏಳಿಗೆಗೆ
ಮೂಲ
ಒರಟುತನ ಹಾಗು ಅಹಂಕಾರ
ತಿರಸ್ಕಾರಕ್ಕೆ ಮೂಲ.
22 ಬಲ್ಲಿದವನಾಗಲೀ, ಪೂಜ್ಯನಾಗಲೀ,
ಬಡವನಾಗಲೀ
ಅವರ ಹೆಚ್ಚಳ ಇರುವುದು ದೇವರಿಗೆ
ಭಯಪಡುವುದರಲ್ಲಿ.
23 ವಿವೇಕಿಯಾದ ಬಡವನನ್ನು ಅವಮಾನ
ಪಡಿಸುವುದು ಸರಿಯಲ್ಲ
ಪಾಪಾತ್ಮನಿಗೆ ಮೇರೆ ಮರ್ಯಾದೆ ಸಲ್ಲಿಸುವುದು
ತರವಲ್ಲ.
24 ದೊಡ್ಡ ವ್ಯಕ್ತಿ, ನ್ಯಾಯಮೂರ್ತಿ, ಶಕ್ತಿಶಾಲಿ,
ಇವರು ಸನ್ಮಾನ ಪಡೆಯಬಹುದು
ಆದರೆ, ದೇವಭಯವಿರುವವನಿಗಿರುವಷ್ಟು
ಮೇರೆಮರ್ಯಾದೆ ಇವರಿಗಿರದು.
25 ಸ್ವತಂತ್ರ ಪ್ರಜೆಗಳು ಕಾದಿರುವರು ಬುದ್ಧಿವಂತ
ಸೇವಕನಿಗಾಗಿ
ಗೊಣಗುಟ್ಟಲಾರರು ವಿವೇಕಿಗಳು ಇದನ್ನು
ನೋಡಿ.

**ದೀನತೆ–ಸರಳತೆ**

26 ನಿನ್ನ ಉದ್ಯೋಗದಲ್ಲಿ ಅತೀವ ಜಾಣತನ
ತೋರಿಸಬೇಡ
ಇಕ್ಕಟ್ಟಿಗೊಳಗಾದಾಗ ಆಷಾಡಭೂತಿ
ಯಾಗಬೇಡ.
27 ಹೊಟ್ಟೆಗಿಲ್ಲದ ಡಾಂಭಿಕನಿಗಿಂತಲು
ದುಡಿದುಣ್ಣುವ ಗೃಹಸ್ಥನೇ ಮೇಲು.
28 ಮಗನೇ, ನಿನ್ನ ಸ್ವಾಭಿಮಾನದ ಬಗ್ಗೆ
ನಮ್ರತೆಯಿರಲಿ
ಸ್ವಾಭಿಮಾನ ನಿನ್ನ ಘನತೆಗೆ
ಅನುಗುಣವಾಗಿರಲಿ.
29 ತನ್ನ ಆತ್ಮದ ವಿರುದ್ಧ ಪಾಪಮಾಡುವವನನ್ನು
ನೀತಿವಂತನೆಂದು ಹೇಳುವರೇ?
ತನ್ನ ಬಾಳನ್ನು ಅವಮಾನಪಡಿಸಿ
ಕೊಳ್ಳುವವನನ್ನು ಯಾರಾದರೂ

ಗೌರವಿಸುವರೇ?
30 ಬಡವನಿಗೆ ಅವನ ಜ್ಞಾನದಿಂದಲೇ ಗೌರವ
ಸಿರಿವಂತನಿಗೆ ಅವನ ಸಿರಿಯಿಂದಲೇ ಸನ್ಮಾನ.
31 ಬಡತನದಲ್ಲಿ ಒಬ್ಬ ಸನ್ಮಾನಪಾತ್ರನಾದರೆ,
ಸಿರಿಬಂದಾಗ ಇನ್ನೆಷ್ಟಾದಾನು?
ಐಶ್ವರ್ಯದಲ್ಲಿ ಮಾನಗೆಟ್ಟವನು ಬಡತನ
ಬಂದಾಗ ಇನ್ನೆಷ್ಟಾದಾನು?

### ಮೋಸದ ವೇಷ

**11** ಸುಜ್ಞಾನಿಯಾದ ದೀನನು ತಲೆಯೆತ್ತಿ
ನಿಲ್ಲುವನು
ಮಹಾಪುರುಷರ ಮಧ್ಯೆ ಆಸೀನನಾಗಲು
ಅರ್ಹನಾಗುವನು.
2 ಒಬ್ಬನ ಚೆಲುವಿನ ನೋಟಕ್ಕಾಗಿ ಅವನನ್ನು
ಹೊಗಳಬೇಡ
ಒಬ್ಬನ ಹೊರನೋಟವನ್ನೆ ಮುಂದಿಟ್ಟು
ಹೀನೈಸಬೇಡ.
3 ರೆಕ್ಕೆಯುಳ್ಳವುಗಳಲ್ಲಿ ಚಿಕ್ಕದು ಜೇನುಹುಳ
ಆದರೆ ಸಿಹಿಗಳಲ್ಲಿ ಸಿಹಿ ಅದರ ಫಲ.
4 ಉಡುಗೆತೊಡುಗೆಗಳಲ್ಲಿ ಹೆಚ್ಚಳಪಡಬೇಡ
ಕೀರ್ತಿ ಪ್ರತಿಷ್ಟೆ ಬಂದಾಗ ಉಬ್ಬಿಕೊಳ್ಳಬೇಡ.
ಕಾರಣ, ದೇವರ ಕಾರ್ಯಗಳು ಅಗಾಧ
ಮಾನವರಿಗೆ ಅವು ಅಗೋಚರ.
5 ಪ್ರಭುಗಳನೇಕರು ನೆಲದ ಮೇಲೆ ಪವಡಿಸಿಹರು
ಗಣನೆಗೆ ಬಾರದವರು ಕಿರೀಟಧಾರಿಗಳು
ಆಗಿಹರು.
6 ಬಲವಂತರನೇಕರು ನಾಚಿಕೆಗೀಡಾಗಿಹರು
ಘನವಂತರನೇಕರು ಇತರರ ಕೈವಶವಾಗಿಹರು.

### ಆಲೋಚನೆ-ಪರಿಶೀಲನೆ

7 ದೂಷಣೆ ಮಾಡಬೇಡ ಯಾವುದನ್ನೂ
ತೂಗಿನೋಡುವ ತನಕ
ಬೇಕಾದರೆ ಗದರಿಸು ಸಂಪೂರ್ಣವಾಗಿ
ಅರಿತುಕೊಂಡನಂತರ.
8 ಹೇಳಿದ ಮಾತನ್ನು ಕೇಳಿ ತಿಳಿದುಕೊಳ್ಳುವ
ತನಕ ಉತ್ತರಿಸಬೇಡ
ಒಬ್ಬನು ಮಾತನಾಡುತ್ತಿರುವಾಗಲೇ
ಬಾಯಿ ತೆರೆಯಬೇಡ.
9 ನಿನಗೆ ಸಂಬಂಧವಿಲ್ಲದ ಚರ್ಚೆಯಲ್ಲಿ

ತಲೆಹಾಕಬೇಡ
ದುರುಳರು ನ್ಯಾಯಕ್ಕೆ ಕೂರುವಾಗ
ಅವರ ಜೊತೆ ಕೂರಬೇಡ.
10 ಮಗನೇ, ಕೈಹಾಕಬೇಡ ಕಂಡಕಂಡ ಕೆಲಸಗಳಿಗೆ
ಕೇಡು ತಪ್ಪದು ಅನೇಕ ಕೆಲಸಗಳಿಗೆ
ಕೈ ಹಾಕುವವರಿಗೆ;
ನೀನವುಗಳನ್ನು ಹಿಮ್ಮೆಟ್ಟದಿದ್ದರೆ ಏನನ್ನೂ
ಸಾಧಿಸಲಾರೆ
ಬಿಟ್ಟು ಓಡಿದರೆ ಅವುಗಳಿಂದ ತಪ್ಪಿಸಿ
ಕೊಳ್ಳಲಾರೆ.

**ದೇವರಲ್ಲಿ ಭರವಸೆ**

11 ಒಬ್ಬನು ದುಡಿಯುತ್ತಾನೆ; ಕಷ್ಟಪಡುತ್ತಾನೆ
ಅವಸರಪಡುತ್ತಾನೆ; ಎಷ್ಟು ಮಾಡಿದರೂ
ಕೊರತೆಯಿಂದಿರುತ್ತಾನೆ;
12 ಇನ್ನೊಬ್ಬನು ಮಂಕುತಿಮ್ಮ,
ಇತರರ ಸಹಾಯದ ಅಗತ್ಯವುಳ್ಳವನು
ಆತನು ಬಲಹೀನನು ಹಾಗು ದಟ್ಟದರಿದ್ರನು;
ಸರ್ವೇಶ್ವರನ ಕಟಾಕ್ಷ ಬೀಳುತ್ತದೆ ಅವನ ಮೇಲೆ
ಹೀನಸ್ಥಿತಿಯಿಂದ ಮೇಲುಸ್ಥಿತಿಗೆ ಅವನನ್ನು
ಏರಿಸುತ್ತದೆ.
13 ಅದು ಮಾಡುತ್ತದೆ ನಾಲ್ಕು ಜನರಲ್ಲಿ
ಅವನು ತಲೆಯೆತ್ತಿ ನಡೆವಂತೆ
ಅನೇಕರು ಅವನನ್ನು ಕಂಡು
ಆಶ್ಚರ್ಯಪಡುವಂತೆ.
14 ಜಯ, ಅಪಜಯ, ಜೀವ, ಸಾವು
ಸರ್ವೇಶ್ವರನಿಂದಲೇ
ಬಡತನ, ಸಿರಿತನ ಎಲ್ಲವು ಆತನಿಂದಲೇ.
15 ಜ್ಞಾನ, ತಿಳುವಳಿಕೆ, ಧರ್ಮಶಾಸ್ತ್ರದ ಅರಿವು
ಸರ್ವೇಶ್ವರನಿಂದಲೆ
ಪ್ರೀತಿ, ಸತ್ಕಾರ್ಯವೆಸಗುವ ಆಸಕ್ತಿ ಸಹ,
ಆತನಿಂದಲೆ.
16 ಮೂರ್ಖತನ, ಕತ್ತಲು ಇರುವುವು
ಪಾಪಿಗಳೊಂದಿಗೆ
ಕೇಡಿನಲ್ಲಿ ನಲಿವವನಲ್ಲಿ ಅವು ಇರುವುವು
ಮುಪ್ಪಿನವರೆಗೆ.
17 ದೇವರ ವರ ನೆಲೆಗೊಳ್ಳುವುದು ಸದ್ಭಕ್ತರಲ್ಲಿ
ಆತ ಮೆಚ್ಚುವಂಥಾದ್ದು ವೃದ್ಧಿಯಾಗುವುದು
ಸತತವಾಗಿ.
18 ಒಬ್ಬನು ದುಡಿದು ದುಡಿದು ಗಂಟಿಕ್ಕಿ

ಸಿರಿವಂತನಾಗಬಹುದು
ಇಂಥವನ ಪಾಲಿಗೆ ಬರತಕ್ಕ ಪ್ರತಿಫಲ
ಹೀಗಿರುವುದು:
19 ‘ನನಗೆ ಬಂತು ನೆಮ್ಮದಿ, ಈಗ
ಅನುಭವಿಸುವೆ ಆಸ್ತಿ’ ಎಂದರೂ
ಘಳಿಯದು ಅವನಿಗೆ ಅದು ಎಷ್ಟು ಕಾಲ
ಇರುವುದೆಂದು
ಅದನ್ನು ಇತರರಿಗೆ ಬಿಟ್ಟು ತಾನು
ಸಾಯಬೇಕೆಂದು.
20 ನೀನು ಕೈಗೊಂಡ ಕಾರ್ಯದಲಿ ಸ್ಥಿರವಾಗಿರು,
ನಿರತನಾಗಿರು
ಹಳಬನಾಗುವವರೆಗೂ ಅದನ್ನೆ
ಮಾಡುತ್ತಿರು.
21 ಪಾಪಾತ್ಮರ ಕಾರ್ಯಗಳನ್ನು ಕಂಡು ಆಶ್ಚರ್ಯ
ಪಡದಿರು;
ದೇವರನ್ನು ನಂಬಿ, ನಿನ್ನ ಕಾರ್ಯದಲಿ
ನಿರತನಾಗಿರು;
ಆತನಿಗೆ ಕಠಿಣವೇನೂ ಅಲ್ಲ, ಬಡವನನ್ನು
ಬಲ್ಲಿದವನನ್ನಾಗಿಸಲು ಕ್ಷಣಮಾತ್ರದೊಳು.
22 ದೇವರ ಆಶೀರ್ವಾದವಿದೆ
ಭಕ್ತರಿಗೆ ದೊರಕುವ ಫಲದಲ್ಲಿ
ಆ ಆಶೀರ್ವಾದವನ್ನು ಬೆಳಗಿಸುವನಾತ
ಒಂದೇ ಕ್ಷಣದಲ್ಲಿ.
23 ‘ನನ್ನ ಬಾಳಿನಿಂದ ಪ್ರಯೋಜನವೇನು?’
ಎಂದು ಹೇಳದಿರು
‘ಮುಂದೆ ನನಗೆ ಬರುವ ಗತಿಯೇನು?’
ಎಂದು ಕೊರಗದಿರು.
24 ಅಂತೆಯೇ, ‘ಸಾಕಷ್ಟು ಆಸ್ತಿ ನನಗಿದೆ’ ಎಂದು
ಆಡಿಕೊಳ್ಳಬೇಡ
‘ಇನ್ನು ಮುಂದೆ ನನಗೆ ಯಾವ ಕೊರತೆ?’
ಎಂದು ಉಬ್ಬಿಕೊಳ್ಳಬೇಡ.
25 ಸುಖಕಾಲದಲ್ಲಿ ದುಃಖದ ನೆನಪಾಗುವುದಿಲ್ಲ
ವಿಪತ್ಕಾಲದಲ್ಲಿ ಸುಖದ ನೆನಪಾಗುವುದಿಲ್ಲ.
26 ಮರಣದ ವೇಳೆಯಲ್ಲಿ ದೇವರಿಗೆ ಅತಿ
ಸುಲಭವಾಗಿರುವುದು
ಮನುಷ್ಯನ ನಡತೆಗೆ ಸರಿಯಾದ
ಪ್ರತಿಫಲವೀಯಲು.
27 ವಿಪತ್ತು ಸಂತೋಷವನ್ನೆ ಮರೆಯಿಸಿ
ಬಿಡುತ್ತದೆ ಒಂದೇ ಗಳಿಗೆಯಲ್ಲಿ
ಮನುಷ್ಯನ ಕಾರ್ಯಗಳೆಲ್ಲ ಬಯಲಿಗೆ

ಬೀಳುವುವು ಅಂತ್ಯಕಾಲದಲ್ಲಿ.
28 ಒಬ್ಬನನ್ನು ಧನ್ಯನೆನಬೇಡ ಅವನು
ಸಾಯುವುದಕ್ಕೆ ಮೊದಲೇ
ಅವನೆಂಥವನೆಂಬುದು ತಿಳಿದು ಬರುವುದು
ಅವನ ಮಕ್ಕಳಿಂದಲೆ.
29 ಪ್ರತಿಯೊಬ್ಬನನ್ನು ಕರೆದು ತರಬೇಡ
ಮನೆಯೊಳಗೆ
ಯುಕ್ತಿ ಬಹಳವಾಗಿರುವುದು ವಂಚಕನಿಗೆ.

**ಕೆಡುಕರ ಬಗ್ಗೆ ಎಚ್ಚರಿಕೆ**

30 ಗರ್ವಿಯು ಆತ್ಮ ಪಂಜರದಲ್ಲಿರುವ
ಕವುಜುಗ ಹಕ್ಕಿಯಂತೆ
ಅವನು ನಿನ್ನ ಅಳಿವಿಗಾಗಿ ಹೊಂಚುಹಾಕುತ್ತಾನೆ.
ಗೂಢಾಚಾರನಂತೆ;
31 ಹೊಂಚಿಕೊಂಡಿರುವನವನು ಒಳ್ಳೆಯದನ್ನು
ಕೆಟ್ಟದ್ದನ್ನಾಗಿಸಲು
ಸ್ತುತ್ಯಾರ್ಹವಾದುದನ್ನು ಖಂಡನೆಗೆ ಒಳಪಡಿಸಲು.
32 ಕಿಡಿಯೊಂದರಿಂದ ಹೊತ್ತಿಕೊಳ್ಳುವುದು
ದೊಡ್ಡ ಬೆಂಕಿ
ಅಧರ್ಮಿ ಹೊಂಚಿಕೊಂಡೇ ಇರುವನು
ರಕ್ತಪಾತಕ್ಕಾಗಿ.
33 ಕೆಡುಕನ ವಿಷಯದಲ್ಲಿ ಎಚ್ಚರಿಕೆ!
ಕಾರಣ, ಅವನು ಮಾಡುವುದೆಲ್ಲ ಕೆಡುಕೇ
ಅಂಥವನು ನಿತ್ಯಕಳಂಕ ಹಚ್ಚಾನು ನಿನಗೆ!
34 ಮನೆಯಲ್ಲಿ ಇಟ್ಟುಕೊಳ್ಳಬೇಡ
ಅಪರಿಚಿತನನ್ನು
ಅವನು ಇಲ್ಲಸಲ್ಲದ ಗದ್ದಲವನ್ನು
ಎಬ್ಬಿಸಿಯಾನು
ನಿನಗೂ ನಿನ್ನವರಿಗೂ ಮನಸ್ತಾಪ
ಹುಟ್ಟಿಸಿಯಾನು.

**ಪರೋಪಕಾರಕ್ಕೆ ನಿಯಮಗಳು**

**12** ಯಾರಿಗೋಸ್ಕರ ಎಂದು ನೋಡು,
ಸತ್ಕಾರ್ಯಮಾಡುವ ಮುಂದೆ
ಆಗ ಧನ್ಯವಾದ ದೊರಕುವುದು
ನಿನ್ನ ಸತ್ಕಾರ್ಯಕ್ಕೆ.
2 ಭಕ್ತಿವಂತನಿಗೆ ಒಳ್ಳೇದನ್ನು ಮಾಡು;
ನಿನಗೆ ಪ್ರತಿಫಲ ಸಿಗುವುದು
ಅವನಿಂದ ಸಿಗದಿದ್ದರೂ ಮಹೋನ್ನತ

ನಿಂದಲಾದರೂ ಸಿಗುವುದು.

3 ಯಾವ ಒಳಿತೂ ಗಿಟ್ಟದು
ಕೆಡುಕು ಮಾಡುವವನಿಗೆ
ಹಾಗೆಯೇ ದಾನಧರ್ಮಮಾಡಲು
ನಿರಾಕರಿಸಿದವನಿಗೆ.

4 ಭಕ್ತನಿಗೆ ಕೊಡು;
ಪಾಪಾತ್ಮನಿಗೆ ನೆರವು ನೀಡಬೇಡ.

5 ದೀನನಿಗೆ ಧಾರಾಳವಾಗಿ ಕೊಡು;
ಅಧರ್ಮಿಗೆ ಕೊಡಬೇಡ
ಹಿಂತೆಗೆದಿಡು ಅವನಿಗೆ ಕೊಡಬೇಕೆಂದಿರುವ
ರೊಟ್ಟಿಯನ್ನು ಕೂಡ.
ಏಕೆನೆ, ನಿನ್ನ ಮೇಲೆ ಅವನು ನಡೆಸ್ಯಾನು
ದೊರೆತನ
ನೀನು ಮಾಡಿದ ಉಪಕಾರಕ್ಕೆ ಹೊಂದುವೆ
ಇಮ್ಮಡಿ ಅಪಕಾರ.

6 ಪರಾತ್ಪರನು ಪಾಪಿಗಳನ್ನು ದ್ವೇಷಿಸುತ್ತಾನೆ
ಭಕ್ತಿಹೀನರಿಗೆ ಮುಯ್ಯಿತೀರಿಸುತ್ತಾನೆ.

7 ಸಜ್ಜನರಿಗೆ ಕೊಡು
ದುರ್ಜನರಿಗೆ ಸಹಾಯ ಮಾಡದಿರು.

### ನೈಜ ಹಾಗೂ ಕಪಟ ಸ್ನೇಹಿತರ ಗುಣಲಕ್ಷಣಗಳು

8 ಮಿತ್ರನ ಪರೀಕ್ಷೆಯಾಗುವುದಿಲ್ಲ ಸುಖದಲ್ಲಿ
ಶತ್ರುವು ಸಿಕ್ಕಿಬೀಳುವನು ದುಃಖದಲ್ಲಿ.

9 ವೈರಿಗಳು ವ್ಯಸನಪಡುವರು ಒಬ್ಬನು
ಸಮೃದ್ಧಿಯಲ್ಲಿರುವಾಗ
ಇದ್ದ ಗೆಳೆಯನೂ ದೂರವಾಗುವನು
ಅವನು ಬಡವನಾಗುವಾಗ.

10 ನಂಬಬೇಡ ವೈರಿಯನ್ನು ಎಂದೂ
ಅವನ ಕೆಡುಕು ತಾಮ್ರಕ್ಕೆ ಹತ್ತುವ ಕಿಲುಬು.

11 ಅವನು ತನ್ನನು ತಗ್ಗಿಸಿಕೊಂಡರೂ,
ನೆಲ ಕಚ್ಚಿಕೊಂಡರೂ
ಅವನ ವಿಷಯದಲ್ಲಿ ಜೋಕೆಯಾಗಿರು,
ಎಚ್ಚರಿಕೆಯಿಂದಿರು;
ಕನ್ನಡಿ ಒರೆಸಿದವನಂತೆ ಅವನೊಡನೆ ವರ್ತಿಸು
ಆಗ ತಿಳಿಯುವೆ ಅವನ ಕಿಲುಬಿನಿಂದ
ಕನ್ನಡಿ ಮಾಸಲಿಲ್ಲವೆಂದು.

12 ಇರಿಸಿಕೊಳ್ಳಬೇಡ ಅವನನ್ನು ನಿನ್ನೊಂದಿಗೆ
ನಿನ್ನ ತಳ್ಳಿ ನಿಂತುಕೊಂಡಾನು ನಿನ್ನ ಸ್ಥಳದಲ್ಲೆ;
ಅವನನ್ನು ಕುಳ್ಳಿರಿಸಬೇಡ ನಿನ್ನ ಬಲಗಡೆಯಲ್ಲೆ
ಆಕ್ರಮಿಸಿಕೊಂಡಾನು ನಿನ್ನ ಆಸನವನ್ನೆ;

ಕಡೆಗೆ ನನ್ನ ಮಾತುಗಳು ನೆನಪಾಗಲು ನಿನಗೆ
ಇರಿದಂತಾಗುವುದು ನಿನ್ನ ಎದೆ.
13 ಸಂತಾಪಪಡುವರೆ ಹಾವಾಡಿಗನಿಗೆ
ಹಾವು ಕಚ್ಚಿದರೆ?
ಕಾಡುಮೃಗಗಳನ್ನು ಪಳಗಿಸುವವನಿಗೆ
ಅವು ಕಚ್ಚಿದರೆ?
14 ಅಂತೆಯೇ ಪಾಪಾತ್ಮನ ಜೊತೆ ಸೇರಿದವರು
ಅವನ ಪಾಪದಲ್ಲಿ ಪಾಲುಗೊಂಡವರು.
15 ನಿನ್ನ ಬಳಿ ಇರುವನು ಅವನು ಕೆಲಕಾಲ
ನಿನ್ನ ಬಳಿ ನಿಲ್ಲನು ನೀನು ಪತನವಾಗುವಾಗ.
16 ವೈರಿ ಆಡುವುದು ಸವಿಮಾತು
ನಿನ್ನನ್ನು ಹಳ್ಳಕ್ಕೆ ತಳ್ಳುವುದೇ ಅವನ ಮಸಲತ್ತು.
ಅಳಬಹುದು ಅವನು ಕಣ್ಣಿನಿಂದ
ಸಮಯ ಬಂದಾಗ ತೃಪ್ತನಾಗನು
ರಕ್ತಪಾತದಿಂದ ಕೂಡ.
17 ನಿನಗೆ ಬಡತನ ಬಂದಾಗ ನೀನು ಮೊದಲು
ಕಾಣುವುದು ಇವನನ್ನೆ
ನಟಿಸುವನವನು ನಿನಗೆ ನೆರವಾಗುವವನಂತೆ
ಸಮಯ ಕಾಯುತ್ತಿರುವನು ನಿನ್ನನು
ಕೆಡವುದಕ್ಕೆ.
18 ಅವನು ತಲೆ ಅಲ್ಲಾಡಿಸುವನು, ಚಪ್ಪಾಳೆ
ತಟ್ಟುವನು
ಪಿಸುಮಾತಾಡುವನು, ಮುಖಭಾವವನ್ನು
ಬದಲಿಸುವನು.

**13** ಟಾರೆಣ್ಣೆ ಮುಟ್ಟುವವನು ಮೈಲಿಗೆ
ಆಗುವನು
ಅಂತೆಯೇ ಗರ್ವಿಯ ಜೊತೆ ಒಡನಾಟ
ಮಾಡುವವನು.
2 ನಿನ್ನ ಶಕ್ತಿಮೀರಿ ಭಾರ ಹೊರಲು ಹೋಗಬೇಡ
ನಿನಗಿಂತ ಬಲವುಳ್ಳ ಸಿರಿವಂತನೊಂದಿಗೆ
ಗೆಳೆತನ ಬೇಡ;
ತಪ್ಪಲೆಗೂ ಗಡಿಗೆಗೂ ಸಂಬಂಧವೆಂತು!
ಒಂದಕ್ಕೊಂದು ತಾಕಲಾಡಿದರೆ ಗಡಿಗೆ
ಒಡೆಯುವುದು.
3 ಸಿರಿವಂತನು ಅನ್ಯಾಯ ಮಾಡಿದ ಮೇಲೂ
ಬೆದರಿಸುವನು
ಬಡವನು ತನಗೆ ಅನ್ಯಾಯವಾಗದಿದ್ದರೂ
ಬೇಡಿಕೊಳ್ಳುವನು.
4 ನಿನ್ನನ್ನು ಉಪಯೋಗಿಸಿಕೊಳ್ಳುವನು

ಅವನಿಗೆ ಲಾಭವಿರುವಾಗ
ನಿನ್ನನ್ನು ತೊರೆದುಬಿಡುವನು
ನಿನಗೆ ಕೊರತೆ ಬಂದಾಗ.
5 ನಿನ್ನೊಂದಿಗೆ ಅವನಿರುವನು
ನೀನು ಅನುಕೂಲಸ್ಥನಾಗಿದ್ದರೆ
ನಿನ್ನಲ್ಲಿದ್ದುದನ್ನೆಲ್ಲ ಖರ್ಚು ಮಾಡಿಸುವನು
ಯಾವ ಚಿಂತೆಯಿಲ್ಲದೆ.
6 ಅವನಿಗೆ ನಿನ್ನ ಅಗತ್ಯವಿದ್ದಾಗ
ನಿನ್ನನ್ನು ವಂಚಿಸುವನು
ನಸುನಗೆ ನಕ್ಕು ನಿನ್ನಲ್ಲಿ ನಿರೀಕ್ಷೆ ಹುಟ್ಟಿಸುವನು
'ನಿನಗೇನು ಬೇಕು, ನನಗೆ ಹೇಳು' ಎನ್ನುವನು.
7 ನಿನ್ನಲ್ಲಿದ್ದುದನ್ನೆ ವ್ಯಯಮಾಡಿಸಿ ತನಗೆ
ಇಷ್ಟವಾದ ಊಟ ಮಾಡಿಸುವನು
ಪದೇ ಪದೇ
ನಿನ್ನನ್ನು ನಾಚಿಕೆಗೆ ಗುರಿಪಡಿಸಿ ನಿನಗೆ
ಪರಿಹಾಸ್ಯ ಮಾಡುವನು ಕಡೆಗೆ;
ಅನಂತರ ನಿನ್ನನ್ನು ಕಂಡೂಕಾಣದಂತೆ
ತಲೆಯಾಡಿಸಿ ನಡೆವನು ಓರೆಯಾಗೆ.
8 ನೀನು ಮೋಸಹೋಗದಂತೆ
ಎಚ್ಚರಿಕೆಯಿಂದಿರು
ಮೂರ್ಖತನದಿಂದ ಆನಂದವನ್ನು
ಕೆಡಿಸಿಕೊಳ್ಳದಿರು.
9 ನಿರಾಸಕ್ತಿಯಿಂದಿರು ಮಹನೀಯನೊಬ್ಬ
ನಿನ್ನನು ಕರೆದಾಗ
ಪುನಃ ಪುನಃ ಅವನು ನಿನ್ನನ್ನು ಕರೆಯುವನು
ಹೀಗಾದಾಗ.
10 ಅವನಿಗೆ ಒತ್ತಾಯ ಮಾಡಬೇಡ;
ಹಿಂದಕ್ಕೆ ದೂಡಿಯಾನು
ಅವನಿಂದ ಬಹುದೂರ ನಿಲ್ಲಬೇಡ;
ನಿನ್ನನ್ನು ಮರೆತುಬಿಟ್ಟಾನು.
11 ಸರಿಸಮಾನನಂತೆ ಅವನೊಂದಿಗೆ ಮಾತಾಡಲು
ಹೋಗಬೇಡ
ಅವನ ದೀರ್ಘವಾದ ಮಾತುಗಳಲ್ಲಿ
ಭರವಸೆಯಿಡಬೇಡ.
ಏಕೆಂದರೆ, ದೀರ್ಘಮಾತಿನಿಂದ ನಿನ್ನನು
ಪರೀಕ್ಷಿಸುವನು
ನಗುನಗುತ್ತಲೇ ನಿನ್ನ ಗುಟ್ಟನ್ನು
ಅರಿತುಕೊಳ್ಳುವನು.
12 ಹೇಳಿದ ಮಾತುಗಳನ್ನು ಗುಟ್ಟಾಗಿ ಇಡದವನಿಗೆ
ಕರುಣೆಯಿಲ್ಲ

ಅವನು ಕಷ್ಟಕೊಡಲೂ ಕಟ್ಟಿಹಾಕಲೂ
ಹಿಂಜರಿಯುವುದಿಲ್ಲ.
13 ಗುಟ್ಟುಗಳನ್ನು ನಿನ್ನಲಿ ಇಟ್ಟುಕೊಂಡು ಬಹು
ಜಾಗ್ರತೆಯಿಂದಿರು
ನಿನ್ನ ವಿನಾಶದ ಅಪಾಯದೆಡೆಯಲ್ಲಿ
ನಡೆಯುತ್ತಿಯೆಂದು ತಿಳಿದಿರು.
14 ನೀನು ಮಲಗಿರುವಾಗಲು ಇಂಥವುಗಳನ್ನು
ಕೇಳಿದರೆ, ಎದ್ದೇಳು
ನಿನ್ನ ಜೀವಮಾನದಲ್ಲೆಲ್ಲ ದೇವರನ್ನು ಪ್ರೀತಿಸಿ,
ರಕ್ಷಣೆಗಾಗಿ ಪ್ರಾರ್ಥಿಸು.
15 ಸ್ವಜಾತಿಯ ಪ್ರಾಣಿಗಳು ಒಂದನ್ನೊಂದು
ಪ್ರೀತಿಸುವುದು ಸಹಜ
ಅಂತೆಯೆ ಪ್ರತಿಯೊಬ್ಬ ಮನುಷ್ಯ
ನೆರೆಯವನನ್ನು ಪ್ರೀತಿಸುವುದು ಸಹಜ.
16 ಪ್ರಾಣಿಗಳೆಲ್ಲ ಜೊತೆಯಾಗುವುವು
ತಂತಮ್ಮ ಜಾತಿಯ ಪ್ರಾಣಿಗಳೊಂದಿಗೆ
ಅಂತೆಯೆ ಮನುಷ್ಯನೂ ಅಂಟಿಕೊಳ್ಳುವನು
ತನಗೆ ಸಮಾನವಾದವರಿಗೆ.
17 ತೋಳಕ್ಕೂ ಕುರಿಮರಿಗೂ ಒಡನಾಟವೇನು?
ಅಂತೆಯೆ ಅಧರ್ಮಿಗೂ ಭಕ್ತನಿಗೂ
ಸಂಬಂಧವೇನು?
18 ಕಿರುಬಕ್ಕೂ ನಾಯಿಗೂ ಒಡನಾಟವೇನು?
ಬಡವನಿಗೂ ಬಲ್ಲಿದನಿಗೂ ಸಮಾಧಾನವೇನು?
19 ಕಾಡುಕತ್ತೆ ಕಾಡಿನಲ್ಲಿ ಸಿಂಹಕೆ
ಕೊಳ್ಳೆಯಾಗುವಂತೆ
ಬಡವರು ಬಲಿಯಾಗುವರು ಬಲ್ಲಿದರಿಗೆ.
20 ಗರ್ವಿಯು ಹಗೆಮಾಡುವನು ನಮ್ರತೆಯನ್ನು
ಐಶ್ವರ್ಯವಂತರು ಹೀನೈಸುವರು ಬಡವರನ್ನು.
21 ಐಶ್ವರ್ಯವಂತನು ಬಿದ್ದರೆ ಮಿತ್ರರು ಅವನನ್ನು
ಎತ್ತಿಹಿಡಿಯುವರು
ಬಡವನು ಬಿದ್ದರೆ, ಗೆಳೆಯರು ಅವನನ್ನು ಆಚೆಗೆ
ತಳ್ಳಿಬಿಡುವರು.
22 ಐಶ್ವರ್ಯವಂತನು ಜಾರಿದರೆ ಅವನಿಗೆ
ಬಹುಜನ ಸಹಾಯಕರು
ಆಡಬಾರದ ಮಾತನ್ನಾಡಿದರೂ ಅವನಲ್ಲಿ
ತಪ್ಪು ಎಣಿಸರು;
ಬಡವನು ಜಾರಿದರೆ ಅವನನ್ನು ಗದರಿಸುವರು
ಅವನು ಸುಜ್ಞಾನವನ್ನೇ ನುಡಿದರೂ
ಅವನಿಗೆ ಯಾರೂ ಕಿವಿಗೊಡರು.
23 ಐಶ್ವರ್ಯವಂತನು ಮಾತಾಡಿದಾಗ ಎಲ್ಲರೂ

ಸುಮ್ಮನಾಗುವರು
ಅವನು ಹೇಳಿದ್ದೆಲ್ಲವನ್ನು ಮುಗಿಲು
ಮುಟ್ಟುವವರೆಗೆ ಹೊಗಳುವರು.
ಬಡವನು ಮಾತಾಡಿದರೆ, ಹೇ ಇವನಾರು?
ಎನ್ನುವರು,
ಅವನು ಎಡವಿದರೆ, ಪೂರ್ತಿಯಾಗಿ ಬೀಳುವಂತೆ
ನೂಕಿಬಿಡುವರು.
24 ಪಾಪವಿಲ್ಲದ ಐಶ್ವರ್ಯ ಒಳ್ಳೆಯದು
ದುರ್ಜನರ ಬಾಯಲ್ಲಿ ಬಡತನ ಕೆಟ್ಟದು.
25 ಒಳ್ಳೆಯದಿರಲಿ, ಕೆಟ್ಟದ್ದಿರಲಿ ಹೃದಯ
ಅದರಂತೆ ಬದಲಾಗುತ್ತದೆ ಮನುಷ್ಯನ
ಮುಖಚರ್ಯೆ.
26 ಹಸನ್ಮುಖವು ಉಲ್ಲಾಸ ಹೃದಯದ ಕುರುಹು
ಜ್ಞಾನೋಕ್ತಿಗಳನ್ನು ಹುಡುಕುವುದು ಮನಸ್ಸಿಗೆ
ಬೇಸರವು.

### ನಿಜವಾದ ಆನಂದ

**14** ಧನ್ಯನು ! ತನ್ನ ಮಾತಿನಲಿ
ಜಾರದವನು;
ಅವನು ಪಶ್ಚಾತ್ತಾಪದ ಅವಶ್ಯಕತೆ
ಇಲ್ಲದವನು.
2 ಧನ್ಯನು ! ತನ್ನ ಮನಸ್ಸಾಕ್ಷಿಯಿಂದ
ದೋಷಾರೋಪಣೆ ಹೊಂದದವನು;
ಸರ್ವೇಶ್ವರನಲ್ಲಿಟ್ಟ ನಿರೀಕ್ಷೆಯಿಂದ ಆತ
ತಪ್ಪಿಬೀಳನು.
3 ಐಶ್ವರ್ಯ ತಕ್ಕುದಲ್ಲ ಜಿಪುಣನಿಗೆ
ಹಣತೆಗೆದುಕೊಂಡರೆ ಪ್ರಯೋಜನವಿಲ್ಲ
ಸ್ವಾರ್ಥಿಗೆ.
4 ತನ್ನನ್ನು ತಾನೇ ಸವೆಸಿ ಕೂಡಿಡುವವನು,
ಕೂಡಿಡುತ್ತಾನೆ ಪರರಿಗಾಗಿ
ಅವರು ದುಂದುವೆಚ್ಚ ಮಾಡುತ್ತಾರೆ
ಅವನ ಆಸ್ತಿಯನ್ನೇ ಬಳಸಿ.
5 ತನಗೆ ತಾನೇ ಜಿಪುಣನಾಗಿರುವವನು
ಯಾರಿಗೆ ತಾನೆ ಉದಾರಿಯಾಗಿರುತ್ತಾನೆ?
ತನ್ನ ಸ್ವಂತ ಆಸ್ತಿಯಿಂದ ತಾನಾದರು
ಸುಖಪಡುತ್ತಾನೆಯೇ?
6 ತನಗೆ ತಾನೆ ಜಿಪುಣನಾಗಿರುವವನಿಗಿಂತ
ನೀಚನಿಲ್ಲ
ಇದು ಅವನ ದುಷ್ಟತನದ ಫಲ !

7 ಇಂಥವನು ಒಳ್ಳೆಯದನ್ನು ಮಾಡಿದರೆ,
ಅದು ಆಕಸ್ಮಿಕ
ಕಡೆಗೆ ತನ್ನ ದುಷ್ಟತನವನ್ನು ಬಯಲು
ಮಾಡುವುದು ದಿಟ.
8 ಮತ್ಸರವುಳ್ಳವನ ಕಣ್ಣು ಕೆಟ್ಟದು
ಇತರರನ್ನು ಹೀಯಾಳಿಸುವನವನು,
ಮುಖ ತಿರುವಿಕೊಂಡು.
9 ಜಿಪುಣನ ಕಣ್ಣಿಗೆ ಎಷ್ಟೇ ಇದ್ದರೂ ತೃಪ್ತಿಯಿಲ್ಲ
ಜಿಪುಣತನದಿಂದ ಒಣಗಿಹೋಗುವುದು
ಅವನ ಅಂತರಂಗ.
10 ಕೆಟ್ಟ ಕಣ್ಣುಳ್ಳವನು ಅನ್ನದಲ್ಲಿಯೂ ಜಿಪುಣನು
ಅವನು ಹೊಟ್ಟೆಗೆ ಸರಿಯಾಗಿ ಉಣ್ಣನು.
11 ಮಗನೇ, ನಿನ್ನ ಯೋಗ್ಯತೆಯ ಪ್ರಕಾರ
ಸುಖವಾಗಿರು
ಸರ್ವೇಶ್ವರನಿಗೆ ಯೋಗ್ಯವಾದ ಕಾಣಿಕೆ
ಸಲ್ಲಿಸುತ್ತಿರು.
12 ನೆನೆಸಿಕೊ, ಸಾವು ಬರಲು ವಿಳಂಬ
ಮಾಡುವುದಿಲ್ಲವೆಂದು
ಸಾವಿನ ಸಮಯ ನಿನಗೆ ತಿಳಿದಿಲ್ಲವೆಂದು.
13 ಸ್ನೇಹಿತರಿಗೆ ಸಹಾಯಮಾಡು
ನೀನು ಸಾಯುವುದರೊಳಗಾಗಿ
ಅವರಿಗೆ ಕೈಯೆತ್ತಿಕೊಡು ನಿನ್ನ ಶಕ್ತಿಗೆ
ಅನುಸಾರವಾಗಿ.
14 ಒಳ್ಳೆಯ ದಿನದ ಸುಖವನ್ನು
ಕಳೆದುಕೊಳ್ಳಬೇಡ
ಯೋಗ್ಯ ಮನದಾಶೆಯು ಓರೆಯಾಗಿ
ಹೋಗಲು ಬಿಡಬೇಡ.
15 ನಿನ್ನ ದುಡಿಮೆಯ ಫಲವನ್ನು ಇನ್ನೊಬ್ಬರಿಗೆ
ಬಿಡಬೇಕಾಗುತ್ತದಲ್ಲವೆ?
ನಿನ್ನ ಕಷ್ಟದ ಫಲವನ್ನು ಪರರು
ಹಂಚಿಕೊಳ್ಳುವರಲ್ಲವೆ?
16 ಕೊಡು, ಕೊಳ್ಳು; ಹೀಗೆ ಸಂತೋಷಪಡಿಸು
ನಿನ್ನ ಮನವನ್ನು
ಹುಡುಕಲಾಗದು ಮೃತ್ಯುಲೋಕದಲ್ಲಿ
ಮೃಷ್ಟಾನ್ನವನ್ನು.
17 ಎಲ್ಲ ಜೀವಿಗಳೂ ಮುಪ್ಪಾಗುವುವು ವಸ್ತ್ರದಂತೆ
ಆದಿಯಿಂದ ಇರುವ ಒಪ್ಪಂದವೆಂದರೆ
'ನೀ ಸತ್ತೇ ಸಾಯುವೆ' ಎಂಬುದೆ.
18 ಬೆಳೆದ ಮರದೆಲೆಗಳಲ್ಲಿ ಕೆಲವು ಉದುರುತ್ತವೆ,
ಕೆಲವು ಚಿಗುರುತ್ತವೆ

ರಕ್ತಮಾಂಸದ ಪ್ರಾಣಿಗಳಲ್ಲೂ ಒಂದು
ಗತಿಸುತ್ತದೆ, ಮತ್ತೊಂದು ಜನಿಸುತ್ತದೆ.
19 ಮಾನವ ಕೈಕೃತಿಗಳೆಲ್ಲ ಅಳಿದುಹೋಗುತ್ತವೆ
ಜೀರ್ಣವಾಗಿ
ಅವುಗಳನ್ನು ಮಾಡಿದವನೂ ಹೋಗುತ್ತಾನೆ
ಲಯವಾಗಿ.

**ಸುಜ್ಞಾನಿಗಳ ಸಂತಸ**

20 ಧನ್ಯನು ! ಸುಜ್ಞಾನದ ಬಗ್ಗೆ ಧ್ಯಾನಿಸುವವನು
ಧನ್ಯನು ! ವಿವೇಕದಿಂದ ಮಾತಾಡುವವನು.
21 ಸುಜ್ಞಾನದ ಮಾರ್ಗಗಳನ್ನು ಮನನ
ಮಾಡುವವನು
ಅದರ ರಹಸ್ಯಗಳನ್ನು ಕಂಡುಕೊಳ್ಳುವನು.
22 ಹೆಜ್ಜೆಯ ಜಾಡು ಹಿಡಿದು ಹೋಗುವವನಂತೆ
ಅದನ್ನು ಬೆನ್ನಟ್ಟಿಹೋಗುವನು
ಅದು ಹೋಗುವ ಮಾರ್ಗದಲ್ಲಿ ಅದಕ್ಕಾಗಿ
ಹೊಂಚಿಕೊಂಡಿರುವನು.
23 ಸುಜ್ಞಾನದ ಕಿಟಕಿಯಲ್ಲಿ ಆತ ಇಣಿಕಿ
ನೋಡಬಲ್ಲನು
ಅದರ ಬಾಗಿಲಲ್ಲಿಯೂ ನಿಂತು ಆಲಿಸಬಲ್ಲನು.
24 ಸುಜ್ಞಾನದ ಮನೆಯ ಪಕ್ಕದಲ್ಲಿ ತಂಗುವವನು
ಅದರ ಗೋಡೆಯಲ್ಲಿ ಮೊಳೆಯನ್ನು
ಜಡಿಯಬಲ್ಲನು;
25 ಸುಜ್ಞಾನದ ನೆರೆಯಲ್ಲಿ ಗುಡಾರವನ್ನು
ಕಟ್ಟುವವನು
ಸೌಭಾಗ್ಯವಿದ್ದಲ್ಲಿಯೇ ಇಳಿದುಕೊಳ್ಳುವನು.
26 ತನ್ನ ಮಕ್ಕಳನ್ನು ಅದರ ಆಶ್ರಯದಲ್ಲಿರಿಸುವನು
ಅದರ ಕೊಂಬೆಗಳ ಕೆಳಗೆ ವಸತಿಮಾಡುವನು.
27 ಬಿಸಿಲು ತಗಲದಂತೆ ಅದರ ನೆರಳಿನಲ್ಲಿರುವನು
ಅದರ ಪ್ರಭಾವದಲ್ಲಿ ತಂಗುವನು.

**15** ದೇವರಿಗೆ ಭಯಪಡುವವನೇ ಹೀಗೆ
ಮಾಡುವವನು
ಧರ್ಮನಿಷ್ಠೆಯುಳ್ಳವನು ಸುಜ್ಞಾನವನ್ನು
ಪಡೆಯುವನು.
2 ಅದು ಅವನನ್ನು ಸೇರಿಕೊಳ್ಳುವುದು
ತಾಯಿಯಂತೆ
ಅವನಿಗೆ ಉಪಚಾರಮಾಡುವುದು ತರುಣ
ಸತಿಯಂತೆ.

3 ಅವನಿಗೆ ವಿವೇಕವೆಂಬ ಅನ್ನವನ್ನು
ಉಣ್ಣಕೊಡುವುದು
ಜ್ಞಾನಜಲವನ್ನು ಕುಡಿಯಕೊಡುವುದು.
4 ಅವನು ಅದರಲ್ಲಿ ನೆಲೆಗೊಂಡಿರುವನು,
ಕದಲುವುದಿಲ್ಲ;
ಅದನ್ನೇ ಆತುಕೊಂಡಿರುವವನು,
ಆಶಾಭಂಗಪಡುವುದಿಲ್ಲ.
5 ಅವನ ನೆರೆಮನೆಯವರಿಗಿಂತಲೂ ಹೆಚ್ಚಾಗಿ
ಅದು ಅವನನ್ನು ಮೇಲಕ್ಕೆತ್ತುವುದು
ಸಭಾಮಧ್ಯದಲ್ಲಿ ಅವನು ಬಾಯಿತೆರೆಯುವಂತೆ
ಮಾಡುವುದು.
6 ಅವನು ಆನಂದ ಆಮೋದಗಳನ್ನು
ಹೊಂದುವನು
ಚಿರಕಾಲ ಹೆಸರುವಾಸಿಯಾಗಿ ಬಾಳುವನು.
7 ಅದನ್ನು ಹೊಂದಲಾರರು ಮಂದಮತಿಗಳು
ಅದನ್ನು ಕಾಣುವುದೇ ಇಲ್ಲ ಪಾಪಾತ್ಮರು.
8 ಅಹಂಕಾರಕ್ಕೆ ಅದು ಬಲು ದೂರ
ಸುಳ್ಳುಗಾರರು ಅದನ್ನು ಸ್ಮರಿಸುವುದೇ ಇಲ್ಲ.
9 ಪಾಪಾತ್ಮನ ಬಾಯಿಂದ ಹೊರಟ ಸ್ತುತಿ
ಇಂಪಾಗಿರುವುದಿಲ್ಲ
ಏಕೆಂದರೆ ಅದು ಅವನಿಗೆ ದೇವರಿಂದ
ಬಂದುದಲ್ಲ.
10 ಜ್ಞಾನದಿಂದ ಮಾಡಿದ ಸ್ತುತಿ ಇಂಪು
ಅದನ್ನು ವೃದ್ಧಿಗೊಳಿಸುವರು ದೇವರು.
11 'ನನ್ನ ಪಾಪಕ್ಕೆ ದೇವರೇ ಕಾರಣ' ಎಂದು
ಕೊಳ್ಳಬೇಡ
ಅವರು ಹಗೆಮಾಡುವುದನ್ನು ನೀನು
ನಡೆಸಬೇಡ.
12 'ತಪ್ಪುಮಾಡುವಂತೆ ನನಗೆ ದಾರಿ ತಪ್ಪಿಸಿದವರು
ದೇವರೇ' ಎನ್ನಬೇಡ
ಏಕೆಂದರೆ ಪಾಪಾತ್ಮರ ನೆರವು ದೇವರಿಗೆ
ಬೇಕಾಗಿಲ್ಲ.
13 ಸರ್ವೇಶ್ವರ ಪ್ರತಿಯೊಂದು ಹೀನಕೃತ್ಯವನ್ನು
ದ್ವೇಷಿಸುತ್ತಾರೆ
ಆತನಿಗೆ ಭಯಪಡುವವರು ಕೂಡ
ಅದನ್ನು ಹೀನೈಸುತ್ತಾರೆ.
14 ಆದಿಯಲ್ಲಿ ದೇವರು ಮನುಷ್ಯನನ್ನು
ಸೃಷ್ಟಿಸಿದರು
ಸ್ವಂತ ಇಚ್ಛಾನುಸಾರ ನಡೆಯಲು
ಅವನನ್ನು ಬಿಟ್ಟರು.

15 ನೀನು ಇಚ್ಛಿಸಿದೆಯಾದರೆ ಆತನ ಆಜ್ಞೆಗಳನ್ನು
ಅನುಸರಿಸಿ ನಡೆವೆ
ಹೀಗೆ ನಂಬಿಗಸ್ಥನಾಗಿ ದೇವರ ಚಿತ್ತಾನುಸಾರ
ಬಾಳುವೆ.
16 ನಿನ್ನ ಮುಂದೆ ಇಟ್ಟಿರುವರು ಬೆಂಕಿಯನ್ನು
ಹಾಗು ನೀರನ್ನು
ನೀನು ಆಯ್ದುಕೊಳ್ಳಬಹುದು ನಿನಗೆ
ಬೇಕಾದುದನ್ನು.
17 ಜೀವನ್ಮರಣಗಳು ಇರಿಸಲಾಗಿವೆ ಮನುಷ್ಯನ
ಎದುರಿನಲ್ಲೆ
ಅವನು ಇಷ್ಟಪಟ್ಟದ್ದನ್ನು ಕೊಡಲಾಗುವುದು
ಅವನಿಗೆ.
18 ಏಕೆಂದರೆ ದೇವರ ಜ್ಞಾನ ಅಪರಿಮಿತ
ಆತ ಅಪೂರ್ವ ಬಲವಂತ, ಎಲ್ಲವನು
ವೀಕ್ಷಿಸುವಂಥವ.
19 ದೇವರಿಗೆ ಭಯಪಡುವವರ ಮೇಲಿದೆ
ಆತನ ಕೃಪಾಕಟಾಕ್ಷ
ಮನುಷ್ಯನು ಮಾಡುವ ಪ್ರತಿಯೊಂದೂ
ಆತನಿಗೆ ವ್ಯಕ್ತ.
20 ದುರುಳನಾಗೆಂದು ದೇವರು ಯಾರಿಗೂ
ಆಜ್ಞಾಪಿಸಲಿಲ್ಲ,
ಪಾಪಮಾಡಲು ಯಾರಿಗೂ ಅನುಮತಿ
ಕೊಟ್ಟಿಲ್ಲ.

### ಹಟಮಾರಿಗಳ ದುರ್ಗತಿ

**16** ನಿರುಪಯುಕ್ತ ಮಕ್ಕಳ ಬಹು
ಸಂಖ್ಯೆಯನ್ನು ಬಯಸಬೇಡ
ಭಕ್ತಿಹೀನ ಮಕ್ಕಳಲ್ಲಿ ಆನಂದಪಡಬೇಡ.
2 ದೇವರಲ್ಲಿ ಅವರಿಗೆ ಭಯಭಕ್ತಿ ಇಲ್ಲದಿರಲು
ಸಂತೋಷಿಸಬೇಡ ಅವರು ಬೆಳೆದು ಅಧಿಕ
ಸಂಖ್ಯೆಯಲ್ಲಿದ್ದರೂ.
3 ಅವರ ಬದುಕಿನಲ್ಲಿ ಭರವಸೆಯಿಡಬೇಡ
ಅವರ ಅಧಿಕ ಸಂಖ್ಯೆಯಲಿ ಮನಸ್ಸಿಡಬೇಡ.
ಸಜ್ಜನರಲ್ಲದ ಸಾವಿರ ಮಕ್ಕಳಿಗಿಂತ ಒಬ್ಬನೇ ಮೇಲು
ದುರುಳ ಮಕ್ಕಳಿಗಿಂತ ಅವರಿಲ್ಲದೆ
ಮಡಿಯುವುದೇ ಲೇಸು.
4 ವಿವೇಕಿಯಾದ ಒಬ್ಬನಿಂದ ಊರು ಬಲಿಯುತ್ತದೆ
ಅಧರ್ಮಿಗಳ ಪೀಳಿಗೆಯು
ಅಳಿದುಹೋಗುತ್ತದೆ.

5 ಇಂಥ ಅನೇಕ ಘಟನೆಗಳನ್ನು ಕಣ್ಣಾರೆ
ಕಂಡಿದ್ದೇನೆ
ಇವುಗಳಿಗಿಂತ ಹೆಚ್ಚಿನವುಗಳನ್ನು ಕಿವಿಯಾರೆ
ಕೇಳಿದ್ದೇನೆ.
6 ಪಾಪಾತ್ಮರ ಸಭೆಯಲ್ಲಿ ಹೊತ್ತಿಕೊಳ್ಳುವುದು ಬೆಂಕಿ
ಅವಿಧೇಯ ಜನರ ನಿಮಿತ್ತ ಉರಿಯುವುದು ಕೋಪಾಗ್ನಿ.
7 ದೇವರು ಮನ್ನಿಸಲಿಲ್ಲ ಪೂರ್ವಕಾಲದ
ಪ್ರಚಂಡ ಪುರುಷರನ್ನು
ಸ್ವಶಕ್ತಿಯಲ್ಲಿಯೇ ನಂಬಿಕೆಯಿಟ್ಟು
ಬಿದ್ದುಹೋದ ಆ ನರರನ್ನು.
8 ಆತ ಉಳಿಸಲಿಲ್ಲ ಲೋಟನು ಪ್ರವಾಸಿಯಾಗಿದ್ದ
ಪ್ರದೇಶವನ್ನು
ಅವರ ಅಹಂಕಾರಕ್ಕಾಗಿ ಹೇಸೈಸಿಬಿಟ್ಟನು
ಅವರನ್ನು.
9 ನಾಶಕ್ಕೆ ಗುರಿಯಾದ ಜನಾಂಗವನು ಆತ
ಕನಿಕರಿಸಲಿಲ್ಲ
ತಮ್ಮ ಪಾಪದಲ್ಲಿಯೆ ಆದರವರು ಸಂಹಾರ.
10 ಆತ ದಂಡಿಸದೆ ಬಿಡಲಿಲ್ಲ ಆರು ಲಕ್ಷ
ಕಾಲಾಳುಗಳನ್ನು
ಕಠಿಣ ಹೃದಯಿಗಳಾಗಿದ್ದ ಆ ಜನರನ್ನು.
11 ಒಬ್ಬನೇ ಹಠಮಾರಿಯಿದ್ದರೂ ಅವನನ್ನು
ಶಿಕ್ಷಿಸದಿದ್ದರೆ ಆಶ್ಚರ್ಯವಾಗುತ್ತಿತ್ತು !
ಕಾರಣ, ದೇವನಲ್ಲಿವೆ ಕೃಪೆಯೂ ಕೋಪವೂ;
ಅತಿ ಕನಿಕರವುಳ್ಳವನಾಗಿದ್ದರೂ
ಸುರಿದುಬಿಡುವನು ಕೋಪವನ್ನು.
12 ಆತನಲ್ಲಿ ಅಧಿಕವಾಗಿದೆ ಕರುಣೆ;
ಅಂತೆಯೆ ಕಠಿಣವಾಗಿದೆ ದಂಡನೆ
ನ್ಯಾಯತೀರಿಸುವನಾತ ಅವನವನ ಕೃತ್ಯಗಳಿಗೆ
ತಕ್ಕಂತೆ.
13 ತನ್ನ ಕೊಳ್ಳೆಯೊಂದಿಗೆ ಪಾರಾಗಲಾರ
ಪಾಪಿಯು
ವಿಫಲವಾಗದು ಭಕ್ತರ ಕಷ್ಟಸಹಿಷ್ಣುತೆಯು.
14 ಪ್ರತಿಯೊಬ್ಬನಿಗೆ ಸಂಭಾವನೆ ದಕ್ಕುವುದು
ಅವನ ಕಾರ್ಯಕ್ಕನುಸಾರವಾಗಿ
ಪ್ರತಿಯೊಬ್ಬನು ಅನುಭವಿಸುವನು ತನ್ನ
ನಡತೆಗೆ ಸರಿಯಾಗಿ.
15 ಸರ್ವೇಶ್ವರನಿಂದ ಫರೋಹನ ಹೃದಯ
ಕಠಿಣವಾಯಿತು
ಹೀಗೆ ವಿಶ್ವವು ದೇವರ ಮಹತ್ಕಾರ್ಯಗಳನ್ನು
ಅರಿತುಕೊಳ್ಳುವಂತಾಯಿತು.

16 ಸೃಷ್ಟಿಸಮಸ್ತಕ್ಕೂ ದೇವರು ತನ್ನ
ಕರುಣೆಯನ್ನು ಪ್ರಕಟಿಸಿದ್ದಾರೆ
ಮಾನವನ ಮಧ್ಯೆ ಕತ್ತಲನ್ನೂ ಬೆಳಕನ್ನೂ
ಬೇರ್ಪಡಿಸಿದ್ದಾರೆ.

**ಪ್ರತಿಫಲ ನಿಶ್ಚಯ**

17 ‘ನಾನು ದೇವರಿಗೆ ಮರೆಯಾಗಿರುವೆ;
ಉನ್ನತದಲ್ಲಿ ನನ್ನನು ನೆನೆಸುವನಾರು?
ಗಣನಾತೀತ ಜನಸಂದಣಿಯಲಿ ನನ್ನನು
ಗುರುತಿಸಬಲ್ಲವರಾರು?
ಮೇರೆಯಿಲ್ಲದ ಸೃಷ್ಟಿಯಲಿ ನನ್ನ ಆತ್ಮವು
ಮಾತ್ರ ಎಷ್ಟರದು?’
ಈ ಪರಿಯೆಲ್ಲ ನೀನು ಹೇಳಿಕೊಳ್ಳದಿರು.
18 ಕದಲುವುದು ಆಕಾಶ, ಆಕಾಶಗಳ ಆಕಾಶ
ಭೂಮಿ, ಸಾಗರ;
ದೇವರು ಪ್ರತ್ಯಕ್ಷವಾಗುವಾಗ.
19 ಆತ ನೋಡುವಾಗ ಗಡಗಡನೆ
ನಡುಗುವುವು
ಬೆಟ್ಟಗಳೂ ಭೂಮಿಯ ಅಸ್ತಿಭಾರವೂ.
20 ಯಾವ ಹೃದಯವೂ ಆಲೋಚಿಸುವುದಿಲ್ಲ
ಈ ವಿಷಯಗಳನು
ಗ್ರಹಿಸುವವನಾರು ಆತನ ರೀತಿನೀತಿಗಳನು?
21 ಬಿರುಗಾಳಿ ಒಂದುಂಟು; ಅದನ್ನು ಯಾವ
ಮನುಷ್ಯನೂ ಕಂಡಿಲ್ಲ
ದೇವರ ಕಾರ್ಯದ ಬಹುಭಾಗ
ಕಣ್ಣಿಗೆ ಕಾಣುವುದಿಲ್ಲ.
22 ಆತನ ನೀತಿಕಾರ್ಯಗಳನ್ನು ಯಾರಿಂದ
ಮೆಚ್ಚಿಕೊಳ್ಳಲು ಸಾಧ್ಯ?
ಅದಕ್ಕಾಗಿ ಯಾರು ತಾನೇ ಕಾದುಕೊಂಡಿರಲು
ಸಾಧ್ಯ?
ಆತನ ಒಪ್ಪಂದ ಈಡೇರುವ ಕಾಲ
ಇನ್ನೂ ದೂರವಿದೆಯಲ್ಲಾ?
23 ಇಂಥ ಮಾತುಗಳನ್ನೆಲ್ಲ ತಲೆಯಲಿ
ತುಂಬಿಕೊಳ್ಳುವವನು ಬುದ್ಧಿಹೀನನು
ಹೀಗೆಲ್ಲಾ ಹುಚ್ಚುಹುಚ್ಚಾಗಿ
ಆಲೋಚಿಸುತ್ತಿರುವನು ಅವನು.

**ಸೃಷ್ಟಿಯಲ್ಲಿ ದೇವರ ಸುಜ್ಞಾನ**

24 ಮಗನೇ, ವಿವೇಕಿಯಾಗು ನನ್ನ ಮಾತನ್ನಾಲಿಸು
ಪೂರ್ಣಮನಸ್ಸಿನಿಂದ ನನ್ನ ಮಾತುಗಳನ್ನು

ಗಮನಿಸು.
25 ಸುಶಿಕ್ಷಣವನ್ನು ತಿಳಿಯಪಡಿಸುವೆನು
ಸಮತೂಕವಾಗಿ
ಜ್ಞಾನವನ್ನು ತಿಳಿಸಿಕೊಡುವೆನು
ಯಥಾರ್ಥವಾಗಿ.
26 ದೇವರ ಕಾರ್ಯಗಳು ನ್ಯಾಯವಾಗಿವೆ
ಆರಂಭದಿಂದಲೇ
ಅವುಗಳ ಭಾಗೋಪಭಾಗಗಳನ್ನು
ವಿಂಗಡಿಸಿಹನು ನಿರ್ಮಾಣ ಕಾಲದಿಂದಲೇ.
27 ಎಂದೆಂದಿಗೂ ನಿಲ್ಲದಂತೆ ಕ್ರಮಪಡಿಸಿರುವನು
ತನ್ನ ಕಾರ್ಯಗಳನ್ನೆಲ್ಲ
ಅವುಗಳಿಗೆ ಹಸಿವು–ದಣಿವುಗಳಿಲ್ಲ;
ತಮ್ಮ ಕೆಲಸವನ್ನು ಅವು ನಿಲ್ಲಿಸುವುದಿಲ್ಲ.
28 ಒಂದು ಇನ್ನೊಂದನ್ನು ದೂಡುವುದಿಲ್ಲ
ಆತನ ಅಪ್ಪಣೆಯನ್ನು ಎಂದೂ
ಉಲ್ಲಂಘಿಸುವುದಿಲ್ಲ.
29 ಆಮೇಲೆ ದೇವರು ಭೂಮಿಯನ್ನು
ಕಟಾಕ್ಷಿಸಿದರು
ಅದನ್ನು ಸಕಲ ಸೌಭಾಗ್ಯದಿಂದ ತುಂಬಿಸಿದರು.
30 ಎಲ್ಲಾ ತರದ ಜೀವಜಂತುಗಳು ತುಂಬಿ
ಕೊಂಡವು ಅದರೊಳಗೆ
ಕೊನೆಗೆ ಅವು ಮರಳಿ ಮಣ್ಣಾಗಿ ಸೇರುವುವು
ಅದರಲ್ಲೆ.

**17** ಸರ್ವೇಶ್ವರ ಮನುಷ್ಯನನ್ನು
ಮಣ್ಣಿನಿಂದ ಸೃಷ್ಟಿಸಿದರು
ಪುನಃ ಮಣ್ಣಿಗೇ ಅವನು ಸೇರುವಂತೆ
ಮಾಡಿದರು.
2 ಮಾನವನಿಗೆ ನಿಯಮಿತ ಕಾಲಗಳನ್ನೂ
ದಿನಗಳನ್ನೂ ನೇಮಿಸಿದರು
ಭೂಮಿಯ ಮೇಲಿರುವ ಸಕಲದರ ಮೇಲೆ
ಅವನಿಗೆ ಅಧಿಕಾರ ವಹಿಸಿದರು.
3 ತಮ್ಮ ಪ್ರತಿರೂಪದಲ್ಲಿಯೇ ಮಾನವನನ್ನು
ಸೃಷ್ಟಿಸಿದರು
ಅವನಿಗೆ ಬೇಕಾದ ಶಕ್ತಿಯನು ಅನುಗ್ರಹಿಸಿದರು.
4 ಮಾಡಿದರು ಎಲ್ಲಾ ಜೀವಿಗಳು ಮನುಷ್ಯನಿಗೆ
ಭಯಪಡುವಂತೆ
ಅಂತೆಯೇ ಮನುಷ್ಯನು ಪಶುಪಕ್ಷಿಗಳ ಮೇಲೆ
ಒಡೆತನ ಮಾಡುವಂತೆ.

5 ಪಂಚೇಂದ್ರಿಯಗಳನ್ನು ಸರ್ವೇಶ್ವರ
ಮನುಷ್ಯನಿಗೆ ದಯಪಾಲಿಸಿದರು
ಆರನೇದಾಗಿ, ತನ್ನ ಬುದ್ಧಿಶಕ್ತಿಯಲ್ಲಿ ಅವನು
ಪಾಲುಗಾರನನ್ನಾಗಿ ಮಾಡಿದರು
ಇವುಗಳನ್ನೆಲ್ಲಾ ವಿಚಾರಿಸಿ ಗ್ರಹಿಸಿಕೊಳ್ಳಲು
ಏಳನೇ ವರವನ್ನು ನೀಡಿದರು.
6 ಇದಲ್ಲದೆ, ತಿಳಿದುಕೊಳ್ಳಲು ಅವರಿಗೆ
ಬುದ್ಧಿಮತಿಯನ್ನು ನೀಡಿದರು
ನಾಲಗೆ, ಕಣ್ಣು, ಕಿವಿ, ಹೃದಯಗಳನು
ದಯಪಾಲಿಸಿದರು.
7 ಜ್ಞಾನವನ್ನೂ ಅರಿವನ್ನೂ ಅವನಲ್ಲಿ
ತುಂಬಿಸಿದರು
ಒಳ್ಳೆಯದು ಕೆಟ್ಟದು ಯಾವುದೆಂಬುದನ್ನು
ವಿವೇಚಿಸುವಂತೆ ಮಾಡಿದರು.
8 ತನ್ನ ಕಾರ್ಯಗಳ ಮಹತ್ವವನ್ನು ಅವನಿಗೆ
ತೋರಿಸಬೇಕೆಂದು
ಇರಿಸಿದರು ಅವನ ಅಂತಃಕರಣದ ಮೇಲೆ
ತಮ್ಮ ದೃಷ್ಟಿಯನು.
9 ತಮ್ಮ ಈ ಎಲ್ಲ ಕಾರ್ಯಗಳನು ಮನುಷ್ಯ
ಹೊಗಳುವಂತೆ
ಅನುಗ್ರಹಿಸಿದರು ಸೌಲಭ್ಯವನ್ನು ಅವನಿಗೆ.
10 ವಂದಿಸುವರು ಜನರು ಆತನ
ಪವಿತ್ರ ನಾಮವನು
ಹೊಗಳುವರು ಆತನ ಕಾರ್ಯಗಳ
ಮಹಿಮೆಯನು.
11 ದಯಪಾಲಿಸಿದನಾತ ಅವರಿಗೆ ವಿವೇಕವನು
ಸ್ವಾಸ್ತ್ಯವಾಗಿ ನೀಡಿದನು ಜೀವದಾಯಕ
ಧರ್ಮಶಾಸ್ತ್ರವನು.
12 ನರರೊಂದಿಗೆ ಮಾಡಿಕೊಂಡನಾತ ಶಾಶ್ವತ
ಒಡಂಬಡಿಕೆಯನು
ತೋರಿಸಿಕೊಟ್ಟನು ಅವರಿಗೆ ತನ್ನ
ವಿಧಿವಚನಗಳನು.
13 ಮಾನವರ ಕಣ್ಣುಗಳು ಕಂಡವು ಆತನ
ಮಹಿಮೆಯ ಪ್ರಭಾವವನು
ಅವರ ಕಿವಿಗಳು ಕೇಳಿದವು ಆತನ
ಧ್ವನಿಯ ಗಾಂಭೀರ್ಯವನು.
14 ‘ಎಲ್ಲಾ ದುಷ್ಟಕಾರ್ಯಗಳ ಬಗ್ಗೆ ಎಚ್ಚರಿಕೆ’
ಎಂದು ವಿಧಿಸಿದನಾತ
ನೆರೆಯವನನ್ನು ಕುರಿತ ನಿಯಮವನು
ಆಜ್ಞಾಪಿಸಿದನಾತ.

### ಸರ್ವೇಶ್ವರಸ್ವಾಮಿಯೇ ನ್ಯಾಯಾಧೀಶ

15 ಮನುಷ್ಯರ ಮಾರ್ಗಗಳಿವೆ ನಿತ್ಯವೂ
ದೇವರ ಎದುರಿಗೆ
ಅವು ಮರೆಯಾಗಿರಲಾರವು ಆತನ ದೃಷ್ಟಿಗೆ.
16 ಬಾಲ್ಯದಿಂದಲೇ ಕೇಡಿಗೆ ಒಯ್ಯುತ್ತವೆ
ಮಾನವರ ಮಾರ್ಗಗಳು
ಅವುಗಳಿಂದಾಗದು ಕಲ್ಲು ಹೃದಯವನ್ನು
ಮಾಂಸದ ಹೃದಯವನ್ನಾಗಿ ಮಾಡಲು.
17 ಒಬ್ಬೊಬ್ಬ ದೊರೆಯನ್ನು ನೇಮಿಸಿದನಾತ
ಸಕಲ ರಾಷ್ಟ್ರಗಳಿಗೆ
ತಾನೇ ದೊರೆಯಾದನು ಇಸ್ರಯೇಲರಿಗೆ.
18 ಇಸ್ರಯೇಲೇ ಆತ ಶಿಸ್ತಿನಿಂದ ಬೆಳೆಸುವ
ಚೊಚ್ಚಲು ಮಗನು
ಅವನನ್ನು ನಿರಾಕರಿಸದೆ ನೀಡುವನವನಿಗೆ
ಪ್ರೀತಿಯ ಬೆಳಕನ್ನು.
19 ಆತನ ಮುಂದೆ ಅವರ ಕಾರ್ಯಗಳೆಲ್ಲ
ಸೂರ್ಯನ ಬೆಳಕಿನಂತೆ
ಆತನ ದೃಷ್ಟಿಯಿರುವುದು ಸದಾ ಅವರ
ಮಾರ್ಗಗಳ ಮೇಲೆ.
20 ಮರೆಯಾಗಿಲ್ಲ ಆತನಿಗೆ ಅವರ
ಅಧರ್ಮಗಳೆಲ್ಲ
ಆತನ ಎದುರಿನಲ್ಲಿವೆ ಅವರ ಪಾಪಗಳೆಲ್ಲ.
21 ಸರ್ವೇಶ್ವರ ಒಳ್ಳೆಯವರು,
ತಮ್ಮ ಸೃಷ್ಟಿಗಳನ್ನು ಕೈ ಬಿಡುವುದಿಲ್ಲ;
ಬದಲಿಗೆ ಅವುಗಳನ್ನು ಕಾಪಾಡುವರು,
ತೊರೆದುಬಿಡುವುದಿಲ್ಲ.
22 ಮನುಜರು ಮಾಡುವ ದಾನಧರ್ಮ,
ಆತನಿಗೆ ಮುದ್ರಯುಂಗುರದಂತೆ;
ಅವರ ಸತ್ಕಾರ್ಯಗಳನ್ನು ಕಾಪಾಡುವನು,
ಕಣ್ಣುಗುಡ್ಡೆಯಂತೆ.
23 ತದನಂತರ ಆತನೆದ್ದು ಅವರಿಗೆ ಕೊಡುವನು
ಸಂಭಾವನೆಯನ್ನು
ಹೊರಿಸುವನು ಅವರ ಮೇಲೆ ಅವರವರ
ಪ್ರತಿಫಲವನ್ನು.

### ಮನಪರಿವರ್ತನೆ

24 ತನ್ನಲ್ಲಿಗೆ ಬರಗೊಡಿಸುವನು ಪಶ್ಚಾತ್ತಾಪ
ಪಡುವವನನ್ನು
ಸಂತೈಸುವನು ತಾಳ್ಮೆಗೆಡುತ್ತಿರುವವರನ್ನು.

25 ಸರ್ವೇಶ್ವರನ ಕಡೆ ತಿರುಗಿಕೊಂಡು, ಪಾಪವನ್ನು
ತೊರೆದುಬಿಡು;
ಆತನನ್ನು ಪ್ರಾರ್ಥಿಸಿ, ಅಪರಾಧಗಳ
ಅಡ್ಡಿಯನ್ನು ಕಡಿಮೆಮಾಡು.
26 ಮಹೋನ್ನತನ ಕಡೆ ಹಿಂದಿರುಗಿ,
ಅಧರ್ಮವನ್ನು ಬಿಡು
ಅಸಹ್ಯ ಕೃತ್ಯಗಳನ್ನು ಸಂಪೂರ್ಣವಾಗಿ
ಹಗೆಮಾಡು.
27 ಜೀವಿಸುತ್ತಾ ಮಹೋನ್ನತನಿಗೆ ಉಪಕಾರ
ಸ್ತುತಿಮಾಡುವವರನ್ನು ಬಿಟ್ಟರೆ
ಪಾತಾಳದಲ್ಲಿ ಆತನಿಗೆ
ಸ್ತುತಿಹಾಡುವವರಾರಿದ್ದಾರೆ?
28 ಕೃತಜ್ಞತಾಸ್ತುತಿ ಇರುವುದಿಲ್ಲ ಜೀವಿಸದೆ
ಇದ್ದವನಲ್ಲಿ
ಅಂತೆಯೇ ಅದು ಲಯವಾಗುತ್ತದೆ
ಮೃತರಾದವರಲ್ಲಿ
ಸರ್ವೇಶ್ವರನ ಸ್ತುತಿಗೈವನು ಜೀವಂತನು
ಹಾಗು ಆರೋಗ್ಯಶಾಲಿ.
29 ನಮ್ಮ ದೇವರಾದ ಸರ್ವೇಶ್ವರನ ಕೃಪೆ
ಎಷ್ಟು ಘನವಾದುದು
ಶುದ್ಧರಾಗಿ ಆತನ ಕಡೆ ತಿರುಗುವವರ ಮೇಲೆ
ಆತನ ಕನಿಕರ ಎಷ್ಟು ವಿಶೇಷವಾದುದು !
30 ಸರ್ವವೂ ಇರಲಾರದು ಮನುಷ್ಯ
ಮಾತ್ರದವರಲ್ಲಿ
ಕಾರಣ, ಅಮರತ್ವವು ಇಲ್ಲ ಅವರಲ್ಲಿ.
31 ಸೂರ್ಯನಿಗಿಂತ ಪ್ರಕಾಶಮಾನವಾದುದು
ಏನಿದೆ?
ಆದರೂ ಅದರ ಬೆಳಕು ಕುಂದುತ್ತದೆ
ಕೆಡುಕನ ಆಲೋಚನೆ ಕೇವಲ ರಕ್ತಮಾಂಸದಂತಿದೆ.
32 ದೇವರ ದೃಷ್ಟಿಯಲ್ಲಿವೆ ಉನ್ನತಾಕಾಶದ
ಶಕ್ತಿಗಳು
ನರಮಾನವರೆಲ್ಲರು ಕೇವಲ ಮಣ್ಣು –
ಬೂದಿಯು.

## ಸರ್ವೇಶ್ವರನ ಹಿರಿಮೆ

**18** 1–2 ಸದಾ ಜೀವಂತವಾಗಿರುವಾತನೇ
ನಿರ್ಮಿಸಿದನು ಒಟ್ಟಿನಲ್ಲಿ ಎಲ್ಲವನ್ನು.
ಸರ್ವೇಶ್ವರನೊಬ್ಬನೇ
ಸತ್ಯಸ್ವರೂಪನೆಂದು ಎಣಿಸಲ್ಪಡುವನು

ಆತನನ್ನು ಬಿಟ್ಟರೆ ಅಂಥವನಿಲ್ಲ ಮತ್ತೆ
ಯಾವನು.
3 ಆತ ನಡೆಸುತ್ತಾನೆ ಕೈಚಳಕದಿಂದ ಲೋಕವನ್ನು
ಎಲ್ಲವು ಪಾಲಿಸುತ್ತವೆ ಆತನ ಚಿತ್ತವನ್ನು,
ಆತನೆ ಸರ್ವಕ್ಕೂ ಅರಸ
ಪವಿತ್ರಾಪವಿತ್ರವಾದುವುಗಳನ್ನು
ವಿಂಗಡಿಸುತ್ತಾನೆ ಶಕ್ತಿಯಿಂದ.
4 ತನ್ನ ಕೆಲಸಗಳನ್ನು ಪ್ರಕಟಿಸಲು ಯಾರಿಗೂ
ಆತ ಸಾಕಷ್ಟು ಶಕ್ತಿಯನ್ನಿತ್ತಿಲ್ಲ
ಆತನ ಮಹತ್ಕಾರ್ಯಗಳ ಪರಿಯನ್ನರಿಯಲು
ಯಾರಿಗೂ ಸಾಧ್ಯವಿಲ್ಲ.
5 ಆತನ ಮಹಿಮಾಶಕ್ತಿಯ ನೆಲೆಯನ್ನು
ತಿಳಿಯಬಲ್ಲವನಾರು?
ಆತನ ಕೃಪಾಕಾರ್ಯಗಳನ್ನು ಬಣ್ಣಿಸ
ಬಲ್ಲವನಾರು?
6 ಯಾರಿಗೂ ಸಾಧ್ಯವಿಲ್ಲ ಅವುಗಳಿಗೆ ಒಂದನ್ನು
ಕೂಡಿಸಲಿಕ್ಕೆ ಅಥವಾ ಕಳೆಯಲಿಕ್ಕೆ;
ಸರ್ವೇಶ್ವರನಾ ಮಹತ್ಕಾರ್ಯಗಳು ಅಗಮ್ಯ
ಪರಿಶೋಧನೆಗೆ.
7 ಮನುಷ್ಯ ತನಗೆ ಸಾಧ್ಯವಿದ್ದಷ್ಟನ್ನು ಹೇಳಿ
ಮುಗಿಸುವಾಗಲೂ
ಆರಂಭದಲ್ಲೇ ಇರುತ್ತಾನೆ ಮುಕ್ತಾಯ
ಮಾಡುವಾಗಲೂ
ತೋಚದೆಯಿರುತ್ತಾನೆ ಏನು ಹೇಳಬೇಕೆಂದು.

## ಮಾನವನ ಶೂನ್ಯತೆ

8 ಮನುಷ್ಯನು ಎಷ್ಟು ಮಾತ್ರದವ?
ಅವನಿಂದ ಏನು ಪ್ರಯೋಜನ?
ಅವನಿಗೆ ಯಾವುದು ಹಿತ, ಯಾವುದು ಅಹಿತ?
9 ಮನುಷ್ಯನ ಆಯುಷ್ಕಾಲ
ಹೆಚ್ಚೆಂದರೆ ನೂರು ವರ್ಷ.
10 ಆ ವರ್ಷಗಳು ಕೆಲವೇ ನಿತ್ಯಕಾಲದ ಮುಂದೆ
ಸಮುದ್ರದ ನೀರಹನಿಯಂತೆ,
ಉಸುಬಿನ ಕಣದಂತೆ.
11 ಈ ಕಾರಣ, ದೇವರು ದೀರ್ಘಶಾಂತರು
ನರರ ಬಗ್ಗೆ
ತಮ್ಮ ಕೃಪೆಯನ್ನು ಸುರಿಸಿದರು ಅವರ
ಮೇಲೆ.
12 ಮನುಷ್ಯನ ಅಂತ್ಯವು ಕೆಟ್ಟದ್ದೇ ಎಂಬುದನ್ನು
ಮನಗಂಡರು

ಆದುದರಿಂದ ತಮ್ಮ ಕ್ಷಮಾದಾನವನ್ನು
ಹೆಚ್ಚಿಸಿದರು.

13 ಮನುಷ್ಯನ ದಯಾರಸ ನೆರೆಯವರಿಗೆ ಮಾತ್ರ
ಹರಿಯುವುದು
ದೇವರ ದಯೆಯೋ ಸಕಲ ಮನುಷ್ಯರ
ಮೇಲೂ ಇರುವುದು.
ಕುರುಬನು ಕುರಿಹಿಂಡನು ಸಲಹುವಂತೆ
ಆತ ಮಾಡುತ್ತಾನೆ
ಗದರಿಸಿ, ಎಚ್ಚರಿಸಿ, ಬುದ್ಧಿಹೇಳಿ, ಸನ್ಮಾರ್ಗಕ್ಕೆ
ತಿರುಗಿಸುತ್ತಾನೆ.

14 ಆತ ದಯೆತೋರಿಸುವನು ತನ್ನ ಎಚ್ಚರಿಕೆಯ
ಮಾತನ್ನು ಗಮನಿಸುವವರಿಗೆ
ಆಸಕ್ತಿಯಿಂದ ಆತನ ವಿಧಿನಿಯಮಗಳನ್ನು
ಅರಸುವವರಿಗೆ.

### ದಾನ–ವಿಧಾನ

15 ಮಗನೇ, ನಿನ್ನ ಸತ್ಕಾರ್ಯಗಳಿಗೆ ಕಳಂಕ
ತರಬೇಡ
ದಾನಕೊಡುವಾಗ ಬೈದು ಕೊಡಬೇಡ.

16 ಸೆಕೆಯನ್ನು ಆರಿಸುತ್ತದೆ ಮಂಜು
ಕೊಟ್ಟ ದಾನಕ್ಕಿಂತ ಆಡಿದ ಮಾತೇ ಮೇಲು.

17 ದಾನಕ್ಕಿಂತ ಒಳ್ಳೆಯ ಮಾತು ಲೇಸು
ದಯಾಳುವಿನಲ್ಲಿರುತ್ತವೆ ಇವೆರಡೂ.

18 ಮೂಢನು ಕೊಡುವನು ನಿಷ್ಕರುಣೆಯಿಂದ
ಹಂಗಿಸುತ್ತಾ
ಅರೆಮನಸ್ಸಿನವನು ದಾನನೀಡುತ್ತಾನೆ
ಕಣ್ಣಿನ ಕಳೆಯನ್ನು ಕುಂದಿಸುತ್ತಾ.

### ಚಿಂತನೆ ಮುಂದಾಲೋಚನೆ

19 ಮಾತಾಡುವ ಮೊದಲು ಕಲಿತುಕೊ
ಕಾಯಿಲೆ ಬರದಂತೆ ಆರೋಗ್ಯ ಕಾಪಾಡಿಕೊ.

20 ನಿನ್ನನ್ನೆ ಪರೀಕ್ಷಿಸಿಕೊ ನ್ಯಾಯತೀರ್ಪು ಬರುವ
ಮುಂಚೆಯೇ
ದೇವರು ಬರುವ ದಿನದಂದು ದೊರಕುವುದು
ನಿನಗೆ ದಯೆ.

21 ಕಾಯಿಲೆ ಬರುವುದಕ್ಕೆ ಮೊದಲು
ನಿನ್ನನ್ನೇ ತಗ್ಗಿಸಿಕೊ
ಪಾಪಕಟ್ಟಿಕೊಂಡ ಮೇಲಾದರು
ದೇವರ ಕಡೆ ತಿರುಗಿಕೊ.

22 ಅಡ್ಡಿಬಾರದಿರಲಿ ತಕ್ಕ ಸಮಯದಲಿ

ಹರಕೆ ಸಲ್ಲಿಸಲು
ಮರಣದವರೆಗೆ ಕಾದಿರಬಾರದು ನಿನ್ನ
ಋಣ ತೀರಿಸಲು.
23 ನಿನ್ನನ್ನೇ ಸಿದ್ಧಪಡಿಸಿಕೊ ಹರಕೆ ಮಾಡುವ
ಮುಂಚೆ
ನೀನಾಗಬೇಡ ಸರ್ವೇಶ್ವರನನ್ನು
ಪರೀಕ್ಷಿಸುವವನಂತೆ.
24 ಅಂತ್ಯಕಾಲದಲ್ಲಿ ಬರುವ ದೈವಕೋಪವನ್ನು
ಕುರಿತು ಯೋಚಿಸು
ಮುಯ್ಯಿ ತೀರಿಸುವ ದಿನದಲ್ಲಿ ಆತ
ವಿಮುಖನಾಗುವುದನ್ನು ನೆನಸು.
25 ಹೊಟ್ಟೆ ತುಂಬಾ ಇರುವಾಗ
ಹಸಿವೆಯ ದಿನಗಳನ್ನು ನೆನಸಿಕೊ
ಶ್ರೀಮಂತಿಕೆ ಬಂದಾಗ ಬಡತನದ
ಬವಣೆಯನ್ನು ಸ್ಮರಿಸಿಕೊ.
26 ಬೆಳಗಿನಿಂದ ಬೈಗಿನವರೆಗೆ ಸಮಯ ಸಾಗುತ್ತಾ
ಇರುತ್ತದೆ
ಅಂತೆಯೆ ಸರ್ವೇಶ್ವರನ ಸಮ್ಮುಖದಲ್ಲಿ
ಎಲ್ಲವೂ ಶೀಘ್ರದಲ್ಲಿ ಗತಿಸಿಹೋಗುತ್ತದೆ.
27 ಬುದ್ಧಿವಂತನು ಎಲ್ಲದರಲ್ಲಿಯೂ ಭಯದಿಂದ
ಬದುಕುತ್ತಾನೆ.
ಶೋಧನೆ ಬಂದಾಗ ಪಾಪದಲ್ಲಿ ಬೀಳದಂತೆ
ಎಚ್ಚರಿಕೆವಹಿಸುತ್ತಾನೆ.
28 ಪ್ರತಿಯೊಬ್ಬ ವಿವೇಕಿಯು ಸುಜ್ಞಾನವನ್ನು
ಬಲ್ಲನು
ಅದನ್ನು ಕಂಡುಕೊಂಡವನನ್ನು ಹೊಗಳುವನು.
29 ಜ್ಞಾನೋಕ್ತಿಗಳಲ್ಲಿ ನುರಿತವರು
ಬುದ್ಧಿವಂತರಾದರು
ಸಮಯೋಚಿತ ಸಾಮತಿಗಳನ್ನು
ಮಳೆಗರೆದರು.

### ಆತ್ಮ ಸಂಯಮ

30 ಹಿಂಬಾಲಿಸಬೇಡ ದೇಹದ ಆಶೆಗಳನ್ನು
ತಡೆಹಿಡಿ ನಿನ್ನ ಬಯಕೆಗಳನ್ನು.
31 ಮನ ಬಯಸಿದ್ದನ್ನೆಲ್ಲಾ ಈಡೇರಿಸುತ್ತಾ
ಬಂದರೆ
ನಗೆಪಾಟಲಿಗೆ ಈಡಾಗುವೆ ಹಗೆಮಾಡುವ
ವೈರಿಗಳ ಮುಂದೆ.
32 ಭೋಗಜೀವನದಲ್ಲಿ ಮೈಮರೆಯಬೇಡ
ಅಂಥವರ ಒಡನಾಟ ನಿನಗೆ ಬೇಡ.

33 ಕೈಯಲ್ಲಿ ಕಾಸಿಲ್ಲದಿರುವಾಗ ಸಾಲಮಾಡಬೇಡ
ಹೀಗೆ ತಿಂದು ಕುಡಿದು, ತಿರುಕನಾಗಬೇಡ.

# 19 ಕುಡುಕನಾದ ಕೆಲಸಗಾರನು
ಧನವಂತನಾಗನು
ಸಣ್ಣ ವಿಷಯಗಳನ್ನು ತಾತ್ಸಾರ ಮಾಡುವವನು
ಕ್ರಮೇಣ ಬಿದ್ದುಹೋಗುವನು.
2 ಮದ್ಯವೂ ಮಹಿಳೆಯೂ ವಿನಾಶಕಾರಿ
ವಿವೇಕಿಗಳಿಗೆ,
ನಾಚಿಕೆಗೇಡು ಸೂಳೆಯ ಸಹವಾಸ
ಮಾಡುವವನಿಗೆ.
3 ಅಂಥವನು ನುಸಿಹುಳುಗಳ ಪಾಲಾಗುವನು
ಆ ನಾಚಿಕೆಗೇಡಾದವನು ನಾಶವಾಗುವನು.

**ಹರಟೆ**

4 ಬೇಗನೇ ನಂಬುವುದು ಹಗುರ ಮನಸ್ಸಿನ
ಲಕ್ಷಣ
ಪಾಪಮಾಡುವವನು ತನಗೆ ತಾನೆ
ತಂದುಕೊಳ್ಳುವನು ನಾಶನ.
5 ಪಾಪದಲ್ಲಿ ಹಿಗ್ಗುವವನು
ದಂಡನೆಗೆ ಗುರಿಯಾಗುವನು.
6 ಹರಟೆಮಾತನ್ನು ಹೇಸುವವನಿಗೆ
ಕಡಿಮೆಯಾಗುವುದು ತರಕಾರು ತಂಟೆ.
7 ನಿನಗೆ ಕೇಳಿಸಿದ್ದನು ಹೇಳಬೇಡ
ಇನ್ನೊಬ್ಬನ ಮುಂದೆ
ಅದರಿಂದ ನಿನಗೆಂದಿಗೂ ಆಗದು ಕೊರತೆ.
8 ಅದು ಸ್ನೇಹಿತನ ವಿಷಯವಾಗಿರಲಿ, ವೈರಿಯ
ವಿಷಯವಾಗಿರಲಿ ತಿಳಿಸಬೇಡ
ತಿಳಿಸದಿರುವುದು ಪಾಪವಾದರೆ ಹೊರತು
ಬಯಲು ಮಾಡಬೇಡ.
9 ನೀನಾಡುವುದನ್ನು ಕೇಳಿ ಗುರುತಿಟ್ಟು
ಕೊಂಡವರು
ಸಮಯ ಒದಗಿದಾಗ ನಿನ್ನನು ದ್ವೇಷಿಸುವರು.
10 ಗಾಳಿಸುದ್ದಿಯನು ಕೇಳಿರುವಿಯೋ
ಅದು ಸಾಯಲಿ ನಿನ್ನೊಂದಿಗೆ
ಹೆದರಬೇಡ; ಅದು ಸಿಡಿಯಾಗದು ನಿನ್ನ
ಒಡಲಿಗೆ.
11 ಮೂರ್ಖನು ಪ್ರಸವವೇದನೆಯ ಸ್ತ್ರೀಯಂತೆ
ವೇದನೆಪಡುತ್ತಾನೆ ಆ ಒಂದು ಸುದ್ದಿಗೆ.

12 ಮೂರ್ಖನ ಒಡಲಿಗೆ ಬಿದ್ದಾ ಮಾತು
ತೊಡೆಗೆ ತಾಕಿಕೊಂಡ ಬಾಣದ ಮೊನಚು.

### ಕೇಳಿದ್ದೆಲ್ಲವನ್ನು ನಂಬದಿರು

13 ನಿನ್ನ ಸ್ನೇಹಿತನನ್ನು ವಿಚಾರಿಸು; ಅವನು
ಅಲ್ಲದ್ದೇನೂ ಮಾಡಿರಲಿಕ್ಕಿಲ್ಲ
ಒಂದು ವೇಳೆ ಮಾಡಿದ್ದರೆ, ಬುದ್ಧಿಹೇಳು;
ಪುನಃ ಅವನು ಹಾಗೆ ಮಾಡುವುದಿಲ್ಲ.
14 ನಿನ್ನ ನೆರೆಯವನನ್ನು ವಿಚಾರಿಸು; ಅವನು
ಅಲ್ಲದ್ದೇನೂ ಹೇಳಿರಲಿಕ್ಕಿಲ್ಲ
ಒಂದು ವೇಳೆ ಹೇಳಿದ್ದರೆ, ಬುದ್ಧಿಹೇಳು;
ಪುನಃ ಅವನು ಹಾಗೆ ಹೇಳುವುದಿಲ್ಲ.
15 ನಿನ್ನ ಸ್ನೇಹಿತನನ್ನು ವಿಚಾರಿಸು; ನೀನು ಕೇಳಿದ್ದು
ಚಾಡಿ ಮಾತಾಗಿರಬಹುದು
ಒಂದು ವೇಳೆ ಚಾಡಿ ಹೇಳಿದ್ದರೆ, ಬುದ್ಧಿ ಹೇಳು;
ನೀ ಕೇಳಿದ್ದೆಲ್ಲವನು ನಂಬಬಾರದು.
16 ತಪ್ಪು ಮಾಡುವುದು ಸಹಜ; ಆದರೆ
ಉದ್ದೇಶಪೂರ್ವಕವಾಗಿ ಅಲ್ಲ
ತನ್ನ ನಾಲಗೆಯಿಂದ ತಪ್ಪು ಮಾಡದವನು
ಯಾರೂ ಇಲ್ಲ.
17 ನೆರೆಯವನಿಗೆ ನೀಡು ಎಚ್ಚರಿಕೆ,
ಬೆದರಿಕೆ ಹಾಕುವ ಪ್ರಸಂಗ ಬರುವ ಮುನ್ನ
ಕೋಪಿಸಿಕೊಳ್ಳದೆ, ಪರಾತ್ಪರನ ನಿಯಮಕ್ಕೆ
ಬಿಡು ಸಮಸ್ಯೆಯನ್ನು.

### ಸುಜ್ಞಾನದ ಗುರುತು

18 ಸರ್ವೇಶ್ವರನಿಗೆ ಭಯಪಡುವುದೇ
ಕರುಣೆಗೆ ನಾಂದಿ
ಸುಜ್ಞಾನಿಗೆ ದೊರಕುವುದು ಪ್ರೀತಿ.
19 ಸರ್ವೇಶ್ವರನ ಆಜ್ಞೆಗಳನ್ನು ಕಲಿತವರು
ಪಡೆವರು ಜೀವದಾಯಕ ಶಿಕ್ಷಣವನ್ನು
ಆತನ ಇಷ್ಟಾರ್ಥ ನೆರವೇರಿಸುವವರು,
ಪಡೆವರು ಅಮರಜೀವ ವೃಕ್ಷದ ಫಲವನ್ನು.
20 ಎಲ್ಲಾ ಜ್ಞಾನವು ಅಡಗಿರುತ್ತದೆ
ಸರ್ವೇಶ್ವರನ ಭಯಭಕ್ತಿಯಲ್ಲಿ
ಎಲ್ಲಾ ಜ್ಞಾನವು ಲಭ್ಯವಾಗುತ್ತದೆ
ಧರ್ಮಶಾಸ್ತ್ರದ ಅನುಸರಣೆಯಲ್ಲಿ.
21 'ನೀವು ಹೇಳಿದ್ದನ್ನು ನಾನು ಮಾಡುವುದಿಲ್ಲ'
ಎನ್ನುತ್ತಾನೆ ಆಳು ದಣಿಗೆ
ಅನಂತರ ಆ ಆಳು ಮಾಡಿದರೂ

ಕಾರಣನಾಗುತ್ತಾನೆ ದಣಿಯ ಕೋಪಕ್ಕೆ.
22 ಕೆಟ್ಟದ್ದರ ತಿಳುವಳಿಕೆ ನಿಜವಾದ ಜ್ಞಾನವಲ್ಲ
ಪಾಪಾತ್ಮರ ಯೋಚನೆಯಲ್ಲಿ ವಿವೇಕ
ಇರುವುದಿಲ್ಲ.
23 ಕೇಡು ಮಾಡುವುದರಲ್ಲಿರುವ ಜಾಣತನ
ಹೇಯವಾದುದೇ
ಜ್ಞಾನಹೀನನಾಗಿರುವುದೂ ಮೂರ್ಖತನವೇ.
24 ಬುದ್ಧಿವಂತನಾಗಿದ್ದು ಧರ್ಮಶಾಸ್ತ್ರವನ್ನು
ಮೀರುವುದಕ್ಕಿಂತಲೂ
ಅಲ್ಪ ತಿಳುವಳಿಕೆಯಿಂದಿದ್ದು ದೇವರಿಗೆ
ಭಯಪಡುವುದೇ ಲೇಸು.
25 ಸೂಕ್ಷ್ಮವಾದ ಕುಯುಕ್ತಿ ಒಂದಿದೆ;
ಅದು ಅನ್ಯಾಯವಾದುದೇ
ತಮಗೆ ಬೇಕಾದ ತೀರ್ಪನು ಗಿಟ್ಟಿಸಿಕೊಳ್ಳಲು
ನಿರ್ದಯೆಯಿಂದ ವರ್ತಿಸುವವರಿದ್ದಾರೆ.
26 ದುಷ್ಟನು ತಲೆತಗ್ಗಿಸಿಕೊಂಡು ನಿಲ್ಲುವನು
ಖಿನ್ನವದನದಿಂದ
ಅವನ ಅಂತರಂಗ ತುಂಬಿಕೊಂಡಿರುವುದು
ಮೋಸದಿಂದ.
27 ಅವನು ತಲೆತಗ್ಗಿಸಿಕೊಂಡು ಕಿವುಡನಂತೆ
ನಟಿಸುತ್ತಾನೆ
ಅವನನ್ನು ಪತ್ತೆಹಚ್ಚದಿದ್ದರೆ, ಅಷ್ಟರಲ್ಲೇ
ನಿನಗೆ ಮೋಸಮಾಡುತ್ತಾನೆ.
28 ಪಾಪಮಾಡನವನು ಶಕ್ತಿ ಸಾಲದಿದ್ದಾಗ
ಖಂಡಿತ ಮಾಡುವನದನ್ನು ಅವಕಾಶ ಸಿಕ್ಕಿದಾಗ.
29 ಮನುಷ್ಯನ ಸ್ವಭಾವ ವ್ಯಕ್ತವಾಗುವುದು
ಅವನ ತೋರಿಕೆಯಿಂದ
ಅವನು ಜ್ಞಾನಿಯಾಗಿದ್ದರೆ, ಅದು
ಗೊತ್ತಾಗುವುದು ಮುಖಚರ್ಯೆಯಿಂದ.
30 ಮನುಷ್ಯನು ಎಂಥವನೆಂಬುದನು ಅರಿಯುವೆ
ಅವನ ಉಡುಗೆ ತೊಡುಗೆ,
ನಗು ನಡಿಗೆಗಳಿಂದಲೆ.

## ಸಮಯೋಚಿತ ಮಾತುಕತೆ

**20** ಕಾಲೋಚಿತವಲ್ಲದ ಬುದ್ಧಿವಾದ
ಚಂದವಲ್ಲ
ಸಮಯವರಿತು ಸುಮ್ಮನಿರುವವನೇ ಜಾಣ.
2–3 ಕೋಪಿಸಿಕೊಳ್ಳುವುದಕ್ಕಿಂತ ಬುದ್ಧಿಹೇಳುವುದು
ಎಷ್ಟೋ ಒಳಿತು

ತನ್ನ ತಪ್ಪನ್ನು ಒಪ್ಪಿಕೊಳ್ಳುವವನಿಗೆ
ಹಾನಿ ತಟ್ಟದು.

4 ಬಲಾತ್ಕಾರದಿಂದ ನ್ಯಾಯನಿರ್ಣಯಗಳನ್ನು
ಸಾಧಿಸುವವನು
ಕನ್ಯೆಯನ್ನು ಕೆಡಿಸಲಿಚ್ಛಿಸುವಂಥ ನಪುಂಸಕನು.

5 ಮೌನಿಯು ಪಂಡಿತನಾಗಿ ಕಂಡುಬರುವನು
ಮಾತಾಳಿಯು ದ್ವೇಷಪಾತ್ರನಾಗುವನು.

6 ಉತ್ತರ ಗೊತ್ತಿಲ್ಲದೆ ಸುಮ್ಮನಿರುವವನು
ಒಬ್ಬನು
ಸಮಯವರಿತು ಮೌನತಾಳುವವನು
ಇನ್ನೊಬ್ಬನು.

7 ತಕ್ಕ ಸಮಯ ಬರುವವರೆಗೆ
ಸುಮ್ಮನಿರುವವನು ಜಾಣ
ಸಮಯ ತಪ್ಪಿ ಮಾತಾಡುವವನು ವಾಚಾಳಿ
ಹಾಗೂ ಕೋಣ.

8 ಅತಿಯಾಗಿ ಮಾತಾಡುವವನು
ತುಚ್ಛನೆನಿಸಿಕೊಳ್ಳುವನು
ದರ್ಪದಿಂದ ಮಾತಾಡುವವನು ದ್ವೇಷಕ್ಕೆ
ಪಾತ್ರನಾಗುವನು.

## ವಿರುದ್ಧೋಕ್ತಿಗಳು

9 ಮನುಷ್ಯ ಸೌಭಾಗ್ಯವನ್ನು ಒಮ್ಮೊಮ್ಮೆ
ಕಂಡುಕೊಳ್ಳಬಹುದು ದುರ್ಭಾಗ್ಯದಿಂದಲೇ
ನಷ್ಟಕ್ಕೆ ಗುರಿಯಾಗಬಹುದು ಲಾಭದಿಂದಲೇ.

10 ನಿನಗೇನೂ ಲಾಭಗಿಟ್ಟದಿರಬಹುದು
ಒಂದು ವಿಧವಾದ ದಾನದಿಂದ
ನಿನಗೆ ಇಮ್ಮಡಿಫಲ ದೊರಕಬಹುದು
ಇನ್ನೊಂದು ವಿಧವಾದ ದಾನದಿಂದ.

11 ಒಮ್ಮೊಮ್ಮೆ ಕೀರ್ತಿಗೋಸ್ಕರ
ತಗ್ಗಿಸಲ್ಪಡುವುದೂ ಉಂಟು
ತಗ್ಗಿದವನು ತಲೆಯೆತ್ತುವುದೂ ಉಂಟು.

12 ಒಂದಿಷ್ಟೇ ಕೊಟ್ಟು ಅತಿಯಾಗಿ
ಕೊಂಡುಕೊಳ್ಳಬಹುದು
ಆಮೇಲೆ ಏಳರಷ್ಟು ಅದರ ನಿಮಿತ್ತ ಖರ್ಚು
ಮಾಡಬೇಕಾಗಬಹುದು.

13 ಜಾಣನು ಜನಪ್ರಿಯನಾಗುವನು ಮಾತಿನಿಂದ
ಮೂಢನ ಮಾತು ವಿರಸವಾಗುವುದು
ಸರಸದಿಂದ.

14 ನಿನಗಾವ ಲಾಭವೂ ದಕ್ಕದು
ಮೂರ್ಖನ ಕೊಡುಗೆಯಿಂದ

ಅವನು ಮಾಡುವುದು ಒಂದರಿಂದಲ್ಲ,
ಹಲವಾರು ದೃಷ್ಟಿಯಿಂದ.
15 ಅವನು ಕೊಡುವುದು ತುಸು;
ಹಂಗಿಸುವುದು ಬಹಳ
ಅವನ ಬಾಯೋ, ಒಂದು ಡಂಗುರ
ಇಂದು ಕೊಟ್ಟರೆ ನಾಳೆ ತಿರುಗಿ ಕೇಳುವ
ಅವನು ನಿಜಕ್ಕೂ ಅನಿಷ್ಟ.
16 ಮೂರ್ಖನ ಮಾತು ಹೀಗಿದೆ:
"ಸ್ನೇಹಿತರಿಲ್ಲ ನನಗೆ;
ಮನ್ನಣೆಯಿಲ್ಲ ನನ್ನ ಸತ್ಕಾರ್ಯಗಳಿಗೆ;
ನನ್ನ ಅನ್ನ ತಿನ್ನುವವರೇ ನನಗೆರಡು
ಬಗೆಯುತ್ತಾರೆ."
17 ಎಷ್ಟು ಸಾರಿ, ಎನಿತು ಜನ, ಪರಿಹಾಸ್ಯ
ಮಾಡರು ಅಂಥವನನ್ನು ಕಂಡರೆ!

**ಅಸಮಂಜಸ ಮಾತು**

18 ನಾಲಗೆಯಿಂದ ಜಾರುವುದಕ್ಕಿಂತ ನೆಲದ ಮೇಲೆ
ಜಾರುವುದು ಲೇಸು
ಹೀಗೆ ದುಷ್ಟನ ಪತನ ಶೀಘ್ರವಾಗಿ
ಸಂಭವಿಸುವುದು.
19 ಸೌಜನ್ಯರಹಿತ ಮನುಷ್ಯ ಅಕಾಲದಲ್ಲಿ ಹೇಳಿದ
ಕತೆಯಂತೆ
ಅದು ಸದಾ ನರ್ತಿಸುವುದು
ಅವಿವೇಕಿಗಳ ಬಾಯಲ್ಲಿ.
20 ಮೂರ್ಖನ ಬಾಯಿಂದ ಬಂದ
ಜ್ಞಾನೋಕ್ತಿ ತಿರಸ್ಕೃತ
ಏಕೆಂದರೆ ಅವನು ಆಡಿದ್ದು ಅಸಂಗತ.
21 ಒಬ್ಬನು ಪಾಪಮಾಡದಿರಬಹುದು
ಬಡತನದ ನಿಮಿತ್ತ
ಅಂಥವನ ನಿದ್ರೆ ಕೆಡುವುದಿಲ್ಲ
ಕೆಟ್ಟ ಮನಸ್ಸಾಕ್ಷಿಯಿಂದ.
22 ಒಬ್ಬನು ತನ್ನನ್ನೇ ಕೆಡಿಸಿಕೊಳ್ಳಬಹುದು
ಕಾರಣವಿಲ್ಲದ ನಾಚಿಕೆಯಿಂದ
ತನ್ನನ್ನು ತಾನೇ ಹಾಳು ಮಾಡಿಕೊಳ್ಳಬಹುದು
ಮುಖದಾಕ್ಷಿಣ್ಯದಿಂದ.
23 ಒಬ್ಬನು ಸ್ನೇಹಿತನಿಗೆ ಮಾತುಕೊಡಬಹುದು
ದಾಕ್ಷಿಣ್ಯಕ್ಕೊಳಗಾಗಿ
ಇದರಿಂದ ಮಾಡಿಕೊಳ್ಳುವನವನನ್ನು ತನಗೆ
ಅನಾವಶ್ಯ ವೈರಿಯಾಗಿ.

### ಸುಳ್ಳಾಡುವ ಚಟ

24 ಸುಳ್ಳು ಒಂದು ಕೆಟ್ಟ ದೋಷವಾಗಿದೆ
ಮನುಷ್ಯನಲ್ಲಿ
ಅದು ಯಾವಾಗಲೂ ಇರುತ್ತದೆ
ಅಶಿಕ್ಷಿತರ ಬಾಯಲ್ಲಿ.
25 ಸದಾ ಸುಳ್ಳಾಡುವವನಿಗಿಂತ ಕಳ್ಳನೇ ಮೇಲು
ಆದರೆ ನಾಶವೇ ಇಬ್ಬರಿಗೂ ದಕ್ಕುವ ಪಾಲು.
26 ಸುಳ್ಳಾಡುವ ಚಟ ಅವಮಾನಕರ
ಅವನ ಬೆನ್ನುಬಿಡದು ದುಮ್ಮಾನ.

### ಸುಜ್ಞಾನದ ಸೇವೆ

27 ಮಾತಿನಲ್ಲಿ ಬಲ್ಲಿದನು ಮುಂದೆ ಬರುವನು
ವಿವೇಕಿಯು ಮಹಾತ್ಮರನ್ನು ಮೆಚ್ಚುವನು
28 ತನ್ನ ಭೂಮಿಯನ್ನು ತಾನೇ ಗೈಯುವವನು
ಸಮೃದ್ಧಿ ಬೆಳೆಹೊಂದುವನು
ಮಹಾತ್ಮರನ್ನು ಮೆಚ್ಚಿಸುವವನು
ತಪ್ಪಿಗೆ ಕ್ಷಮಾದಾನ ಪಡೆಯುವನು.
29 ಕೊಡುಗೆ, ಬಹುಮಾನಗಳು ಬುದ್ಧಿವಂತರ
ಕಣ್ಣುಗಳನ್ನು ಕುರುಡುಮಾಡುವುವು
ಅವನು ಗದರಿಸದಂತೆ ಅವನ ಬಾಯಿಗೆ
ಕುಕ್ಕೆ ಹಾಕಿ ಮುಚ್ಚುವುವು.
30 ಮುಚ್ಚಿಟ್ಟ ಜ್ಞಾನ, ಹುದುಗಿಟ್ಟ ಹಣ
ಇವುಗಳಿಂದೇನು ಲಾಭ?
31 ಜ್ಞಾನವನ್ನು ಮರೆಸುವುದಕ್ಕಿಂತ
ಅಜ್ಞಾನವನ್ನು ಮುಚ್ಚಿಡುವುದು ಲೇಸು.

### ಪಾಪಾಕ್ರಮಗಳು

**21** ಮಗನೇ, ಪಾಪಮಾಡಿರುವೆಯೋ?
ಪುನಃ ಮಾಡಬೇಡ;
ಹಳೆಯ ಪಾಪಗಳಿಗಾಗಿ ಕ್ಷಮೆ ಬೇಡಿಕೊ.
2 ಪಾಪದ ಬಳಿಯಿಂದ ಓಡಿಬಿಡು,
ಹಾವಿಗೆ ಹೆದರಿ ಓಡುವವನಂತೆ
ಕಚ್ಚುವುದದು, ಅದರ ಸಮೀಪಕ್ಕೆ ಹೋದರೆ.
ಅದರ ಹಲ್ಲುಗಳು ಕೇಸರಿಯ ಕೋರೆಯಂತಿವೆ
ಮಾನವನ ಪ್ರಾಣವನ್ನು ತೆಗೆದುಬಿಡುತ್ತವೆ.
3 ಎಲ್ಲಾ ಅಕ್ರಮ ಇಬ್ಬಾಯ ಕತ್ತಿಗೆ ಸಮಾನ
ಮಾಯುವುದಿಲ್ಲ ಅದರ ಹೊಡೆತದಿಂದಾದ ಗಾಯ.
4 ಸಿರಿಸಂಪತ್ತನ್ನು ಹಾಳುಮಾಡುತ್ತವೆ
ಭಯಬಲಾತ್ಕಾರಗಳು

ಅದರಂತೆಯೇ ಹಾಳಾಗುತ್ತವೆ ಗರ್ವಿಷ್ಠನ
ಮನೆ–ಮಠಗಳು.
5 ದೇವರ ಕಿವಿಗೆ ಮುಟ್ಟುವುದು ಬಡವನ
ಬೇಡಿಕೆ
ಕೂಡಲೇ ಉತ್ತರ ಬರುವುದು ಅದಕ್ಕೆ.
6 ಬುದ್ಧಿಯ ಮಾತುಗಳನ್ನು ಹೀನೈಸುವವನು
ಇರುವುದು ಪಾಪಮಾರ್ಗದಲ್ಲಿ
ದೇವರಿಗೆ ಅಂಜುವವನು ಆತನ ಕಡೆ
ತಿರುಗಿಕೊಳ್ಳುವನು ಹೃದಯದಲ್ಲಿ.
7 ಮಾತಿನ ಮಲ್ಲನನ್ನು ದೂರದಿಂದಲೇ
ಗುರುತಿಸುವುದು ಕಷ್ಟವಲ್ಲ
ಆದರೆ ಅವನು ಯಾವಾಗ ಜಾರಿಬೀಳುವನೆಂದು
ವಿವೇಕಿಯೇ ಬಲ್ಲ.
8 ಪರರ ದುಡ್ಡಿನಿಂದ ತನ್ನ ಮನೆ
ಕಟ್ಟಿಕೊಳ್ಳುವವನು
ತನ್ನ ಸಮಾಧಿಕಟ್ಟಲು ಕಲ್ಲನು
ಕೂಡಿಸುವಂತಿರುವನು.
9 ದುಷ್ಟರ ಸಂತೆ ಸಣಬಿನ ಸಂತೆ
ಉರಿಯುವ ಬೆಂಕಿ ಅವರ ಅಂತ್ಯೆ.
10 ಪಾಪಾತ್ಮರ ಮಾರ್ಗ ಕಲ್ಲು ಹಾಸಿ
ಸರಾಗ ಮಾಡಿದ ಹೆದ್ದಾರಿ
ಆದರೆ ಅದರ ಕೊನೆಯಲ್ಲಿರುವುದು
ಪಾತಾಳದ ಗುಂಡಿ.

## ಸುಜ್ಞಾನಿಯೂ ಅಜ್ಞಾನಿಯೂ

11 ಧರ್ಮಶಾಸ್ತ್ರವನ್ನು ಅನುಸರಿಸುವವನಿಗೆ
ಆಲೋಚನೆಗಳು ಹತೋಟಿಯಲ್ಲಿರುವುವು
ದೇವರಲ್ಲಿ ಭಯಭಕ್ತಿಯು ಸುಜ್ಞಾನದ
ಸಂಪೂರ್ಣತೆಯು.
12 ಸುಶಿಕ್ಷಿತನಾಗಲು ಸಾಧ್ಯವಿಲ್ಲ ಚಾತುರ್ಯವಿಲ್ಲದೆ
ಆದರೆ ನಿಷ್ಠೂರತನವನ್ನು ಹೆಚ್ಚಿಸುವ
ಚಾತುರವೊಂದಿದೆ.
13 ಜಾಣನ ಜ್ಞಾನ ವೃದ್ಧಿಯಾಗುವುದು
ಪ್ರವಾಹದಂತೆ
ಅವನ ಬುದ್ಧಿ ಉಕ್ಕುವುದು
ಜೀವದ ಬುಗ್ಗೆಯಂತೆ.
14 ಒಡಕು ಮಡಕೆಯಂತಿದೆ ಮಂದಮತಿಯ
ಅಂತರಂಗ
ಅವನಲ್ಲಿ ಜ್ಞಾನವು ನಿಲ್ಲುವುದು ಅಸಾಧ್ಯ.
15 ಜಾಣ್ಮೆಯ ನುಡಿ ಕೇಳಿದರೆ ಜಾಣನು

ತಲೆದೂಗುವನು; ಕೂಡಿಸಿಕೊಳ್ಳುವನು,
ಅದನ್ನೇ ಭಂಡನು ಕೇಳಿದರೆ, ಹಿಗ್ಗುವುದಿಲ್ಲ;
ಅದನ್ನು ಹಿಂದೂಡುವನು.
16 ಮೂರ್ಖನ ಮಾತು ಪ್ರಯಾಣದಲ್ಲಿ ಹೊತ್ತ
ಹೊರೆಯಂತೆ
ಜಾಣನ ಬಾಯಲಿ ಸಿಗುವುದಾದರೋ
ಅಮೃತದಂತೆ.
17 ಕೂಡಿದ ಸಭೆಯಲ್ಲಿ ವಿವೇಕಿ ಆಡುವ ಮಾತನ್ನು
ಕೇಳಲು ಜನರು ಆತುರದಿಂದಿರುತ್ತಾರೆ.
ಅವನ ನುಡಿಗಳನ್ನು ಮನದಲ್ಲಿಟ್ಟುಕೊಂಡು
ಮೆಲಕು ಹಾಕುತ್ತಾರೆ.
18 ಮೂರ್ಖನಿಗೆ ಜ್ಞಾನ ಹಾಳುಮನೆಯಂತೆ
ಬುದ್ಧಿಹೀನನ ಜ್ಞಾನ ಅರ್ಥವಿಲ್ಲದ
ಮಾತಿನಂತೆ.
19 ಬುದ್ಧಿಹೀನನಿಗೆ ಶಿಕ್ಷಣ
ಕಾಲಿಗೆ ಹಾಕಿದ ಸಂಕೋಲೆಯಂತೆ
ಕೈಗೆ ಬಿಗಿದ ಬೇಡಿಯಂತೆ.
20 ಮೂರ್ಖನು ಕೇಕೆ ಹಾಕಿ ನಗುವನು
ದೊಡ್ಡದನಿ ಮಾಡಿ
ಜಾಣನು ಅಪರೂಪಕ್ಕೆ ಮುಗುಳ್ನಗೆ ಬೀರುವನು
ಹಸನ್ಮುಖನಾಗಿ.
21 ವಿವೇಕಿಗೆ ಶಿಕ್ಷಣ ಬಂಗಾರದ ಆಭರಣ
ಅಂತೆಯೆ ಬಲದೋಳಿನ ಕಂಕಣ.
22 ಮೂರ್ಖನ ಪಾದಗಳು ಕೂಡಲೆ ಸೇರುವುವು
ನೆರೆಮನೆಗೆ
ಅನುಭವಿಯಾದರೋ ನಾಚಿಕೊಳ್ಳುವನು
ಹಾಗೆ ಮಾಡುವುದಕ್ಕೆ.
23 ತಿಳಿಗೇಡಿ ಇಣಿಕಿನೋಡುವನು ನೆರೆಮನೆಯ
ಬಾಗಿಲಲ್ಲಿ
ಸುಸಂಸ್ಕೃತನು ನಿಂತುಕೊಳ್ಳುವನು ಬಾಗಿಲ
ಹೊರಗಡೆಯಲ್ಲಿ.
24 ಪರರ ಬಾಗಿಲಲಿ ನಿಂತು ಕಿವಿಗೊಡುವುದು
ಅವಿವೇಕತನ
ವಿವೇಕಿಗೆ ಇಂಥ ನಡತೆ ನಾಚಿಕೆಗೆ ಕಾರಣ.
25 ಅವಿವೇಕಿಗಳ ಹರಟೆ ಅಸಂಗತ ಮಾತಿನಂತೆ
ಆದರೆ ವಿವೇಕಿಗಳ ಮಾತು ತಕ್ಕಡಿಯಲಿ
ತೂಗಿಟ್ಟಂತೆ.
26 ಮೂರ್ಖರ ಹೃದಯ ಅವರ ಬಾಯಲ್ಲಿ
ಬುದ್ಧಿವಂತರ ಬಾಯಿ ಅವರ ಹೃದಯದಲ್ಲಿ.
27 ಅಧರ್ಮಿ ಸೈತಾನನನ್ನು ಶಪಿಸುವಾಗ

ತನ್ನನ್ನೇ ಶಪಿಸಿಕೊಳ್ಳುತ್ತಾನಲ್ಲ!
28 ಕಿವಿಯೂದುವವನ ಆತ್ಮ ಮಲಿನ
ಅವನೆಲ್ಲರಿಗೂ ಅಸಹ್ಯ.

### ಸೋಮಾರಿ

**22** ಮೈಗಳ್ಳನು ಮೈಲಿಗೆ ತುಂಬಿದ
ಕಲ್ಲಿಗೆ ಸಮಾನ
ಎಲ್ಲರೂ ಛೀಮಾರಿ ಹಾಕುವರು ಅವನಿಗೆ
ಮಾನವಿಲ್ಲದ ಕಾರಣ.
2 ಮೈಗಳ್ಳ ತಿಪ್ಪೆಯ ಮೇಲಿರುವ ಹೇಸಿಗೆಗೆ
ಸಮಾನ
ಕೈಒದರಿಬಿಡುವರು ಜನರು
ಅದನ್ನು ಮುಟ್ಟಿದ ತಕ್ಷಣ.

### ಕುಲಗೆಟ್ಟ ಕುಡಿಗಳು

3 ತುಂಟನನ್ನು ಹೆತ್ತದಕ್ಕೆ ತಂದೆಗೆ ಅವಮಾನ
ಮೂರ್ಖ ಮಗಳು ಹುಟ್ಟಿದರೋ
ಅವನಿಗೆ ನಷ್ಟ.
4 ವಿವೇಕವುಳ್ಳ ಮಗಳು ತನ್ನ ಪತಿಯನ್ನು
ಕಂಡುಕೊಳ್ಳುವಳು
ಮಾನಗೆಟ್ಟವಳು ತಂದೆಗೆ ವ್ಯಸನವನ್ನುಂಟು
ಮಾಡುವಳು.
5 ಲಜ್ಜೆಗೆಟ್ಟವಳು ತಂದೆಯ ಹಾಗು ಗಂಡನ
ಮಾನ ಕಳೆಯುವಳು
ಅವರಿಬ್ಬರೂ ಅವಳನ್ನು ಹೇಸುವರು.
6 ಅನುಚಿತಕಾಲದ ಬುದ್ಧಿಮಾತು, ಅಳುವ
ಕಾಲದಲಿ ಹಾಡುವ ಗೀತೆಗೆ ಸಮಾನ
ಬೆತ್ತಬೆದರಿಕೆ ಎಲ್ಲ ಕಾಲದಲ್ಲೂ ಉಚಿತ;
ಅವುಗಳಿಂದ ಬರುವುದು ಜ್ಞಾನ.
7 ಒಳ್ಳೆಯ ಮಕ್ಕಳು ನತದೃಷ್ಟ ಹೆತ್ತವರ
ಗೋಳನ್ನು ಮರೆಯಿಸುವರು.
8 ದುರ್ನಡತೆಯ, ಅಸಂಸ್ಕೃತ, ಮೊಂಡು
ಹೃದಯದ ಮಕ್ಕಳು
ತಮ್ಮ ಕುಲಕ್ಕೆ ಕಂಟಕಪ್ರಾಯರಾಗಿರುವರು.

### ಸುಜ್ಞಾನ–ಮೂರ್ಖತನ

9 ಮೂರ್ಖನಿಗೆ ಬೋಧನೆ ಮಾಡುವವನೇ,
ನೀನು ಒಡೆದ ಮಣ್ಣಿನ
ಜಾಡಿಯನ್ನಂಟಿಸುವವನಂತೆ!

ಗಾಢನಿದ್ರೆಯಲ್ಲಿರುವವನನ್ನು
ಎಬ್ಬಿಸುವವನಂತೆ!
10 ಮೂರ್ಖನಿಗೆ ಬುದ್ಧಿ ಹೇಳುವುದು
ತೂಕಡಿಸುವವನಿಗೆ ಕತೆ ಹೇಳಿದಂತೆ
ಬುದ್ಧಿ ಹೇಳಿ ಮುಗಿಸಿದಾಗ ಅವನು
ಕೇಳುವನು:
'ಏನಂದೆ?'
11 ಸತ್ತವನಿಗಾಗಿ ಶೋಕಿಸು; ಅವನ ಪ್ರಾಣ
ಜ್ಯೋತಿ ನಂದಿಹೋಗಿದೆ
ಮೂರ್ಖನಿಗಾಗಿ ಮರುಗು; ಅವನಲ್ಲಿ ಜ್ಞಾನ
ಜ್ಯೋತಿ ಇಲ್ಲದಾಗಿದೆ
ಸತ್ತವನಿಗಾಗಿ ಸ್ವಲ್ಪ ವ್ಯಸನಪಡು; ಅವನು
ಪಡೆದಿದ್ದಾನೆ ಅಂತಿಮ ವಿಶ್ರಾಂತಿಯನ್ನು
ಮೂರ್ಖನ ಬಾಳು ಮರಣಕ್ಕಿಂತ ಬೀಳು.
12 ಮೃತನಿಗಾಗಿ ಶೋಕವನ್ನಾಚರಿಸುವುದುಂಟು
ಏಳುದಿನಗಳವರೆಗೆ
ಮೂರ್ಖರಿಗಾಗಿ ಗೋಳಾಡಬೇಕು, ಅವರು
ಜೀವದಿಂದಿರುವವರೆಗೆ.
13 ಮತಿಗೇಡಿಯೊಂದಿಗೆ ಮಾತು ಬೆಳೆಸಬೇಡ
ತಿಳಿಗೇಡಿಯ ನೆರೆ ಸೇರಬೇಡ
ತಿಳಿಗೇಡಿಯ ವಿಷಯದಲ್ಲಿ ಜಾಗ್ರತೆ!
ಇಲ್ಲದಿದ್ದರೆ ಸಿಕ್ಕಿಕೊಳ್ಳುವೆ ಸಂಕಟಕ್ಕೆ
ಅವನ ಒಡನಾಟದಿಂದ ನಿನಗೆ ದೋಷ
ತಗಲುವುದು
ಅವನಿಂದ ದೂರವಿರು, ಆಗ ನಿನಗೆ ವಿಶ್ರಾಂತಿ
ದೊರಕುವುದು,
ಅವನ ಹುಚ್ಚುತನದಿಂದ ನಿನಗೆ
ಬೇಸರವಾಗದು.
14 ಸೀಸಕ್ಕಿಂತ ಭಾರವಾದದ್ದು ಇದೆಯೇ?
ಇದ್ದರೆ ಅದರ ಹೆಸರು ಮೂರ್ಖತನವೇ!
15 ಉಪ್ಪು, ಉಸುಬು, ಕಬ್ಬಿಣಗಳ ಭಾರವನ್ನೂ
ಸಹಿಸಲು ಸಾಧ್ಯ
ಆದರೆ ಮೂರ್ಖನ ಭಾರವನ್ನು ಸಹಿಸಲು
ಕಷ್ಟಸಾಧ್ಯ.
16 ಮನೆಯ ಅಡ್ಡತೊಲೆ, ಭೂಕಂಪದಿಂದಲೂ
ಬೀಳದಂತೆ ಮಾಡಬಹುದು
ಅಂತೆಯೇ ಹಿತಬೋಧೆಯಿಂದ ಸುಸ್ಥಿರವಾದ
ಮನಸ್ಸು
ಶೋಧನೆ ಬಂದಾಗಲು ಅಳುಕದು.
17 ತಿಳುವಳಿಕೆ ತುಂಬಿದ ಮನಸ್ಸಿನಲಿ ನೆಲೆಯಾದ

ಹೃದಯ
ಗಿಲಾವು ಮಾಡಿದ ಗೋಡೆಯ ಮೇಲೆ ಬರೆದ ಚಿತ್ರ.
18 ಎತ್ತರದ ಬೇಲಿ ಗಾಳಿಯ ಹೊಡೆತಕ್ಕೆ
ತಡೆಯದು
ಅವಿವೇಕಿಯಾದ ಅಂಜುಬುರುಕನ ಹೃದಯ
ಯಾವ ಭಯವನ್ನು ಸಹಿಸದು.

**ಸ್ನೇಹ**

19 ಕಣ್ಣು ಚುಚ್ಚಿದರೆ ಕಣ್ಣೀರು
ಹೃದಯ ಚುಚ್ಚಿದರೆ ಮನದರಿವು.
20 ಹಕ್ಕಿಗಳು ಹಾರಿಹೋಗುವುವು ಕಲ್ಲೆಸೆದರೆ
ಸ್ನೇಹ ಮುರಿಯುವುದು ಸ್ನೇಹಿತನನ್ನು
ನಿಂದಿಸಿದರೆ.
21 ಗೆಳೆಯನ ವಿರುದ್ಧ ನೀನು ಕತ್ತಿ ಹಿರಿದಿದ್ದರೂ,
ನಿರಾಶೆಯಾಗದಿರು
ಒಂದು ವೇಳೆ ಸಂಧಾನವಾಗಬಹುದು;
22 ಸ್ನೇಹಿತನ ವಿರುದ್ಧ ಮಾತಾಡಬೇಕಾಗಿ
ಬಂದರೂ ಹಿಂದೆಗೆಯಬೇಡ,
ಸಂಧಾನವಾಗಬಹುದು.
ಆದರೆ ನಿಂದೆ, ಸೊಕ್ಕು,
ಗುಟ್ಟುರಟ್ಟಾಗಿಸುವುದು,
ನಂಬಿಕೆದ್ರೋಹ
ಇಂಥವುಗಳ ನಿಮಿತ್ತ, ಎಂಥ ಸ್ನೇಹಿತನೂ
ಬಿಟ್ಟುಹೋಗುವುದು ಖಂಡಿತ.
23 ನೆರೆಯವನ ವಿಶ್ವಾಸವನ್ನು ಸಂಪಾದಿಸು,
ಅವನು ಬಡವನಾಗಿರುವಾಗ;
ನಿನಗೂ ಸಂತೃಪ್ತಿಯಾಗುವುದು,
ಅವನಿಗೆ ಸುಖ ಬಂದಾಗ
ಅವನನ್ನು ಬಿಡದಿರು,
ಅವನು ಆಪತ್ಕಾಲದಲ್ಲಿರುವಾಗ
ನಿನಗೂ ಪಾಲು ಬರುವುದು,
ಅವನಿಗೆ ಯಶಸ್ಸು ದೊರಕಿದಾಗ.
24 ಬಿರುಸುಮಾತುಗಳು ಹೊರಬೀಳುವುವು
ರಕ್ತಪಾತದ ಮೊದಲು
ಉಗಿಹೊಗೆಗಳಾಡುವುವು ಆವಿಗೆಯ ಬೆಂಕಿ
ಭುಗಿಲೇಳುವ ಮೊದಲು.
25 ಮಿತ್ರನಿಗೆ ಆಶ್ರಯಕೊಡಲು ನಾನು
ಹಿಂಜರಿಯುವುದಿಲ್ಲ
ಅವನಿಂದ ಮುಖತಪ್ಪಿಸಿಕೊಳ್ಳಲು
ಇಷ್ಟಪಡುವುದಿಲ್ಲ.

26 ಅವನಿಂದ ನನಗೇನಾದರೂ ಕೇಡು
ಸಂಭವಿಸಿದಲ್ಲಿ
ಕೇಳಿದವರೆಲ್ಲರೂ ಎಚ್ಚರಿಕೆ ವಹಿಸುವರು
ಅವನ ವಿಷಯದಲ್ಲಿ.

**ಪಾಪ ತಡೆಗಟ್ಟಲು ಪ್ರಾರ್ಥನೆ**

27 ನಾನು ತಪ್ಪು ಮಾಡದಂತೆ, ನನ್ನ ನಾಲಿಗೆ
ನನ್ನನು ಕೆಡಿಸದಂತೆ,
ನನ್ನ ಬಾಯಿಗೆ ಕಾವಲಿರಿಸುವವರಾರು?
ನನ್ನ ತುಟಿಗಳ ಮೇಲೆ ಜಾಣತನವೆಂಬ
ಮುದ್ರೆ ಒತ್ತುವವರಾರು?

**23** ಸರ್ವೇಶ್ವರಾ, ನನ್ನ ಜೀವಕ್ಕೆ
ತಂದೆಯೂ ಒಡೆಯನೂ
ಆಗಿರುವಾತನೇ,
ನನ್ನನ್ನು ತೊರೆದುಬಿಡಬೇಡ,
ಮಾತುಗಳಿಂದ ನಾನು ಮೋಸಹೋಗುವಂತೆ
ನನ್ನನ್ನು ಕೈಬಿಡಬೇಡ,
ಅವುಗಳಿಂದ ನಾನು ನಾಶವಾಗುವಂತೆ.
2 ನನ್ನ ಆಲೋಚನೆಗಳನ್ನು
ಹತೋಟಿಯಲ್ಲಿಡುವವರಾರು?
ನನ್ನ ಹೃದಯಕೆ ಜ್ಞಾನ ಶಿಕ್ಷಣ
ನೀಡುವವರಾರು?
ಅಂಥವರಿದ್ದರೆ ನನ್ನ ತಪ್ಪುಗಳನ್ನು ದಂಡಿಸಿ
ತಿದ್ದುಕೊಳ್ಳಬಹುದಿತ್ತು
ನನ್ನ ಪಾಪಗಳನ್ನು ತಡೆಗಟ್ಟಿ ನಿಲ್ಲಿಸಬಹುದಿತ್ತು.
3 ಆಗ ನನ್ನ ಅಜ್ಞಾನ ಬೆಳೆಯುವುದಿಲ್ಲ;
ನನ್ನ ಪಾಪಗಳು ಹೆಚ್ಚುವುದಿಲ್ಲ
ನನ್ನ ವಿರೋಧಿಗಳ ಎದುರಿನಲ್ಲಿ
ನಾನು ಬಿದ್ದು ಹೋಗುವುದಿಲ್ಲ
ನನ್ನ ಶತ್ರು ನನ್ನನ್ನು ಕಂಡು ಹಿಗ್ಗುವುದಿಲ್ಲ.
4 ಸರ್ವೇಶ್ವರಾ, ನನ್ನ ಜೀವಕ್ಕೆ ತಂದೆಯೂ
ಒಡೆಯನೂ ಆಗಿರುವಾತನೇ,
ಸೊಕ್ಕಿನ ಕಣ್ಣುಗಳನ್ನು ಕೊಡಬೇಡ ನನಗೆ.
5 ದುರಭಿಲಾಶೆಗಳನ್ನು ನನ್ನಿಂದ
ದೂರಮಾಡು.
6 ಹೊಟ್ಟೆಬಾಕತನವಾಗಲಿ, ಕಾಮತೃಷೆಯಾಗಲಿ
ನನ್ನನ್ನು ವಶಮಾಡಿಕೊಳ್ಳದಿರಲಿ
ಒಪ್ಪಿಸಬೇಡ ನನ್ನನ್ನು ನಾಚಿಕೆಗೇಡಿನ

ಮನೋಭಾವಕ್ಕೆ ಈಡಾಗಿ.

## ಆಣೆಯಿಡುವುದು ಬೇಡ

7 ಮಕ್ಕಳೇ, ನಾಲಗೆಯ ಹತೋಟಿಯ ಬಗ್ಗೆ
ಕೇಳಿ, ನಾ ಹೇಳುವುದನ್ನು:
ನಾಲಗೆಯನ್ನು ಬಿಗಿಹಿಡಿಯುವವನು
ಮೋಸಹೋಗಲಾರನು.
8 ಪಾಪಿಯು ಸಿಕ್ಕಿಬೀಳುವನು
ತನ್ನ ಮಾತುಗಳಿಂದಲೇ
ದೂಷಕನೂ ಗರ್ವಿಷ್ಠನೂ ಮುಗ್ಗರಿಸುವರು
ಅವುಗಳಿಂದಲೇ.
9 ನಿನ್ನ ಬಾಯಿಗೆ ರೂಢಿಮಾಡಿಸಬೇಡ
ಆಣೆಯಿಡುವುದನ್ನು
ಚಟವಾಗಿಸಬೇಡ ಹೀಗೆ ಪರಮಪಾವನನ
ಹೆಸರೆತ್ತುವುದನ್ನು.
10 ಪದೇಪದೇ ಪೆಟ್ಟುತಿನ್ನುವ ದಾಸನಲ್ಲಿ
ಯಾವಾಗಲೂ ಇರುತ್ತದೆ ಬಾಸುಂಡೆ;
ಅಂತೆಯೇ ದೇವರ ಹೆಸರೇಳಿ
ಆಣೆಯಿಡುವವನಲ್ಲಿ ಪಾಪದ ಕಲ್ಮಶ
ಇದ್ದೇ ಇರುತ್ತದೆ.
11 ಸದಾ ಆಣೆಯಿಡುವವನು ದೋಷಭರಿತನು
ಪೀಡೆ ಅವನ ಮನೆಯನು ಬಿಟ್ಟಗಲದು
ಆಣೆ ತೀರಿಸದಿದ್ದರೆ ಪಾಪ ಅವನ
ಮೇಲಿರುವುದು
ಅದನ್ನು ಅಲಕ್ಷಿಸಿದರೆ ಆ ಪಾಪ
ಇಮ್ಮಡಿಯಾಗುವುದು.
ಮಾಡಿದ ಪ್ರಮಾಣ ವ್ಯರ್ಥವಾದರೂ,
ಆತ ದೋಷಿಯಾಗುವುದು ತಪ್ಪದು
ಅವನ ಮನೆ ತೊಂದರೆ ತಾಪತ್ರಯಗಳಿಂದ
ತುಂಬಿರುವುದು.

## ಕೆಟ್ಟ ಮಾತು

12 ಮರಣದಂತಿರುವ ಮಾತು ಒಂದಿದೆ
ಅಂಥದ್ದು ಕಾಣದಿರಲಿ ಯಕೋಬನ
ವಂಶದಲ್ಲೇ.
ಇಂಥ ಮಾತುಗಳು ದೂರವಾಗಿವೆ
ನೀತಿವಂತರಿಗೆ
ಅವರು ಹೊರಳಾಡುವುದಿಲ್ಲ ಪಾಪದೊಳಗೆ.
13 ಹೊಲಸು ಮಾತಾಡುವ ಅಭ್ಯಾಸ ಕೂಡದು
ಅಂಥ ಮಾತು ಪಾಪಮಯವಾಗಿರುವುದು.

14 ನೀನು ದೊಡ್ಡವರ ಮಧ್ಯೆ ಕುಳಿತಿರುವಾಗ
ಜ್ಞಾಪಕಕೆ ಬರಲಿ ನಿನ್ನ ತಾಯಿತಂದೆ
ಮೈಮರೆತು ಮಾತಾಡಿ ಮೂರ್ಖನೆಂದು
ಕಂಡು ಬಂದೀಯೆ ಆ ಸಭಿಕರ ಮುಂದೆ
'ನಾನು ಹುಟ್ಟದಿದ್ದರೆ ವಾಸಿಯಾಗಿತ್ತು' ಎಂದು
ನಿನ್ನ ಜನ್ಮದಿನವನ್ನೇ ಶಪಿಸಿಕೊಂಡೀಯೆ!
15 ಬೈಯುವ ಅಭ್ಯಾಸವುಳ್ಳವನಿಗೆ
ಸುಧಾರಣೆಯಾಗದು ಸಾಯುವವರೆಗೆ.

**ಮೋಹಪಾಪ**

16 ಪಾಪದ ಮೇಲೆ ಪಾಪಕಟ್ಟಿಕೊಳ್ಳುವವರು
ಎರಡು ತರದ ಜನರು
ದೇವರ ಕೋಪವನ್ನು ತಮ್ಮ ಮೇಲೆ ಬರುವಂತೆ
ಮಾಡಿಕೊಳ್ಳುವವರು ಮೂರನೆಯವರು.
ಕಾಯ್ದ ಮನಸ್ಸು, ಉರಿಯುವ ಜ್ವಾಲೆ
ಆರಿಹೋಗವು ಸುಟ್ಟು ಬೂದಿಯಾಗುವವರೆಗೆ
ಸಂಬಂಧಿಕರೊಂದಿಗೆ ಜಾರತ್ವಗೈಯುವವನು
ಬಿಡನು ಅದನ್ನು ಕೊನೆಯವರೆಗೆ.
17 ತಿನ್ನುವುದೆಲ್ಲಾ ರುಚಿಯಾಗಿರುತ್ತದೆ ಜಾರನಿಗೆ
ಅದನ್ನು ಬಿಡನವನು ಸಾಯುವವರೆಗೆ.
18 "ನನ್ನನು ನೋಡುವವರು ಯಾರಿದ್ದಾರೆ?
ನನ್ನ ಸುತ್ತಲೂ ಕತ್ತಲೆ ಮುತ್ತಿದೆ;
ಗೋಡೆಗಳು ನನ್ನನ್ನು ಮರೆಯಾಗಿಸಿವೆ
ನನ್ನನು ನೋಡುವವರಾರೂ ಇಲ್ಲ;
ನಾನಂಜುವುದೇಕೆ?
ಮಹೋನ್ನತನು ನನ್ನ ಪಾಪಗಳನ್ನು ಲೆಕ್ಕಿಸನು"
ಈ ಪರಿ ಹೇಳಿಕೊಳ್ಳುವನು ವ್ಯಭಿಚಾರ
ಗೈಯುವವನು.
19 ಇಂಥವನು ಭಯಪಡುವುದು
ಜನರ ಕಣ್ಣಿಗೆ ಮಾತ್ರ
ಆದರೆ ಸರ್ವೇಶ್ವರನ ದೃಷ್ಟಿ ಸೂರ್ಯನಿಗಿಂತ
ಹತ್ತು ಸಾವಿರ ಹೊಳೆತ!
ಮನುಷ್ಯನ ಮಾರ್ಗಗಳೆಲ್ಲ ಆತನಿಗೆ ಪರಿಚಿತ
ಆತ ಬಲ್ಲ ಅತಿಗುಪ್ತವಾಗಿರುವ ಎಲ್ಲ
ಸ್ಥಳಗಳ ಇಂಗಿತ.
ಇದನ್ನು ಆ ವ್ಯಭಿಚಾರಿ ಗ್ರಹಿಸಲಾರ.
20 ಸೃಷ್ಟಿಗಿಂತಲೂ ಮೊದಲೇ ಸಕಲವನ್ನು
ಅರಿತಿದ್ದನು ಸರ್ವೇಶ್ವರ
ಸೃಷ್ಟಿಕಾರ್ಯ ಮುಗಿದಮೇಲೂ
ಬಲ್ಲನು ಅವುಗಳನ್ನೆಲ್ಲಾ.

21 ಈ ಕಾಮುಕನು ದಂಡನೆಗೆ ಗುರಿಯಾಗುವನು
ನಗರಬೀದಿಗಳಲ್ಲೇ
ಸಿಕ್ಕಿಬೀಳುವನು ನೆನೆಸದಿದ್ದ ಗಳಿಗೆಯಲ್ಲೇ.

**ವ್ಯಭಿಚಾರಿಣಿ**

22 ಅದೇ ಗತಿಯಾಗುವುದು ಗಂಡನನ್ನು
ಬಿಡುವವಳಿಗೆ
ಪರಪುರುಷರಿಂದ ಮಕ್ಕಳನ್ನು ಹೆರುವವಳಿಗೆ.
23 ಕಾರಣ, ಮೊದಲನೆಯದಾಗಿ,
ಆಕೆ ಮಹೋನ್ನತನ ಆಜ್ಞೆ ಮೀರಿದಳು
ಎರಡನೆಯದಾಗಿ, ತನ್ನ ಗಂಡನ ವಿರುದ್ಧ
ದ್ರೋಹಮಾಡಿದಳು
ಮೂರನೆಯದಾಗಿ ಹಾದರಮಾಡಿ
ಪರಪುರುಷನಿಂದ ಮಕ್ಕಳನ್ನು ಹೆತ್ತಳು.
24 ಇಂಥವಳನ್ನು ತರುವರು ಸಭೆಯ ಮುಂದೆ
ವಿಚಾರಣೆಗೆ ಗುರಿಪಡಿಸುವರು ಅವಳ ಮಕ್ಕಳ ಬಗ್ಗೆ.
25 ಇಂಥವಳ ಮಕ್ಕಳು ಬೇರೂರುವುದಿಲ್ಲ
ಅವಳ ಕೊಂಬೆಗಳು ಫಲಿಸುವುದಿಲ್ಲ.
26 ಅವಳ ಸ್ಮರಣೆ ನಿಂದಾಸ್ಪದವಾಗಿ ಉಳಿಯುವುದು
ಅವಳ ಕಳಂಕ ಮಾಸಿಹೋಗದು.
27 ಆಗ ಇತರರಿಗೆ ಗೊತ್ತಾಗುವುದು:
"ದೇವರ ಭಯಭಕ್ತಿಗಿಂತ ಉತ್ತಮವಾದುದು
ಯಾವುದೂ ಇಲ್ಲ
ಸರ್ವೇಶ್ವರನ ಆಜ್ಞೆಗಳಿಗೆ ಗಮನಕೊಡು
ವುದಕ್ಕಿಂತ ಮಧುರವಾದುದು ಇಲ್ಲ," ಎಂದು.

**ಸುಜ್ಞಾನದ ಸ್ತುತಿ**

**24** ಸುಜ್ಞಾನವೆಂಬಾಕೆ ಹೊಗಳಿಕೊಳ್ಳು
ವಳು ತನ್ನನ್ನೇ
ಹೆಚ್ಚಳಪಡುವಳವಳು ದೇವಜನರ ಮಧ್ಯೆ.
2 ಬಾಯಿ ತೆರೆಯುವಳು ಮಹೋನ್ನತನ
ಸಭೆಯಲ್ಲಿ
ಹೆಚ್ಚಳಪಡುವಳು ಆತನ ಶಕ್ತಿಯ
ಸಮಕ್ಷಮದಲ್ಲಿ.
3 "ನಾನು ಮಹೋನ್ನತನ ಬಾಯೊಳಗಿಂದ
ಬಂದೆ
ಮಂಜುಮೋಡದಂತೆ ಭೂಮಿಯೆಲ್ಲವನ್ನೂ
ಮುಚ್ಚಿಕೊಂಡೆ.
4 ನಾ ವಾಸಮಾಡಿದೆ ಉನ್ನತಲೋಕದಲ್ಲಿ

ನನ್ನ ಆಸನವಿದೆ ಮೇಘಸ್ತಂಭದಲ್ಲಿ.
5 ನಾನೊಬ್ಬಳೇ ಸುತ್ತಾಡಿದೆ ಆಕಾಶ
ಮಂಡಲವನ್ನೆಲ್ಲಾ
ತಿರುಗಾಡಿದೆ ಪಾತಾಳದಲ್ಲೆಲ್ಲಾ.
6 ಅಧಿಕಾರ ನಡೆಸಿದೆ ಸಮುದ್ರ ತೆರೆಗಳಲ್ಲೂ
ಸಮಗ್ರ ಭೂಮಿಯಲ್ಲೂ
ಪ್ರತಿಯೊಂದು ಜನಾಂಗದಲ್ಲೂ,
ರಾಷ್ಟ್ರದಲ್ಲೂ.
7 ವಿಶ್ರಾಂತಿನೆಲೆಯನು ನಾ ಕೋರಿದೆ
ಇವೆಲ್ಲದರಲ್ಲಿ
ಯಾರ ಪ್ರಾಂತ್ಯದಲಿ ನಾನು ತಂಗಿರಲಿ?
8 ಆಗ ಅಪ್ಪಣೆ ಮಾಡಿದ ನನಗೆ ಎಲ್ಲದರ
ಸೃಷ್ಟಿಕರ್ತನು
ನಾನೊಂದೆಡೆ ಬೀಡುಬಿಡುವಂತೆ ಮಾಡಿದನು
ನನ್ನ ನಿರ್ಮಾಪಕನು.
‘ನಿನ್ನ ಬಿಡಾರ ಇಸ್ರಯೇಲಿನಲ್ಲಿರಲಿ
ಯಕೋಬನ ಸಂತಾನ ನಿನಗೆ ಪ್ರಜೆಯಾಗಿರಲಿ’
ಎಂದೆನಗೆ ನುಡಿದನು.
9 ಆತ ಸೃಷ್ಟಿಸಿದನೆನ್ನನು ಆದಿಯಲ್ಲಿ ಯುಗಕ್ಕೆ
ಮೊದಲೆ
ಸದಾಸರ್ವದಾ ನಾನಿರುವೆ ಅಳಿಯದೆ.
10 ಆತನಿಗೆ ನಾ ಸೇವೆ ಮಾಡಿದೆ ಪರಿಶುದ್ಧ
ಗುಡಾರದಲ್ಲಿ
ಹೀಗೆ ಪ್ರತಿಷ್ಠಾಪಿತಳಾದೆ ಸಿಯೋನಿನಲ್ಲಿ.
11 ಅಂತೆಯೇ ನಿವಾಸನೆಲೆಯನಿತ್ತರೆನಗೆ
ಆ ಪ್ರಿಯ ನಗರದಲ್ಲಿ
ಅಧಿಕಾರವಿತ್ತೆನಗೆ ಜೆರುಸಲೇಮಿನಲ್ಲಿ.
12 ಬೇರೂರಿಕೊಂಡೆ ಗೌರವಾನ್ವಿತ
ಆ ಜನಾಂಗದಲ್ಲಿ
ಸರ್ವೇಶ್ವರನ ಸ್ವಕೀಯ ಪ್ರಜೆಯಲ್ಲಿ.
13 ಎತ್ತರವಾಗಿ ಬೆಳೆದ ಲೆಬನೋನಿನ ದೇವದಾರು
ಮರದಂತೆ
ಹೆರ್ಮೋನ್ ಪರ್ವತದ ತುರಾಯಿ ಗಿಡದಂತೆ.
14 ಬೆಳೆದೆ ಎತ್ತರವಾಗಿ ಸಮುದ್ರ ತೀರದ
ತಾಳೆಮರದಂತೆ
ಜೆರಿಕೋವಿನಲ್ಲಿನ ಗುಲಾಬಿ ಗಿಡದಂತೆ
ಬಯಲು ನಾಡಿನ ಅಂದವಾದ ಎಣ್ಣೆಮರದಂತೆ
ಅಂತೂ ನಾ ಮೆರೆದೆ ಉನ್ನತವಾದ ಮರದಂತೆ.
15 ಪರಿಮಳ ಬೀರಿದೆ ಲವಂಗಚಕ್ಕೆಯಂತೆ
ಗುಲಾಬಿ ಹೂವಿನಂತೆ

ಆರಿಸಿದ ಮೀರೆಂಬ ರಸಗಂಧ, ಸುಗಂಧ,
ಚಕ್ಕೆಯಂತೆ
ಹಾಗು ಗುಗ್ಗುಲ, ಹಾಲುಮಡ್ಡಿಗಳಂತೆ
ದೇವದರ್ಶನದ ಗುಡಾರದಲ್ಲೇಳುವ
ಸಾಂಬ್ರಾಣಿ ಹೊಗೆಯಂತೆ.
16–17 ನನ್ನ ಕೊಂಬೆಗಳನ್ನು ಹರಡಿದೆ
ಏಲಾಮರದಂತೆ
ಚಿಗುರಿದೆ ನಾ ಅಂದವಾಗಿ ದ್ರಾಕ್ಷಾಬಳ್ಳಿಯಂತೆ.
ನನ್ನ ಕೊಂಬೆಗಳಿದ್ದವು ಸೊಗಸಾಗಿ, ರಮ್ಯವಾಗಿ
ನನ್ನ ಹೂಗಳಿದ್ದವು ಸೊಂಪಾಗಿ, ಫಲಗಳು
ಸಮೃದ್ಧಿಯಾಗಿ.
18 ನಿಷ್ಕಳಂಕ ಪ್ರೀತಿ, ದೇವಭಯ, ಸುಜ್ಞಾನ,
ಪವಿತ್ರ ನಂಬಿಕೆ.
ನಾ ಮಾತೆಯಾಗಿರುವೆ ಇವುಗಳಿಗೆ
ನಿತ್ಯವಾಗಿರುವ ನಾನು ಅನುಗ್ರಹಿಸಲಾಗಿರುವೆ
ನನ್ನ ಮಕ್ಕಳೆಲ್ಲರಿಗೆ, ಆತನು ಹೆಸರಿಟ್ಟವರಿಗೆ.
19 ನನ್ನನ್ನು ಬಯಸುವ ಜನರೇ,
ನನ್ನ ಬಳಿಗೆ ಬನ್ನಿ
ನನ್ನ ಸತ್ಫಲಗಳಿಂದ ಸಂತೃಪ್ತರಾಗಿ.
20 ಏಕೆಂದರೆ, ಸಿಹಿ ನನ್ನ ಸ್ಮರಣೆ
ಜೇನುತುಪ್ಪಕ್ಕಿಂತ
ಮಧುರ ನನ್ನಾನುಭವ ಜೇನುಗೂಡಿಗಿಂತ.
21 ನನ್ನನ್ನು ಭುಜಿಸುವವರು
ಇನ್ನೂ ಭುಜಿಸಬೇಕೆನ್ನುವರು
ನನ್ನನ್ನು ಪಾನಮಾಡುವವರು
ಇನ್ನೂ ಪಾನಮಾಡಬೇಕೆನ್ನುವರು.
22 ನಾಚಿಕೆಯಾಗದು ನಾನು ಹೇಳಿದಂತೆ
ಕೇಳುವವನಿಗೆ
ತಪ್ಪುಮಾಡಲಾಗದು ನಾನು ಹೇಳಿದಂತೆ
ನಡೆಯುವವನಿಗೆ."

### ಸುಜ್ಞಾನ ಮತ್ತು ಧರ್ಮಶಾಸ್ತ್ರ

23 ಸುಜ್ಞಾನವು ಮಹೋನ್ನತ ದೇವರ
ಒಡಂಬಡಿಕೆಯ ಗ್ರಂಥವು
ಯಕೋಬ ಸಮಾಜಕ್ಕೆ ಮೋಶೆ ವಿಧಿಸಿ
ಸೊತ್ತಾಗಿ ಕೊಟ್ಟ ಧರ್ಮಶಾಸ್ತ್ರವು.
24 ಎಡೆಬಿಡದೆ ಸರ್ವೇಶ್ವರನಿಂದ ಶಕ್ತಿ ಹೊಂದು
ಹಿಡಿದುಕೊ ಶಕ್ತಿನೀಡಲೆಂದು ಆತನನ್ನು
ಸರ್ವಶಕ್ತ ಸರ್ವೇಶ್ವರನೊಬ್ಬನೇ ದೇವರು
ಆತನ ಹೊರತು ಬೇರೆ ಇಲ್ಲ ಉದ್ಧಾರಕನು.

25 ಹೊಸ ಫಲಗಳ ಕಾಲದಲ್ಲಿ ಟೈಗ್ರೀಸ್
ನದಿಯಂತೆ,
ಪೀಶೋನ್ ನದಿಯಂತೆ ಮಾಡುವನಾತ
ಜ್ಞಾನ ತುಂಬಿ ಹರಿವಂತೆ.
26 ತುಂಬು ವಿವೇಕವನ್ನೀವನು ಯೂಫ್ರೆಟಿಸ್
ನದಿಯಂತೆ
ಸುಗ್ಗಿಕಾಲದ ಜೋರ್ಡನ್ ಹೊಳೆಯಂತೆ.
27 ನೈಲಿನಂತೆ, ದ್ರಾಕ್ಷಿಯ ಸುಗ್ಗಿಕಾಲದ
ಗೀಹೋನ್ ನದಿಯಂತೆ
ಮಾಡುವುದದು ಸುಶಿಕ್ಷಣ ಪ್ರಜ್ವಲಿಸಿ
ಹರಿಯುವಂತೆ.
28 ಆದಿಮಾನವ ಸುಜ್ಞಾನವನ್ನು ಪೂರ್ತಿಯಾಗಿ
ತಿಳಿದುಕೊಳ್ಳಲಿಲ್ಲ
ಅಂತೆಯೇ ಕಟ್ಟಕಡೆಯವನೂ ಅದನ್ನು
ಸಂಪೂರ್ಣವಾಗಿ ಗ್ರಹಿಸಲಾರ.
29 ಏಕೆಂದರೆ ಆಕೆಯ ಆಲೋಚನೆಗಳು
ಸಾಗರಕ್ಕಿಂತಲೂ ವಿಶಾಲ
ಆಕೆಯ ಸಂಕಲ್ಪಗಳು ಪಾತಾಳಕ್ಕಿಂತಲೂ
ಅಗಾಧ.
30 ನಾನಂತೂ ಬಂದೆ ನದಿಯಿಂದ ತೆಗೆದ
ಕಾಲುವೆಯಂತೆ
ತೋಟದೊಳಗೆ ಬಂದೆ ನೀರಿನ ನಾಳದಂತೆ.
31 ಆಗ ನಾನೆಂದುಕೊಂಡೆ:
"ನನ್ನ ತೋಟಕ್ಕೆ ನೀರು ಬಿಡುವೆ
ನನ್ನ ಹೂವಿನ ಮಡಿಗೆ ಯಥೇಚ್ಛವಾಗಿ
ಕುಡಿಸುವೆ"
ಆಗ ಏನಾಶ್ಚರ್ಯ! ನನ್ನ ಕಾಲುವೆ
ನದಿಯಾಯಿತು
ನನ್ನ ನದಿ ಸಾಗರವಾಯಿತು!
32 ಇನ್ನು ಸುಬೋಧೆಯನ್ನು ಬೆಳಗಿಸುವೆ
ಉದಯಕಾಲದ ಬೆಳಕಿನಂತೆ
ಬಹುದೂರ ಅದು ಹರಡುವಂತೆ.
33 ಹರಿಯಮಾಡುವೆ ಸುಬೋಧೆಯನ್ನು
ಪ್ರವಾದನೆಯಂತೆ
ಅದು ಯುಗಯುಗಾಂತರಗಳವರೆಗೂ
ಉಳಿಯುವಂತೆ.
24 ನಾ ಕಷ್ಟಪಟ್ಟಿರುವೆ, ನೋಡಿ, ನನಗಾಗಿ
ಮಾತ್ರವಲ್ಲ
ಸುಜ್ಞಾನವನ್ನು ಹುಡುಕುವವರೆಲ್ಲರಿಗೋಸ್ಕರ.

**ಸ್ತುತ್ಯಾರ್ಹ ವ್ಯಕ್ತಿಗಳು**

**25** ಮೂರು ವಿಷಯಗಳಲ್ಲಿ ನಾನು
ಗೌರವಾನ್ವಿತಳಾದೆ,
ದೇವರ ಹಾಗು ಮಾನವರ ಮುಂದೆ
ಕೀರ್ತಿವಂತಳಾದೆ:
ಸೋದರರ ಐಕ್ಯಮತ್ಯ, ನೆರೆಯವರ ಸ್ನೇಹ,
ಗಂಡಹೆಂಡಿರ ಸಾಮರಸ್ಯ ಇವೇ.
2 ಮೂರು ವಿಧದ ಜನರನ್ನು ನನ್ನ ಮನಸ್ಸು
ಹೇಸುತ್ತದೆ
ಅವರ ಬಾಳು ನನಗೆ ಜಿಗುಪ್ಸೆ
ಉಂಟುಮಾಡುತ್ತದೆ:
ಜಂಬದ ಬಡವ, ಸುಳ್ಳಾಡುವ ಸಿರಿವಂತ,
ಬುದ್ಧಿಗೆಟ್ಟ ಮಂದಿ ವ್ಯಭಿಚಾರ – ಇವರೇ.

**ವೃದ್ಧಾಪ್ಯರು**

3 ಯೌವನದಲ್ಲಿ ನೀನು ಏನನ್ನೂ ಕೂಡಿಸಿಟ್ಟು
ಕೊಳ್ಳದಿದ್ದರೆ
ಮುಪ್ಪಿನ ಕಾಲದಲ್ಲಿ ಹೇಗೆ ಪಡೆದುಕೊಳ್ಳುವೆ?
4 ಆಹಾ ! ನ್ಯಾಯತೀರಿಸುವುದು ನರೆಗೂದಲಿಗೆ
ಎಷ್ಟು ರಮ್ಯ !
ಬುದ್ಧಿಹೇಳುವುದು ಹಿರಿಯರಿಗೆ
ಎಷ್ಟು ಚಂದ !
5 ವೃದ್ಧರಿಗೆ ಜ್ಞಾನ ಎಷ್ಟು ಸೊಗಸು !
ಮರ್ಯಾದಸ್ಥರಿಗೆ ಆಲೋಚನೆ,
ಬುದ್ಧಿವಾದಗಳು ಎಷ್ಟು ಇಂಪು !
6 ಅನುಭವವೇ ಮುದುಕರಿಗೆ ಮುಕುಟ
ದೇವರ ಭಯವೇ ಅವರಿಗೆ ಗೌರವ.

**ಧನ್ಯರು**

7 ಒಂಬತ್ತು ವ್ಯಕ್ತಿಗಳು ಧನ್ಯರೆಂಬುದು
ನನ್ನ ಮನದಾಲೋಚನೆ
ಅಂಥ ಹತ್ತನೆಯವನು ಯಾರೆಂದು
ನನ್ನ ನಾಲಿಗೆ ನುಡಿಯಲಿದೆ:
ಅವರುಗಳು ಯಾರೆಂದರೆ:
ತನ್ನ ಮಕ್ಕಳ ವಿಷಯದಲಿ ಹೆಮ್ಮೆಪಡುವ
ಮನುಜನು
ವೈರಿಯ ಪತನ ನೋಡುವವರೆಗೆ ಬಾಳುವ
ನರನು.
8 ಧನ್ಯನು ! ಗುಣವತಿಯಾದ ಸತಿಯೊಡನೆ ಮನೆ

ನಡೆಸುವವನು
ಎತ್ತನ್ನು ಕತ್ತೆಯೊಂದಿಗೆ ನೊಗಕ್ಕೆ ಕಟ್ಟಿ ಹೊಲ
ಉಳದವನು.
ಅಂತೆಯೇ ಧನ್ಯನು ನಾಲಿಗೆಯಿಂದ
ಪಾಪಕಟ್ಟಿಕೊಳ್ಳದವನು
ಮತ್ತು ಅಯೋಗ್ಯನ ಸೇವೆ ಮಾಡದವನು.
9 ಧನ್ಯನು ! ನಿಜವಾದ ಗೆಳೆಯನನ್ನು
ಕಂಡುಕೊಂಡವನು
ಶ್ರದ್ಧೆಯುಳ್ಳ ಶ್ರೋತೃಗಳನ್ನು ಪಡೆದು
ಇರುವವನು.
10 ಆಹಾ! ಜ್ಞಾನವನ್ನು ಕಂಡುಕೊಂಡವನು
ಎಷ್ಟೋ ಘನವಂತ
ಆದರೆ ಸರ್ವೇಶ್ವರನಲ್ಲಿ ಭಯಭಕ್ತಿ
ಉಳ್ಳವನಿಗಿಂತ ಮೇಲಾದವನಿಲ್ಲ.
11 ದೇವರಲ್ಲಿ ಭಯಭಕ್ತಿ ಎಲ್ಲ
ವಿಷಯಗಳಿಗಿಂತಲೂ ಶ್ರೇಷ್ಠ
ಅದರಲ್ಲಿ ಸ್ಥಿರವಾಗಿ ನಿಲ್ಲುವವರನ್ನು ಯಾರಿಗೆ
ಹೋಲಿಸಲು ಸಾಧ್ಯ?
12 ದೇವಭಯವೇ ದೇವಪ್ರೀತಿಯ ಮೊದಲ
ಹೆಜ್ಜೆ
ಆತನ ಭಕ್ತನಾಗಿರಲು ವಿಶ್ವಾಸವೇ ಮೊದಲ
ಪವಟಿಗೆ.

**ಕೆಟ್ಟ ಹಾಗು ಒಳ್ಳೆಯ ಮಹಿಳೆಯರು**

13 ನನಗೆ ಬೇಕಾದ ನೋವು ಕೊಡು;
ಹೃದಯ ವೇದನೆ ಮಾತ್ರ ಬೇಡ
ಬೇಕಾದ ಕೀಟಲೆ ಕೊಡು;
ಹೆಣ್ಣಿನ ಕೀಟಲೆ ಮಾತ್ರ ಬೇಡ.
14 ಬೇಕಾದ ದುಃಖ ಬರಲಿ;
ನನ್ನ ಹಗೆಗಳಿಂದ ಮಾತ್ರ ಬೇಡ
ಬೇಕಾದ ಪ್ರತೀಕಾರವಿರಲಿ;
ನನ್ನ ವೈರಿಗಳ ಪ್ರತೀಕಾರ ಬೇಡ.
15 ಸರ್ಪದ ವಿಷಕ್ಕಿಂತ ಮಿಗಿಲಾದ ವಿಷವಿಲ್ಲ
ವೈರಿಯ ರೋಷವನ್ನು ಮೀರಿದ ರೋಷವಿಲ್ಲ.
16 ದುಷ್ಟಳ ಜೊತೆಯಲ್ಲಿ ಬಾಳುವುದಕ್ಕಿಂತ
ಸರ್ಪಗಳೊಂದಿಗೆ ಬಾಳುವುದು ಸುಲಭ.
17 ಸ್ತ್ರೀಯ ದುಷ್ಟತನ ಬದಲಾಯಿಸುತ್ತದೆ
ಅವಳ ರೂಪವನ್ನು
ಕರಡಿಯಂತೆ ಕಪ್ಪು ಮಾಡುವುದು
ಅವಳ ಮುಖವನ್ನು.

18 ಅವಳ ಗಂಡನು ತನ್ನವರೊಂದಿಗೆ ಊಟಕ್ಕೆ
ಕೂತಿರುವಾಗ
ನಿಟ್ಟುಸಿರಿಡುವನು ಅವರ ಮಾತು ಕೇಳುವಾಗ.
19 ಸ್ತ್ರೀಯ ದುಷ್ಟತನದ ಮುಂದೆ ಉಳಿದ
ದುಷ್ಟತನ ಅಲ್ಪವೇ ಸರಿ;
ಅವಳಿಗೂ ಬರಲಿ ಪಾಪಿಷ್ಠನ ಗತಿ.
20 ಮರಳಿನ ದಿಣ್ಣೆ ಏರುವುದು ಮುದಿಕಾಲುಗಳಿಗೆ
ಹೇಗೋ ಹಾಗೆ
ವಾಚಾಳಿ ಹೆಂಡತಿಯ ಸಂಘ ಸಾಧು
ಮನುಷ್ಯನಿಗೆ.
21 ಮರುಳಾಗಬೇಡ ಸ್ತ್ರೀಯ ಬೆಡಗಿಗೆ
ಬಯಕೆಬೇಡ ಆಕೆಯ ಚೆಲುವಿಕೆಗೆ.
22 ಗಂಡನಿಗೆ ಹೆಂಡತಿ ದುಡಿದು ಹಾಕಿದರೆ
ದಕ್ಕುವುದು ಸಿಡುಕು, ಸೊಕ್ಕು, ಅವಮಾನ ಅವನಿಗೆ.
23 ದುಷ್ಟ ಹೆಂಡತಿ ಎದೆಗುಂದಿಸುವಳು,
ವ್ಯಥೆ ಕೊಡುವಳು, ಮನನೋಯಿಸುವಳು;
ಜೋಲುಗೈಯಂತೆ, ನಡುಗುವ ಮೊಣ
ಕಾಲಿನಂತೆ, ಗಂಡನಿಗೆ ಸುಖಕೊಡಳು.
24 ಪಾಪವು ಆರಂಭವಾದುದು ಸ್ತ್ರೀಯಿಂದ
ನಾವೆಲ್ಲ ಸಾಯುವುದು ಆಕೆಯ ದೆಸೆಯಿಂದ.
25 ನೀರಿಗೆ ಹಾದಿ ಕೊಡಬೇಡ
ದುಷ್ಟಳಿಗೆ ಅಧಿಕಾರ ಕೊಡಬೇಡ.
26 ನಿನ್ನಿಷ್ಟದಂತೆ ಅವಳು ನಡೆಯದಿದ್ದರೆ
ಅವಳ ಸಹವಾಸ ಬೇಡ ನಿನಗೆ.

**26** ಗುಣವತಿಯಾದ ಹೆಂಡತಿಯನ್ನು
ಪಡೆದವನು ಧನ್ಯನು !
ಇಮ್ಮಡಿಯಾಗುವುವು ಅವನ ಬಾಳಿನ
ದಿನಗಳು.
2 ಸದ್ಗುಣಿ ಆನಂದಪಡಿಸುವಳು
ತನ್ನ ಗಂಡನನ್ನು
ಇಂಥವನು ಸಮಾಧಾನದಿಂದ ಪೂರೈಸುವನು
ಬದುಕನ್ನು.
2 ಒಳ್ಳೆಯ ಹೆಂಡತಿ ಒಂದು ಸೌಭಾಗ್ಯ
ಅಂಥವಳು ದೇವರಲ್ಲಿ ಭಯಭಕ್ತಿಯುಳ್ಳವನಿಗೆ ಲಭ್ಯ.
4 ಅವನು ಬಡವನಿರಲಿ, ಬಲ್ಲಿದನಿರಲಿ
ತೃಪ್ತನಾಗಿರುವನು.
ಸಕಲ ಸಂದರ್ಭಗಳಲ್ಲಿ
ಹಸನ್ಮುಖನಾಗಿರುವನು.

5 ಮೂರು ವಿಷಯಗಳನ್ನು ಕುರಿತು ಅಳುಕಿತು
ನನ್ನ ಹೃದಯ
ನಾಲ್ಕನೆಯದನ್ನು ಕುರಿತು, ನನ್ನಲ್ಲುಂಟಾಯಿತು
ಭಯ:
ನಗರದ ನಿಂದೆ, ಪುಂಡರ ತಂಡ, ಸುಳ್ಳು
ಆರೋಪ, ಇವು ಮರಣಕ್ಕಿಂತಲೂ
ಭಯಂಕರ!
6 ಆದರೆ ಇನ್ನೊಬ್ಬಳ ಮೇಲೆ ಹೊಟ್ಟೆಕಿಚ್ಚು
ಪಡುವ ಸ್ತ್ರೀಯು
ಎಲ್ಲರನ್ನೂ ನಿಂದಿಸುವ ಅವಳ ನಾಲಗೆಯು
ಹೃದಯಾಘಾತವನ್ನು, ದುಃಖವನ್ನು ಉಂಟು
ಮಾಡುವಂಥವು.
7 ಕೆಟ್ಟ ಹೆಂಗಸು ಅತ್ತಿತ್ತ ಹೊಯ್ದಾಡುವ
ನೊಗವಿದ್ದಂತೆ
ಇಂಥವಳನ್ನು ಕಟ್ಟಿಕೊಂಡವನು ಚೇಳನ್ನು
ಹಿಡಿದುಕೊಂಡವನಂತೆ.
8 ಕುಡುಕಳು ಎಂಥವನಲ್ಲೂ ಕಡುಗೋಪ
ಎಬ್ಬಿಸುವಳು
ಇಂಥವಳು ತನ್ನ ಮಾನವನ್ನು ಸಹ
ಮುಚ್ಚಿಕೊಳ್ಳಳು.
9 ಹೆಣ್ಣಿನ ಸೂಳೆತನ ಕಂಡುಬರುವುದೆಲ್ಲಿ?
ಅವಳ ಕಣ್ಣುಹೊಡೆತದಲ್ಲಿ, ರೆಪ್ಪೆಬಡಿತದಲ್ಲಿ.
10 ಬಿಗಿಬಂಧನದಲ್ಲಿಡು ಮಾನವನ್ನರಿಯದ
ಮಗಳನ್ನು
ಇಲ್ಲದಿರೆ, ದುರುಪಯೋಗಿಸಿಕೊಂಡಾಳು
ಸ್ವಾತಂತ್ರ್ಯವನ್ನು.
11 ನಾಚಿಕೆಯಿಲ್ಲದ ಅವಳ ಕಣ್ಣಿನ ಬಗ್ಗೆ ಎಚ್ಚರಿಕೆ!
ಆಶ್ಚರ್ಯಪಡಬೇಡ ಅದು ನಿನಗೆ
ಕೆಡುಕುಮಾಡಿದರೆ.
12 ನೀರಡಿಕೆಯುಳ್ಳ ದಾರಿಹೋಕನಂತೆ, ಸಿಕ್ಕಿದ
ನೀರಿಗೆ ಬಾಯಿ ತೆರೆಯುವಳು
ಪ್ರತೀಗೂಟದ ಬಳಿ ಕುಳಿತು, ಬಂದ
ಬಾಣಕ್ಕೆ ಬತ್ತಳಿಕೆ ತೆರೆಯುವಳು.
13 ಗಂಡನನ್ನು ಮೆಚ್ಚಿಸುವುದು ಹೆಂಡತಿಯ
ಲಾವಣ್ಯ
ಅವಳ ಬುದ್ಧಿವಂತಿಕೆಯಿಂದ ಅವನ ದೇಹಕ್ಕೆ
ಮತ್ತಷ್ಟು ಚೈತನ್ಯ.
14 ಮಿತಿಮಾತಿನ ಸತಿ ದೇವರಿಂದ ಬಂದ ವರವು
ಸುಶಿಕ್ಷಿತ ಮನಸ್ಸಿಗೆ ಸಮಾನವಾದುದೊಂದೂ
ಇಲ್ಲವು.

15 ಲಜ್ಜಾಶೀಲ ಸತಿ ಚೆಲುವಿನ ಮೇಲೆ
ಚೆಲುವಿದ್ದಂತೆ
ಬೆಲೆಯೇ ಕಟ್ಟಲಾಗದು ಆಕೆಯ
ಪಾತಿವ್ರತ್ಯಕ್ಕೆ.
16 ಸರ್ವೇಶ್ವರನ ಉನ್ನತಾಕಾಶದಲ್ಲಿ ಏರುತ್ತಿರುವ
ಸೂರ್ಯನೋಪಾದಿ
ತನ್ನ ಮನೆತನವನ್ನೆಲ್ಲ ನೋಡಿಕೊಳ್ಳುವ
ಸೊಬಗಿನ ಸತಿ.
17 ಮುಪ್ಪಿನಕಾಲದಲ್ಲಿ ಹೊಳೆಯುವ ಮುಖ
ದೀಪಸ್ತಂಭದ ಮೇಲೆ ಬೆಳಗುವ ದೀಪ.
18 ಸ್ಥಿರಮನಸ್ಸಿನವಳ ಸುಂದರವಾದ ಪಾದ
ಬೆಳ್ಳಿಯ ಗದ್ದುಗೆ ಮೇಲಿರಿಸಿದ
ಬಂಗಾರದ ಕಂಭ.
19 ಮಗನೇ, ನಿನ್ನ ಯೌವನದ ಹುರುಪು
ಉತ್ಸಾಹವನ್ನು ಕಾಪಾಡು
ನಿನ್ನ ಶಕ್ತಿಸಾಮರ್ಥ್ಯವನ್ನು ಅನ್ಯರೊಡನೆ
ವ್ಯರ್ಥಮಾಡದಿರು.
20 ಫಲವತ್ತಾದ ಭೂಮಿಯನ್ನು
ಇಡೀ ಬಯಲಿನಲ್ಲಿ ಹುಡುಕು
ನಿನ್ನ ಸ್ವಂತ ಬೀಜವನ್ನು ಅಲ್ಲಿ ಬಿತ್ತನೆ ಮಾಡು;
ನಿನ್ನ ಬಿತ್ತನೆ ಕಾಳಿನಲಿ ನಂಬಿಕೆಯಿಡು.
21 ಹೀಗೆ ನಿನ್ನ ಸಂತತಿ ಉತ್ಪನ್ನವಾಗಿ
ಬೆಳೆಯುವುದು
ತನ್ನ ಸಂತಾನ ಭಾಗ್ಯದಲ್ಲಿ ನಂಬಿಕೆಯಿಟ್ಟು
ವೃದ್ಧಿಯಾಗುವುದು.
22 ವೇಶ್ಯೆಯು ಉಗುಳಿಗಿಂತ ಬೀಳು
ಗಂಡನಿರುವವಳು ಕೋಟೆಗಿಂತ ಗಟ್ಟಿಗಳು.
23 ಅಧರ್ಮಿಯಾದ ಹೆಂಡತಿ ದೈವಾಜ್ಞೆ
ಉಲ್ಲಂಘಿಸುವವನ ಗೋಳು
ಭಕ್ತಿಯುಳ್ಳವಳಾದರೋ ದೇವರಿಗೆ
ಭಯಪಡುವವನ ಮೋಜು.
24 ನಾಚಿಕೆಯಿಲ್ಲದ ಹೆಂಡತಿಗೆ ನೀಚತನದಲ್ಲೂ
ಒಸಗೆ
ಶೀಲವತಿಗೆ ತನ್ನ ಗಂಡನ ಮುಂದೆಯೂ
ನಾಚಿಕೆ.
25 ಹಠಮಾರಿಯಾದ ನಾರಿ ನಾಯಿಯಂತೆ ಬೀಳು
ಸಭ್ಯಳಾದರೋ ಸರ್ವೇಶ್ವರನಿಗೆ ಅಂಜುವಳು.
26 ಗಂಡನನ್ನು ಗೌರವಿಸುವ ಹೆಂಡತಿಯನ್ನು
ಜ್ಞಾನಿಯೆನ್ನುವರು
ಗಂಡನನ್ನು ಗರ್ವದಿಂದ ಕಾಣುವವಳನ್ನು

ಅಧರ್ಮಿಯೆಂದು ಕರೆವರು.
ಗುಣವತಿಯಾದ ಹೆಂಡತಿಯನ್ನು ಪಡೆದವನು
ಧನ್ಯನು !
27 ವಾಚಾಳಿ ಹೆಂಡತಿಯ ದೊಡ್ಡ ನಾಲಿಗೆ
ಶತ್ರುಗಳನ್ನೆಚ್ಚರಿಸುವ ಯುದ್ಧ ಕಹಳೆ
ಇಂಥವಳನ್ನು ಕಟ್ಟಿಕೊಂಡಿರುವವನ ಜೀವನ
ಕಲಹಕ್ರಾಂತಿಗೆ ಸಮಾನ.
28 ನೊಂದಿದೆ ನನ್ನ ಮನಸ್ಸು ಎರಡು
ವಿಷಯಗಳನು ಕುರಿತು;
ನನಗೆ ಸಿಟ್ಟು ತರಿಸುತ್ತದೆ ಮೂರನೆಯದು:
ಬಡತನದಲಿ ಬಳಲುತ್ತಿರುವ ಬಂಟನು
ಕಸಕ್ಕೆ ಸಮಾನವಾಗಿ ಎಣಿಸಲಾದ ಜ್ಞಾನಿಯು
ಪಾಪಮಾರ್ಗಕೆ ತಿರುಗುವ ಸಜ್ಜನನು
ದೇವರು ಕತ್ತಿಗಾಗಿ ಸಿದ್ಧಗೊಳಿಸುವರು
ಇಂಥವನನ್ನು.

### ವ್ಯಾಪಾರ

29 ತಪ್ಪು ಮಾಡದಿರುವ ವ್ಯಾಪಾರಿ ಅಪರೂಪ
ಪಾಪದಿಂದ ಮುಕ್ತನಲ್ಲ
ಕಿರುಕುಳ ಕೊಡುವ ವರ್ತಕ.

**27** ಅನೇಕರು ಪಾಪಕಟ್ಟಿಕೊಳ್ಳುತ್ತಾರೆ
ಲಾಭ ವಿಷಯಕ್ಕೆ
ಗಳಿಕೆಯಲ್ಲೇ ನಿರತರಾಗಿರುವವರು ಕಣ್ಣು
ಮುಚ್ಚಿಕೊಳ್ಳುತ್ತಾರೆ.
2 ಮೊಳೆಯು ಜಡಿಯಲಾಗುವುದು ಕಲ್ಲು
ಸಂದಿಯಲ್ಲಿ
ಅಂತೆಯೇ ಪಾಪವು ಸೇರಿಕೊಳ್ಳುವುದು
ಮಾರುವ ಕೊಳ್ಳುವ ಮಧ್ಯದಲ್ಲಿ.
3 ದೇವರಲ್ಲಿ ಸ್ಥಿರ ಭಯಭಕ್ತಿ ಇಲ್ಲದವನೇ,
ಬೇಗನೆ ವಿನಾಶವಾಗುವುದು ನಿನ್ನ ಮನೆ.

### ಮಾತುಕತೆ

4 ಕಾಳನು ಸಾಣಿಸುವಾಗ ಹಿಪ್ಪೆ ಉಳಿಯುವುದು
ಜರಡಿಯಲ್ಲಿ
ಮನುಷ್ಯನ ಹೊಲೆತನ ಕಂಡುಬರುವುದು
ಅವನ ಆಲೋಚನೆಯಲ್ಲಿ.
5 ಕುಂಬಾರನ ಮಡಕೆಯ ಪರೀಕ್ಷೆ ಬೆಂಕಿಯ
ಆವಿಗೆಯಿಂದ

ಮನುಷ್ಯನ ಪರೀಕ್ಷೆ ಅವನ ಸಂಭಾಷಣೆಯಿಂದ.
6 ಮರದ ಫಲ ತೋರಿಸುವುದು ಅದನ್ನು
ಬೆಳೆಯಿಸಿದ ಹದವನ್ನು
ಮಾತು ವ್ಯಕ್ತಪಡಿಸುವುದು ಮನಸ್ಸಿನ
ಆಲೋಚನೆಯನ್ನು.
7 ಒಬ್ಬನನ್ನು ಹೊಗಳಬೇಡ ಅವನ ಸಂಭಾಷಣೆ
ಯನ್ನು ಅಳೆಯುವ ಮೊದಲೇ
ಏಕೆಂದರೆ ಅವನ ಸತ್ವಪರೀಕ್ಷೆ ಅಡಗಿರುವುದು
ಅದರಲ್ಲೇ.

### ಪ್ರಾಮಾಣಿಕತೆ

8 ನ್ಯಾಯನೀತಿಯನ್ನು ಅನುಸರಿಸಿದರೆ ನೀನು
ಅದನ್ನು ಹೊಂದಿಕೊಳ್ಳುವೆ
ಚಂದವಾದ ನಿಲುವಂಗಿಯಂತೆ ಅದನ್ನು
ಧರಿಸಿಕೊಳ್ಳುವೆ.
9 ಪಕ್ಷಿಗಳು ತಂಗುವುವು ಸ್ವಜಾತಿಯ ಜೊತೆಗೆ
ಅದರಂತೆ ಸತ್ಯವು ಸೇರುವುದು ಸತ್ಯಶೀಲರ
ಬಳಿಗೆ.
10 ಸಿಂಹವು ಕಾದುಕೊಂಡಿರುವುದು ಬೇಟೆಗಾಗಿ
ಪಾಪವು ಕಾದುಕೊಂಡಿರುವುದು
ಅಧರ್ಮಿಗಳಿಗಾಗಿ.

### ಮೂರ್ಖನ ಮಾತುಕತೆ

11 ಸದಾ ಜ್ಞಾನದಿಂದ ತುಂಬಿದೆ ನೀತಿವಂತರ
ಸಂಭಾಷಣೆ
ಆದರೆ ಮೂರ್ಖನು ಬದಲಾಗುವನು
ಚಂದ್ರನಂತೆ.
12 ತಿಳಿಗೇಡಿಗಳ ಮಧ್ಯೆ ಇರುವಾಗ ಸಮಯ
ನೋಡಿಕೊಂಡು ತಪ್ಪಿಸಿಕೊ
ವಿಚಾರವಂತರ ಸಹವಾಸ ನಿರಂತರವಾಗಿ
ಮಾಡಿಕೊ.
13 ಮೂರ್ಖರ ಸಂಭಾಷಣೆ ಅಸಹನೀಯ
ಅವರ ಕುಚೋದ್ಯ ಪಾಪವಿಲಾಸ.
14 ಸದಾ ಪ್ರಮಾಣಮಾಡುವವರ ಮಾತು
ಮೈನವಿರೇಳಿಸುತ್ತದೆ
ಅವರ ಕಚ್ಚಾಟ ಕಿವಿಯನ್ನು ಮುಚ್ಚಿಕೊಳ್ಳುವಂತೆ
ಮಾಡುತ್ತದೆ.
15 ಸೊಕ್ಕಿನವರ ಕಚ್ಚಾಟ ರಕ್ತಪಾತಕ್ಕೆ
ಇಳಿಸುತ್ತದೆ
ಅವರ ಬೈದಾಟ ಕೇಳಲೂ

ಸಲ್ಲದಾಗಿ ಇರುತ್ತದೆ.

### ಗುಟ್ಟನ್ನು ರಟ್ಟಾಗಿಸುವುದು

16 ಗುಟ್ಟನು ರಟ್ಟುಮಾಡುವವನು ನಂಬಿಕೆಯನ್ನು
ಕಳೆದುಕೊಳ್ಳುವನು
ಇಂಥವನು ತನ್ನ ಮನಸ್ಸಿಗೆ ಹಿಡಿಸುವಂಥ
ಸ್ನೇಹಿತನನ್ನು ಕಂಡುಕೊಳ್ಳಲಾರನು.
17 ನಿನ್ನ ಸ್ನೇಹಿತನನ್ನು ಪ್ರೀತಿಸು; ಅವನೊಂದಿಗೆ
ನಂಬಿಕೆಯಿಂದ ನಡೆ
ಅವನ ಗುಟ್ಟನ್ನು ಮಾತ್ರ ರಟ್ಟು ಮಾಡಿದರೆ,
ನೀ ಹೋಗಲಾರೆ ಅವನ ಹಿಂದೆ;
18 ಏಕೆಂದರೆ ಒಬ್ಬನು ತನ್ನ ವೈರಿಯನ್ನು
ನಾಶಗೊಳಿಸುವಂತೆ
ನೀನು ನಾಶಗೊಳಿಸಿರುವೆ ನಿನ್ನ ನೆರೆಯವನ
ಗೆಳೆತನವನ್ನೇ.
19 ಒಬ್ಬನು ತನ್ನ ಕೈಯಲ್ಲಿರುವ ಹಕ್ಕಿಯನ್ನು
ಹೋಗಬಿಟ್ಟಂತೆ
ನೀನು ನಿನ್ನ ಹತ್ತಿರದ ಗೆಳೆಯನನ್ನು
ಹೋಗಬಿಟ್ಟಿರುವೆ;
ಪುನಃ ನೀನು ಅವನನ್ನು ಸಂಪಾದಿಸಿಕೊಳ್ಳಲಾರೆ.
20 ಇನ್ನು ನೀನವನನ್ನು ಹಿಂಬಾಲಿಸದಿರು;
ನಿನ್ನಿಂದ ಬಹುದೂರ ಹೋಗಿರುವನು
ಬಲೆಯಿಂದ ತಪ್ಪಿಸಿಕೊಂಡ
ಜಿಂಕೆಯಂತಿರುವನು.
21 ಗಾಯವಾಗಿದ್ದರೆ ಕಟ್ಟಬಹುದು;
ಜಗಳವಾಗಿದ್ದರೆ ಒಂದಾಗಬಹುದು.
ಆದರೆ ಗುಟ್ಟು ರಟ್ಟು ಮಾಡುವವನಿಗೆ
ಸರಿಪಡಿಸುವ ನಿರೀಕ್ಷೆಯೇ ಇಲ್ಲದಿರಬಹುದು.

### ಕಪಟತನ

22 ಕಣ್ಣು ಮಿಟುಕಿಸುವವನು ಕೆಟ್ಟದ್ದನ್ನು
ಹವಣಿಸುವನು
ಅವನನ್ನು ಅದರಿಂದ ದೂರಮಾಡಲಾರನು
ಯಾವನು.
23 ನಿನ್ನ ಎದುರಿನಲ್ಲಿ ಸವಿಮಾತಾಡುವನು;
ನಿನ್ನ ಮಾತನು ಹೊಗಳುವನು
ತರುವಾಯ ಬಾಯಿ ಬಡಿದು ನಿನ್ನ ಮಾತಲ್ಲೇ
ನಿನಗೆ ಬೋನು ಒಡ್ಡುವನು.
24 ನಾನು ಇಂಥ ಕಪಟಿಯನ್ನು ಹಗೆಮಾಡಿದಷ್ಟು
ಬೇರೆ ಯಾವುದನ್ನೂ ಹಗೆಮಾಡಿಲ್ಲ

ಇಂಥವನನ್ನು ದೇವರೂ ಹಗೆಮಾಡುವುದರಲ್ಲಿ
ಸಂದೇಹವಿಲ್ಲ.
25 ಮೇಲಕ್ಕೆ ಕಲ್ಲೆಸೆಯುವವನು ತಲೆಯ
ಮೇಲೆಯೇ ಎಸೆದುಕೊಳ್ಳುತ್ತಾನೆ
ಮೋಸದ ಹೊಡೆತ ಗಾಯಗಳನ್ನು
ಉಲ್ಬಣಗೊಳಿಸಿದಂತೆ.
26 ಗುಂಡಿಯನ್ನು ತೋಡುವವನು
ತಾನೇ ಅದರಲ್ಲಿ ಬೀಳುವನು
ಬಲೆಯನ್ನು ಒಡ್ಡುವವನು
ತಾನೇ ಅದರಲ್ಲಿ ಸಿಕ್ಕಿಬೀಳುವನು.
27 ಕೆಡಕು ಮಾಡುವವನ ಮೇಲೆ ಹೊರಳುವುದು
ಅವನ ಕೆಡಕೆ
ಅದು ತನ್ನ ಮೇಲೆ ಎಲ್ಲಿಂದ ಬಂತೆಂಬುದು
ತಿಳಿಯದು ಅವನಿಗೆ.
28 ನಿಂದೆ ಅಪಹಾಸ್ಯಗಳು ಬರುವುವು
ಸೊಕ್ಕಿನವರಿಂದಲೇ ಇಂಥವರಿಗೆ ಪ್ರತೀಕಾರ
ಹೊಂಚಿಕೊಂಡಿರುವುದು ಸಿಂಹದಂತೆ.
29 ಶಿಷ್ಟನ ಪತನವನ್ನು ಕಂಡು ನಗುವವರು
ತಾವೇ ಬಲೆಯಲ್ಲಿ ಸಿಕ್ಕಿಬೀಳುವರು
ಇವರು ಸಾಯುವ ಮೊದಲೆ ಇವರನ್ನು
ವ್ಯಥೆ ಸುಟ್ಟುಸೂರೆಗೊಳ್ಳುವುದು.

### ಸಿಟ್ಟು ಸಿಡುಕು

30 ಸಿಟ್ಟುಸಿಡುಕುಗಳು ಹೇಯವಾದವುಗಳು
ಅವೆರಡೂ ಇರುವುವು ಪಾಪಾತ್ಮನೊಳು.

## 28

ಪ್ರತೀಕಾರ ಮಾಡುವವನು
ಸರ್ವೇಶ್ವರನಿಂದ ಪ್ರತೀಕಾರ
ಹೊಂದುವನು
ಅವನ ಪಾಪಗಳನ್ನು ಸರ್ವೇಶ್ವರ
ಸದಾ ಮನಸ್ಸಿನಲ್ಲಿ ಇಟ್ಟುಕೊಳ್ಳುವರು.
2 ಕ್ಷಮೆನೀಡು ನಿನ್ನ ನೆರೆಯವನು ಮಾಡಿದ
ತಪ್ಪಿಗೆ
ನೀನು ಪ್ರಾರ್ಥಿಸುವಾಗ ಕ್ಷಮೆ ದೊರಕುವುದು
ನಿನ್ನ ಪಾಪಗಳಿಗೆ.
3 ನೆರೆಯವನ ಮೇಲೆ ಮುನಿಸಿಟ್ಟುಕೊಂಡರೆ
ದೇವರಿಂದ ಕ್ಷಮೆಹೊಂದಲು ಆದೀತೆ?
4 ತನ್ನಂಥ ಮನುಷ್ಯನ ಮೇಲೆ ಅವನಿಗೆ
ಕರುಣೆಯಿಲ್ಲದಿರೆ

ಬೇಡಿಕೊಂಡರೆ ಪಾಪಮನ್ನಣೆ ಪಡೆಯುವನೆ?
5 ಕೇವಲ ನರಮಾನವನಾದವನು ಇಂಥ
ಸಿಡುಕಿಟ್ಟುಕೊಂಡರೆ
ಇವನ ಪಾಪಗಳಿಗೆ ದೋಷಪರಿಹಾರ
ಮಾಡುವವರು ಯಾರಿದ್ದಾರೆ?
6 ನಿನ್ನ ಅಂತ್ಯಕಾಲವನ್ನು ಸ್ಮರಿಸಿಕೊಂಡು
ಹಗೆತನವನು ತೊರೆದುಬಿಡು
ಸಾವು ಮರಣಗಳನ್ನು ನೆನೆದು
ದೇವರ ಆಜ್ಞೆಗಳನ್ನು ಪಾಲನೆಮಾಡು.
7 ದೇವರ ಆಜ್ಞೆಗಳನ್ನು ಸ್ಮರಿಸಿಕೊಂಡು
ನೆರೆಯವನ ಮೇಲೆ ಮುನಿಸಬೇಡ
ಮಹೋನ್ನತನ ಒಡಂಬಡಿಕೆಯನ್ನು ನೆನಸಿ
ಕೊಂಡು ತಪ್ಪು ನೆಪ್ಪುಗಳನ್ನು ವೀಕ್ಷಿಸಬೇಡ.

## ಕಲಹ

9 ಕಲಹದಿಂದ ದೂರ ಇರು; ಆಗ ಪಾಪಗಳನ್ನು
ಕಡಿಮೆಮಾಡಿಕೊಳ್ಳುವೆ
ಕೋಪಿಷ್ಠನು ಕಲಹವೆಂಬ ಬೆಂಕಿಗೆ ಎಣ್ಣೆ
ಹೊಯ್ಯುತ್ತಾನೆ.
9 ಪಾಪಾತ್ಮನು ಕಿಡಿಹಾಕುತ್ತಾನೆ ಸ್ನೇಹವಿದ್ದಲ್ಲಿ
ಕಲಹ ಹುಟ್ಟಿಸುತ್ತಾನೆ ಸಮಾಧಾನವಿದ್ದಲ್ಲಿ.
10 ಸೌದೆಯು ಎಷ್ಟೋ ಅಷ್ಟೇ ಬೆಂಕಿ;
ಕಲಹ ಎಂಥದೋ ಅಂಥದೇ ಕ್ರೋಧ,
ಮನುಷ್ಯನ ಬಲವೆಷ್ಟೋ ಅಷ್ಟೇ ರೌದ್ರ;
ಐಶ್ವರ್ಯ ಹೆಚ್ಚಿದಂತೆ ಹೆಚ್ಚುತ್ತದೆ
ಕೋಪ.
11 ಫಕ್ಕನೆ ಆರಂಭವಾದ ಕಚ್ಚಾಟ
ಕಿಚ್ಚನು ಹೊತ್ತಿಸುತ್ತದೆ
ತಟ್ಟನೆ ಹುಟ್ಟಿದ ಬಡಿದಾಟ
ರಕ್ತಪಾತಕ್ಕೆ ಒಯ್ಯುತ್ತದೆ.
12 ಕಿಡಿ ಉರಿಯುವುದು ಊದಿದರೆ
ಅದು ಆರುವುದು ಉಗುಳಿದರೆ
ಇವೆರಡೂ ಬರುವುದು ಬಾಯಿಂದಲೇ.

## ಸುಳ್ಳು ಅಪವಾದ

13 ಶಾಪಹಾಕು ಕಿವಿಯೂದುವವರಿಗೆ;
ಎರಡು ನಾಲಗೆಯುಳ್ಳವರಿಗೆ
ಕಾರಣ, ಇಂಥವರು ಕೆಡಕುಮಾಡಿರುವರು
ಅನೇಕ ಶಾಂತಿಪುರುಷರಿಗೆ.
14 ಮೂರನೆಯವನ ನಾಲಗೆ ಅನೇಕರನ್ನು

ಕದಲಿಸಿಬಿಟ್ಟಿದೆ
ಅವರನ್ನು ಜನಾಂಗದಿಂದ ಜನಾಂಗಕೆ
ಚದರಿಸಿಬಿಟ್ಟಿದೆ.
ಬಲವುಳ್ಳ ಪಟ್ಟಣಗಳನ್ನು ಕೆಡವಿಬಿಟ್ಟಿದೆ
ಮಹಾತ್ಮರ ಮನೆಗಳನ್ನು ಮಣ್ಣುಪಾಲಾಗಿಸಿದೆ.
15 ಮೂರನೆಯವನ ನಾಲಗೆ ಶೂರಸ್ತ್ರೀಯರನ್ನು
ಹೊರಕ್ಕಟ್ಟಿದೆ
ಅವನ ದುಡಿಮೆಯ ಫಲವೇ ಅವನಿಗೆ
ದೊರಕದಂತಾಗಿ ಮಾಡಿದೆ.
16 ಅದಕ್ಕೆ ಲಕ್ಷ್ಯಕೊಡುವವನು ಸಮಾಧಾನ
ಹೊಂದುವುದಿಲ್ಲ
ಶಾಂತಿಯಿಂದ ಜೀವಿಸುವುದಿಲ್ಲ.
17 ಚಾಟಿಯ ಹೊಡೆತ ಮೈಮೇಲೆ
ಬರೆ ಎಬ್ಬಿಸುತ್ತದೆ
ನಾಲಗೆಯ ಹೊಡೆತ ಎಲುಬುಗಳನ್ನು
ಮುರಿಯುತ್ತದೆ.
18 ಕತ್ತಿಯಿಂದ ಅನೇಕರು ಬಿದ್ದಿದ್ದಾರೆ
ನಾಲಗೆಯಿಂದ ಇನ್ನೂ ಅನೇಕರು ಸತ್ತಿದ್ದಾರೆ.
19 ಮೂರನೆಯವನ ನಾಲಗೆಯಿಂದ
ರಕ್ಷಿಸಲ್ಪಟ್ಟವನು
ಅದರ ಕೋಪಕ್ಕೆ ಆಹುತಿಯಾಗದವನು
ಅದರ ನೊಗಕ್ಕೆ ಬಿಗಿಯಲ್ಪಡದವನು
ಅದರ ಕಟ್ಟುಗಳಿಂದ ಕಟ್ಟಲ್ಪಡದವನು
ಧನ್ಯನು !
20 ಏಕೆಂದರೆ ಅದರ ನೊಗ ಕಬ್ಬಿಣದ ನೊಗವು
ಅದರ ಕಟ್ಟು ಕಂಚಿನ ಕಟ್ಟು.
21 ಅದರಿಂದಾಗುವ ಮರಣ ದುರ್ಮರಣ
ಅದಕ್ಕಿಂತ ಪಾತಾಳವೇ ಶ್ರೇಷ್ಟ.
22 ಸಜ್ಜನರ ಮೇಲೆ ಅದು ತನ್ನ ಆಳ್ವಿಕೆ ನಡೆಸಲು
ಸಾಧ್ಯವಿಲ್ಲ
ಅದರ ಉರಿಯಲ್ಲಿ ಅವರು ಸುಟ್ಟು
ಹೋಗುವುದಿಲ್ಲ.
23 ಸರ್ವೇಶ್ವರನನ್ನು ಬಿಟ್ಟವರು ಬೀಳುವರು
ಅದರಲ್ಲಿ
ಅದು ಆರದೆ ಉರಿಯುತ್ತಿರುತ್ತದೆ ಅವರಲ್ಲಿ
ಅವರ ಮೇಲೆ ಎರಗುವುದು ಸಿಂಹದಂತೆ
ಅವರನ್ನದು ಬಗಿದುಹಾಕುವುದು ಚಿರತೆಯಂತೆ.
24 ನಿನ್ನ ಸೊತ್ತಿನ ಸುತ್ತಲೂ ಮುಳ್ಳುಬೇಲಿ
ಹಾಕಿಕೊ
ನಿನ್ನ ಬೆಳ್ಳಿಬಂಗಾರವನ್ನು ಬೀಗಹಾಕಿ

ಭದ್ರಪಡಿಸಿಕೊ.
25 ಅಂತೆಯೆ ನಿನ್ನ ಮಾತುಗಳಿಗೆ ತಕ್ಕಡಿ
ಕಲ್ಲುಗಳನು ಇಟ್ಟುಕೊ
ನಿನ್ನ ಬಾಯಿಗೆ ಅಗುಳಿಯನ್ನು ಮಾಡಿಕೊ.
26 ಜಾಗ್ರತೆಯಿಂದಿರು ಅದರಲಿ ಜಾರಿಬೀಳದಂತೆ
ಬಿದ್ದುಬಿಟ್ಟೀಯೆ ನಿನಗಾಗಿ
ಹೊಂಚಿಕೊಂಡಿರುವವನ ಮುಂದೆ !

**ಸಾಲ**

**29** ನೆರೆಯವನಿಗೆ ಸಾಲಕೊಡುವವನು
ಕರುಣಾಳು
ಅವರಿಗೆ ಕೈಯಲ್ಲಾದ ನೆರವೀಯುವವನು
ದೈವಾಜ್ಞೆಯ ಪರಿಪಾಲಕನು.
2 ನೆರೆಯವನಿಗೆ ಕೊರತೆ ಬಂದಾಗ ಸಾಲ ಕೊಡು
ಎರವು ತಂದುದನ್ನು ಅವನಿಗೆ ಸಕಾಲದಲಿ
ತೀರಿಸಿಬಿಡು.
3 ಕೊಟ್ಟ ವಚನ ಪಾಲಿಸು; ಅವನೊಂದಿಗೆ
ನಂಬಿಕಸ್ಥನಾಗಿರು
ಹಾಗೆ ನಿನಗೆ ಬೇಕಾದುದೆಲ್ಲವು ಅಗತ್ಯವಿದ್ದಾಗ
ಸಿಗುವುದು.
4 ಅನೇಕರು ಸಾಲವನ್ನು ದೊರೆತ
ಲಾಭವೆಂದೆಣಿಸಿದ್ದಾರೆ
ತಮಗೆ ಸಹಾಯ ಮಾಡಿದವರಿಗೆ
ತೊಂದರೆ ಕೊಟ್ಟಿದ್ದಾರೆ.
5 ಸಾಲಸಿಕ್ಕುವತನಕ ಕೊಡುವವನ ಕೈಗೆ
ಮುತ್ತಿಡುವನು
ನೆರೆಯವನ ಹಣಕ್ಕಾಗಿ ಸವಿಮಾತು
ಆಡುವನು.
ಸಾಲತೀರಿಸುವ ಸಮಯ ಬಂದಾಗ
ಕಳೆಯುವನು ಹೊತ್ತು
ಕಾಲಕೆಟ್ಟದ್ದೆಂದು ಆಡುವನು ಇಲ್ಲಸಲ್ಲದ
ನೆಪಮಾತು.
6 ಸಾಲಕೊಟ್ಟದ್ದರಲ್ಲಿ ಅರ್ಧ ಹಿಂದಕ್ಕೆ ಬಂದರೆ
ಬಂದದ್ದೇ ಲಾಭ ಎನ್ನಬೇಕಾಗುತ್ತದೆ
ಅದೂ ಬಾರದಿದ್ದರೆ ಕೊಟ್ಟವನ ಕೈಯಿಂದ
ಅದು ಅಪಹರಿಸಿದಂತೆಯೆ.
ಕಾರಣವಿಲ್ಲದೆ ಅವನೊಡನೆ ಹಗೆತನ
ಬೆಳೆಸಿದಂತಾಗುತ್ತದೆ
ತಿರುಗಿಕೊಟ್ಟರೂ, ಕೊಡುವನವನು

ಬೈಗುಳ ಶಾಪಗಳೊಡನೆ
ವಂದನೆಗೆ ಬದಲು ನಿಂದನೆಯೊಡನೆ.
7 ಆದಕಾರಣ ಅನೇಕರು ಸಾಲಕೊಡಲು
ನಿರಾಕರಿಸಿಹರು
ಇನ್ನೊಬ್ಬನ ಕೆಟ್ಟ ವ್ಯವಹಾರವನ್ನು ಕಂಡಿಹರು
ವ್ಯರ್ಥವಂಚನೆಗೆ ಗುರಿಯಾದೇವು
ಎಂದು ಅಂಜಿಹರು.

## ದಾನಧರ್ಮ

8 ಆದರೂ ಬಡವನ ವಿಷಯದಲಿ
ಸೈರಣೆಯುಳ್ಳವನಾಗಿರು
ನಿನ್ನ ದಾನಕ್ಕಾಗಿ ಅವನು ಕಾದುಕೊಂಡಿರುವಂತೆ
ಮಾಡದಿರು.
9 ದೈವಾಜ್ಞೆಯ ಅನುಸಾರ ಬಡವನಿಗೆ ಸಹಾಯ
ನಿರಾಕರಿಸಬೇಡ
ಅವನ ಅವಶ್ಯಕತೆಯನ್ನು ಕಂಡೂ
ಅವನನ್ನು ಬರಿಗೈಯಲಿ ಕಳುಹಿಸಬೇಡ.
10 ಹಣವನ್ನು ನಿನ್ನ ಸಹೋದರನಿಗಾಗಿ,
ಸ್ನೇಹಿತನಿಗಾಗಿ ಖರ್ಚುಮಾಡು
ಅದು ಕಲ್ಲು ಮುಚ್ಚಿದ ಗುಳಿಯಲ್ಲೇ
ಕಿಲುಬು ಹತ್ತಿ ನಾಶವಾಗದಿರಲಿ.
11 ನಿನ್ನ ಐಶ್ವರ್ಯವನ್ನು ಉಪಯೋಗಿಸು,
ಮಹೋನ್ನತನ ಆಜ್ಞಾನುಸಾರ
ಆಗ ಅದು ನಿನಗೆ ಚಿನ್ನಕಿಂತಲೂ ಹೆಚ್ಚು
ಲಾಭಕರ.
12 ದಾನಧರ್ಮವನ್ನು ನಿನ್ನ ಉಗ್ರಾಣದಲ್ಲಿ
ಶೇಖರಿಸಿಡು
ಅದು ಎಲ್ಲ ತೊಂದರೆ ತಾಪತ್ರಯಗಳಿಂದ
ನಿನ್ನನು ಪಾರುಮಾಡುವುದು.
13 ಅದು ಕಾದಾಡುವುದು ವೈರಿಗಳ ವಿರುದ್ಧ
ನಿನ್ನ ಪರವಾಗಿ
ಬಿಲ್ಲುಗುರಾಣಿಗಳಿಗಿಂತ ಹೆಚ್ಚು
ಸಮರ್ಪಕವಾಗಿ.

## ಹೊಣೆಗಾರಿಕೆ

14 ಸತ್ಪುರುಷನು ತನ್ನ ನೆರೆಯವನಿಗಾಗಿ ಹೊಣೆ
ನಿಲ್ಲುವನು
ಮಾನಗೇಡಿಯು ಅವನನ್ನು ಕೈಬಿಡುವನು.
15 ಮರೆಯದಿರು ನಿನ್ನ ಹೊಣೆಗಾರನ
ಉಪಕಾರವನ್ನು

ನಿನಗಾಗಿ ಕೊಟ್ಟಿರುವನು ತನ್ನ ಪ್ರಾಣವನ್ನು.
16 ದುಷ್ಟನು ಹಾಳುಮಾಡುವನು
ತನ್ನ ಹೊಣೆಗಾರನ ಆಸ್ತಿಯನ್ನು.
17 ಕೃತಘ್ನನು ಕಷ್ಟದಲ್ಲಿ ಕೈಬಿಡುವನು
ತನ್ನನು ಬಿಡುಗಡೆ ಮಾಡಿದವನನ್ನು.
18 ಹೊಣೆಗಾರಿಕೆ ಧನಾಢ್ಯರನೇಕರನ್ನು ಬರಿದು
ಮಾಡಿಬಿಟ್ಟಿದೆ
ಸಮುದ್ರದ ತೆರೆಯಂತೆ ಅವರನ ಅಲ್ಲಾಡಿಸಿ
ಬಿಟ್ಟಿದೆ
ಬಲ್ಲಿದರೆಂಬುವರನ್ನು ಮನೆಬಿಡಿಸಿದೆ
ಪರರ ಮಧ್ಯದಲ್ಲಿ ಅವರನು ಅಲೆದಾಡಿಸಿದೆ.
19 ಲಾಭಕ್ಕಾಗಿ ಹೊಣೆಗಾರಿಕೆ ಹೊತ್ತು ನಿಲ್ಲಲು
ಆತುರಪಡುವವನು
ವ್ಯಾಜ್ಯಗಳಲ್ಲಿ ಸಿಕ್ಕಿಬೀಳುವನು ಆ ಪಾಪಿಷ್ಠನು.
20 ನಿನ್ನ ಶಕ್ತಿಗನುಸಾರ ನೆರವಾಗು
ನಿನ್ನ ನೆರೆಯವನಿಗೆ
ಆದರೆ ಎಚ್ಚರದಿಂದಿರು ಅವನ ಗತಿಗೆ
ನೀನೂ ಇಳಿಯದಂತೆ.

### ಅತಿಥಿ ಸತ್ಕಾರ

21 ಜೀವನಕ್ಕೆ ಅಗತ್ಯವಾದವು ಅನ್ನ, ನೀರು, ಬಟ್ಟೆ,
ಮೇಲಾಗಿ ಮಾನ ಕಾಪಾಡುವುದಕ್ಕೆ ಮನೆ.
22 ಪರರ ಮನೆಯಲಿ ಮೃಷ್ಟಾನ್ನ
ಉಣ್ಣುವುದಕ್ಕಿಂತಲೂ
ಹುಲ್ಲಿನ ಗುಡಿಸಲಿನಲ್ಲಿ ಬಡವನಾಗಿ
ಜೀವಿಸುವುದು ಮೇಲು
23 ಹೆಚ್ಚಿರಲಿ, ಕಡಿಮೆಯಿರಲಿ
ಇದ್ದುದರಲ್ಲೇ ಸಂತುಷ್ಟಿಯಿರಲಿ.
24 ಏತಕ್ಕೂ ಬೇಡ ಮನೆಯಿಂದ ಮನೆಗೆ
ಅಲೆಯುವ ಜೀವನ
ಯಾವುದಕ್ಕೂ ನೀ ಬಾಯ್ದೆರೆಯಲಾರೆ
ಪರರ ಮನೆಯಲ್ಲಿ ಇರುವಾಗ.
25 ನೀನು ಅಲ್ಲಿ ಉಣ್ಣಬಹುದು, ಕುಡಿಯ
ಬಹುದು, ಆದರೆ ಮರ್ಯಾದೆ ಇರದು
ಅಷ್ಟೇ ಅಲ್ಲದೆ, ನಿನ್ನ ಕಿವಿಗೆ ಬೀಳುವುವು
ಇಂಥ ಕಠಿಣವಾದ ಮಾತುಗಳು:
26 "ಪರಕೀಯನೇ, ಇತ್ತ ಬಾ, ಮಣೆ ಹಾಕು
ನಿನ್ನಲ್ಲಿರುವುದನ್ನು ನನಗೆ ಬಡಿಸು.
27 "ಪರಕೀಯನೇ, ಜಾಗಬಿಡು ನಿನಗಿಂತಲೂ
ಉತ್ತಮ ವ್ಯಕ್ತಿಗಾಗಿ

"ಬಂದಿರುವನು ನನ್ನ ಸೋದರ
ಇಲ್ಲಿರುವುದಕ್ಕಾಗಿ,
ಮನೆ ಬೇಕಾಗಿದೆ ಅವನಿಗಾಗಿ."
28 ಹೀಗೆ ಬೇಸರವಾಗುವುದು ತಿಳುವಳಿಕೆಯುಳ್ಳ
ವ್ಯಕ್ತಿಗೆ
ಅಣಕಿಸುವ ಮನೆಯಲ್ಲಿರುವುದಕ್ಕೆ
ಸಾಲ ಕೊಟ್ಟವನ ಕೀಳುನುಡಿ
ಕೇಳುವುದಕ್ಕೆ.

### ಮಕ್ಕಳ ಪಾಲನೆ

**30** ಮಗನನ್ನು ಪ್ರೀತಿಸುವ ತಂದೆ ಅವನಿಗೆ
ಪೆಟ್ಟು ಕೊಡುತ್ತಿರುತ್ತಾನೆ ಆಗಾಗ್ಗೆ.
ಕೊನೆಗೆ ಆ ಮಗನಿಂದಲೇ ಉಪಶಮನ
ಪಡೆಯುತ್ತಾನೆ.
2 ತನ್ನ ಮಗನನ್ನು ಶಿಕ್ಷಿಸುವವನು ಅವನಿಂದ
ಸುಖ ಪಡೆಯುವನು
ತನ್ನ ಪರಿಚಿತರಲ್ಲಿ ಅವನನ್ನು ಕುರಿತು
ಹೆಮ್ಮೆಪಡುವನು.
3 ಮಗನಿಗೆ ಬೋಧನೆ ನೀಡುವವನು
ಶತ್ರುವನ್ನು ಸಂಕಟಪಡಿಸುವನು
ಆದರೆ ಆ ಮಗನಿಗಾಗಿ ಸ್ನೇಹಿತರಲಿ
ಸಂತೋಷಪಡುವನು.
4 ತಂದೆ ತೀರಿಹೋದರೂ ತೀರದಂತಿದ್ದಾನೆ
ತನ್ನಂಥ ಮಗನನ್ನು ಬಿಟ್ಟುಹೋಗಿದ್ದಾನೆ.
5 ಮಗನನ್ನು ಕಂಡು ಸಂತೋಷಪಟ್ಟನು
ಜೀವಿಸುವಾಗ
ದುಃಖಿತನಾಗಿರಲಿಲ್ಲ ತಾನು ಸಾಯುವಾಗ.
6 ವೈರಿಗಳಿಗೆ ಪ್ರತೀಕಾರ ಮಾಡುವುದಕ್ಕೆ
ಸ್ನೇಹಿತರಿಗೆ ದಯೆತೋರಿಸುವುದಕ್ಕೆ
ಒಬ್ಬನನು ಬಿಟ್ಟುಹೋಗಿದ್ದಾನೆ.
7 ತನ್ನ ಮಗನನ್ನು ಮುದ್ದಿಸುವವನು
ಅವನ ಗಾಯಗಳನ್ನು ಕಟ್ಟುವನು
ಅವನು ಅಳುವಾಗಲೆಲ್ಲ ಮನಸ್ಸಿನಲ್ಲೇ
ಮರುಗುತ್ತಿರುವನು.
8 ಪಳಗಿಸದ ಕುದುರೆ ಚಂಡಿಯಾಗುವುದು
ಮನಬಂದಂತೆ ನಡೆಯಲು ಬಿಟ್ಟ ಮಗ
ಹಟಮಾರಿಯಾಗುವನು.
9 ಮುದ್ದಿಸಿ ಮಗನನ್ನು ಬೆಳೆಸಿದರೆ
ಅವನಿಂದ ನಿನಗೆ ಕಂಟಕವಾಗುವುದು

ಅವನೊಂದಿಗೆ ಸರಸವಾಡಿದರೆ
ಮುಂದೆ ನಿನಗೆ ಸಂಕಟವಾಗುವುದು.
10 ಅವನೊಂದಿಗೆ ನಗೆಯಬೇಡ;
ದುಃಖ ಪಡಬೇಕಾದೀತು
ಕೊನೆಯಲಿ ಹಲ್ಲು ಕಡಿಯಬೇಕಾದೀತು!
11 ಚಿಕ್ಕವನಾಗಿರುವಾಗ ಮಗನಿಗೆ ಸ್ವಾತಂತ್ರ್ಯ
ಕೊಡಬೇಡ
ಅವನ ಮೂರ್ಖತನವನ್ನು ನೋಡಿ
ಅಲಕ್ಷ್ಯ ಮಾಡಬೇಡ.
12 ಅಂಕೆಯಲ್ಲಿಡು ಮಗನನ್ನು
ಚಿಕ್ಕವನಾಗಿರುವಾಗಲೇ
ಅವನ ಬೆನ್ನಿಗೆ ಏಟುಕೊಡು
ಎಳೆಯವನಾಗಿರುವಾಗಲೇ.
ಇಲ್ಲವಾದರೆ, ಬೆಳೆಯುವನು
ಮದೋನ್ಮತ್ತನಾಗಿ, ಅವಿಧೇಯನಾಗಿ
ನಿನ್ನ ಮನಸ್ಸನ್ನು ನೋಯಿಸುವನು
ತೀಕ್ಷ್ಣವಾಗಿ.
13 ನಿನ್ನ ಮಗನನ್ನು ಶಿಕ್ಷಿಸು, ಕಟ್ಟುನಿಟ್ಟಾಗಿ ನಡೆಸು
ಆಗ ನಿನಗೆ ಶೋಕತರದು ಅವನ ಬಾಳು –
ಮಾನಗೆಟ್ಟು.

## ಆರೋಗ್ಯ

14 ರೋಗಪೀಡಿತನಾದ ಸಿರಿವಂತನಿಗಿಂತಲೂ
ಸ್ವಸ್ಥನೂ ದೃಢಕಾಯನೂ ಆದ ಬಡವನೇ
ಮೇಲು.
15 ಆರೋಗ್ಯವೂ ದೇಹಸ್ವಸ್ಥತೆಯೂ
ಚಿನ್ನಕ್ಕಿಂತಲೂ ಮೇಲು
ಗಟ್ಟಿಮುಟ್ಟಾದ ಕಾಯ ಅಪಾರ
ಧನಕ್ಕಿಂತಲೂ ಲೇಸು.
16 ದೃಢಕಾಯಕ್ಕಿಂತ ಮೇಲಾದ ಐಶ್ವರ್ಯವಿಲ್ಲ
ಹೃದಯಾನಂದಕ್ಕಿಂತ ಮಿಗಿಲಾದ
ಆನಂದವಿಲ್ಲ.
17 ಕಷ್ಟದಲಿ ಬಳಲುವುದಕ್ಕಿಂತ ಸಾವೇ ಲೇಸು
ಸದಾ ಬೇನೆಯಿಂದ ನರಳುವುದಕ್ಕಿಂತ ಶಾಶ್ವತ
ಶಾಂತಿ ಲೇಸು.
18 ಮುಚ್ಚಿದ ಬಾಯಿಯ ಮೇಲೆ ಮೃಷ್ಟಾನ್ನ
ಸಮಾಧಿಯ ಮೇಲೆ ರಾಶಿ ಅನ್ನ, ಏನು
ಲಾಭ?
19 ನೈವೇದ್ಯದಿಂದ ವಿಗ್ರಹಕ್ಕೆ ಲಾಭವಿದೆಯೆ?
ಅದಕ್ಕೆ ತಿನ್ನಲೂ ಮೂಸಲೂ ಸಾಧ್ಯವೆ?

ಸರ್ವೇಶ್ವರನಿಂದ ದಂಡನೆ ಪಡೆದವನೂ
ಅದರಂತೆಯೇ.
20 ಕನ್ನಿಕೆಯನ್ನಪ್ಪಿ ನಿಟ್ಟುಸಿರುಬಿಡುವ
ನಪುಂಸಕನಂತೆ
ಕಣ್ಣಿನಿಂದ ನೋಡಿ ಮೂಲುಗುತ್ತಾನಷ್ಟೆ.

### ಸಂತೋಷ

21 ಚಿಂತೆಗೊಳಗಾಗಬೇಡ
ನಿನ್ನ ಆಲೋಚನೆಯಲ್ಲೇ ಕುಗ್ಗಬೇಡ.
22 ಮನೋಲ್ಲಾಸವೇ ಮನುಷ್ಯನಿಗೆ ಜೀವ
ಸುಖಸಂತೋಷವೇ ದೀರ್ಘಾಯುಷ್ಯ.
23 ಸುಖವನ್ನು ಅನುಭವಿಸು,
ಮನಸ್ಸಿಗೆ ಸಮಾಧಾನ ಕೊಡು
ಚಿಂತೆಯನ್ನು ದೂರ ಮಾಡು;
ಅದು ನಾಶಗೊಳಿಸಿದೆ ಅನೇಕರನ್ನು
ಅದರಿಂದ ಪ್ರಯೋಜನ ಇರದು ಯಾರಿಗು.
24 ಸಿಟ್ಟೂ ಹೊಟ್ಟೇಕಿಚ್ಚೂ
ಆಯುಷ್ಯವನ್ನು ಕಡಿಮೆಮಾಡುತ್ತವೆ
ಚಿಂತೆಯು ಅಕಾಲದ ಮುಪ್ಪನ್ನು
ಬರಮಾಡುತ್ತದೆ.
25 ಸಂತೋಷದ ಮತ್ತು ಸರಳ ಹೃದಯದ ವ್ಯಕ್ತಿ
ಅನ್ನ ಆಹಾರಗಳಿಂದ ಪಡೆವನು ಸಂತೃಪ್ತಿ.

### ಐಶ್ವರ್ಯ

**31** ದೇಹವು ಕೊರಗುತ್ತದೆ ಹಣದ ನಿಮಿತ್ತ
ನಿದ್ರೆ ಹೋಗಿಬಿಡುತ್ತದೆ ಅದರ
ಚಿಂತೆಯಿಂದ
ಆ ದೇಹ ಕರಗುತ್ತದೆ ಹೀಗೆ
ನಿದ್ದೆಗೆಡುವುದರಿಂದ.
2 ಚಿಂತೆಯಿಂದ ನಿದ್ರೆಗೆಟ್ಟವನಿಗೆ ನಿದ್ರೆಯ
ಬಯಕೆಯಿದೆ
ಕಠಿಣವಾದ ಕಾಯಿಲೆಯಿಂದಲೂ
ನಿದ್ರೆ ಭಂಗವಾಗುತ್ತದೆ.
3 ಧನವಂತನು ಕಷ್ಟಪಡುವನು ಹಣಕೂಡಿಸಲಿಕ್ಕೆ
ಅದನ್ನು ಬಿಟ್ಟರೂ ಬೇಕಾದಷ್ಟು ಸುಖವಿದೆ
ಅವನಿಗೆ.
4 ಬಡವನು ಜೀವನಾಂಶಕ್ಕಾಗಿ ಕಷ್ಟಪಡಬೇಕು
ಅದನ್ನು ಬಿಟ್ಟರೆ ಮತ್ತಷ್ಟು ಕೊರತೆಯಿಂದ
ನರಳಬೇಕು.

5 ಬಂಗಾರವನ್ನು ಬಯಸುವವನನ್ನು
ನೀತಿವಂತನೆಂದು ಎಣಿಸಲಾಗದು
ಲಾಭದ ಗೀಳು ಇರುವವನು ಅದರಿಂದಲೇ
ಭ್ರಷ್ಟನಾಗುವನು.
6 ಹಣಗಳಿಕೆಗೆಂದು ಅನೇಕರು
ಹಾಳಾಗಿಹೋದರು
ಅವರ ಕಣ್ಣೆದುರಿಗೇ ಬಂದಿತು ಅವರ
ನಾಶನವು.
7 ಯಾವುದಕ್ಕೆ ಅರ್ಪಣೆ ಸಲ್ಲಿಸಿದರೋ
ಅದೇ ಪರಿಣಮಿಸಿತು ಅವರಿಗೆ ಎಡವುಗಲ್ಲಾಗಿ
ಅದರಿಂದ ಮೋಸಹೋದವರು ಮೂರ್ಖರೇ ಸರಿ.
8 ನಿರ್ದೋಷಿಯಾದ ಸಿರಿವಂತನೇ ಭಾಗ್ಯವಂತನು
ಹಣವನ್ನು ಬೆನ್ನುಹತ್ತಿ ಹೋಗಲಿಲ್ಲ ಆತನು.
9 ಅಂಥವನು ಯಾರು? ಅವನನ್ನು ಧನ್ಯನೆಂದೇ
ಹೊಗಳಬೇಕು
ಏಕೆಂದರೆ ಜನರಾರೂ ಮಾಡದ ಅದ್ಭುತ
ಕಾರ್ಯವನ್ನೇ ಅವನು ಮಾಡಿರುವನು.
10 ಐಶ್ವರ್ಯ ನಡೆಸಿದ ಪರೀಕ್ಷೆಯಲ್ಲಿ
ಉತ್ತೀರ್ಣನಾದವನು ಯಾರು?
ಅಂಥವನು ತನ್ನಲ್ಲೇ ಹೆಚ್ಚಳಪಡುವುದು
ನ್ಯಾಯವಾದುದು;
ಏಕೆಂದರೆ ತಪ್ಪುಮಾಡಲು ಶಕ್ತಿಯಿದ್ದರೂ,
ಅವನು ಅದನ್ನು ಮಾಡಲಿಲ್ಲ;
ಕೆಡುಕು ಮಾಡಲು ಬಲವಿದ್ದರೂ
ಅವನು ಅದನ್ನು ಗೈಯಲಿಲ್ಲ.
11 ಅಂಥವನಲ್ಲಿಯೇ ಸ್ಥಿರವಾಗಿರುವುದು
ಅವನ ಆಸ್ತಿ
ಅವನ ಔದಾರ್ಯದ ನಿಮಿತ್ತ
ಸಭಿಕರು ಮಾಡುವರು ಸ್ತುತಿ.

### ಭೋಜನಾಕೂಟಗಳು

12 ಯಥೇಚ್ಛ ಆಹಾರವಿರುವ ಔತಣಕ್ಕೆ ಕುಳಿತಾಗ
ಹೊಟ್ಟೆಬಾಕನಾಗಬೇಡ
'ಅಪ್ಪಾ! ಎಷ್ಟೊಂದು ತಿಂಡಿ-ತಿನಸಿದೆ' ಎಂದು
ಕೊಳ್ಳಬೇಡ.
13 ತಿಂಡಿಪೋತನ ಕಣ್ಣು ಕೆಡುಕೆಂಬುದನ್ನು
ನೆನಪಿನಲ್ಲಿಡು
ಎಲ್ಲಾ ಸೃಷ್ಟಿಗಳಲ್ಲಿ ಕಣ್ಣಿಗಿಂತ ಕೆಟ್ಟದು
ಯಾವುದು?
ಆದ್ದರಿಂದಲೇ ಪ್ರತಿಮುಖದಲ್ಲೂ ಕಣ್ಣೀರು

ಬರುವುದು.
14 ಕಂಡ ಕಂಡದ್ದಕ್ಕೆಲ್ಲಾ ಕೈಚಾಚಬೇಡ
ಬಡಿಸಿಕೊಳ್ಳುವಾಗ ಪಕ್ಕದವನ ಕೈಗೆ
ಅಡ್ಡಿಯಾಗಬೇಡ.
15 ನಿನಗಿರುವಂತೆಯೇ ಇತರ ಅತಿಥಿಗಳಿಗೂ
ಆಶೆಯಿದೆಯೆಂಬುದನು ಗಮನಿಸು
ಪ್ರತಿಯೊಂದರಲ್ಲೂ ಮರ್ಯಾದೆಯಿಂದ
ವರ್ತಿಸು.
16 ಬಡಿಸಿದುದನ್ನು ಭುಜಿಸು ಸಭ್ಯನಂತೆ
ಅಸಹ್ಯವಾಗಿ ನುಂಗದಿರು ಗಬಗಬನೆ.
17 ಊಟಮುಗಿಸುವುದರಲ್ಲಿ ಮೊದಲಿಗನಾಗಿರು
ವುದು ಸಭ್ಯ
ಪದೇ ಪದೇ ಬಡಿಸಿಕೊಳ್ಳುವುದು ಅಸಹ್ಯ.
18 ಬಹುಜನರ ಊಟದ ಪಂಕ್ತಿಯಲ್ಲಿ
ತಿನ್ನಲು ತೊಡಗಬೇಡ ಎಲ್ಲರಿಗು ಮುಂದಾಗಿ.
19 ಮರ್ಯಾದಸ್ಥನು ಸ್ವಲ್ಪದರಲ್ಲೇ ಪಡೆವನು
ಸಂತೃಪ್ತಿ
ಉಸಿರಾಡಲು ಅವನು ಕಷ್ಟಪಡನು
ಹಾಸಿಗೆಯಲ್ಲಿ.
20 ಮಿತವಾಗಿ ಉಣ್ಣುವುದರಿಂದ ಬರುವುದು
ಸುಖನಿದ್ರೆ
ಇಂಥವನು ಎದ್ದೇಳುತ್ತಾನೆ ನಸುಕಿನಲ್ಲೇ
ಬುದ್ಧಿ ಸ್ವಾಧೀನದಲ್ಲಿರುತ್ತದೆ ಅಂಥವನಿಗೆ.
ನಿದ್ದೆಗೇಡು, ಪಿತ್ತದೋಶ, ಹೊಟ್ಟೆಶೂಲೆ
ತಪ್ಪವು ಅತೃಪ್ತನಿಗೆ.
21 ಬಲವಂತದಿಂದ ತಿನ್ನಿಸಿದರೆ, ಎದ್ದೇಳುವುದೇ
ಉಚಿತ.
ಆಗ ನಿನಗೆ ದೊರಕುವುದು ಸುಕ್ಷೇಮ.
22 ಮಗನೇ, ನನ್ನ ಮಾತನ್ನು ಕೇಳು:
ನನ್ನನ್ನು ತಿರಸ್ಕರಿಸದಿರು
ಕೊನೆಗೆ ಅರಿತುಕೊಳ್ಳುವೆ ನಾನು ಹೇಳಿದ್ದು
ನಿಜವೆಂದು
ಕೆಲಸದಲ್ಲಿ ಚುರುಕಾಗಿರು; ನಿನಗೆ ಯಾವ
ರೋಗವು ಬಾರದು.
23 ಧಾರಾಳವಾಗಿ ಊಟ ಬಡಿಸುವವನನ್ನು
ಜನರು ಹೊಗಳುವರು
ಅವನನ್ನು ಕುರಿತ ಜನಾಭಿಪ್ರಾಯ
ನಂಬಲರ್ಹವಾಗುವುದು.
24 ಔತಣದ ವಿಷಯದಲ್ಲಿ ಜಿಪುಣವಾದವನನ್ನು
ಊರೇ ತೆಗಳುವುದು

ಅವನ ಜಿಪುಣತನದ ಸುದ್ದಿ ವೇಗವಾಗಿ
ಹರಡುವುದು.

### ಮದ್ಯಪಾನ

25 ಸುರಪಾನದಲ್ಲಿ ಶೂರತನವನ್ನು ತೋರಿಸದಿರು
ಸುರೆಯು ಅನೇಕರನ್ನು ಸೂರೆಗೊಂಡು
ಇರುವುದು.
26 ಬೆಂಕಿಯ ಹದ ತಿಳಿಯುತ್ತದೆ
ಉಕ್ಕಿಗೆ ನೀರು ಕುಡಿಸಿದಾಗ
ಸೊಕ್ಕಿನ ಕುಡುಕರ ಪರೀಕ್ಷೆಯಾಗುವುದು
ಅವರು ಕುಡಿದು ಕಡಿದಾಡುವಾಗ.
27 ಮಿತವಾಗಿ ತೆಗೆದುಕೊಂಡರೆ,
ದ್ರಾಕ್ಷಾರಸದಲ್ಲಿದೆ ಚೈತನ್ಯ
ದ್ರಾಕ್ಷಾರಸವಿಲ್ಲದವರ ಜೀವನದಲ್ಲೇನಿದೆ
ಸ್ವಾರಸ್ಯ?
ಮನುಷ್ಯನ ಸಂತೋಷವೇ
ಅದರ ನಿರ್ಮಾಣದ ಉದ್ದಿಶ್ಯ.
28 ತಕ್ಕ ಸಮಯದಲ್ಲಿ, ಮಿತವಾದ ಅಳತೆಯಲ್ಲಿ
ಸೇವಿಸುವುದರಿಂದ
ಮದ್ಯಪಾನ ತರುತ್ತದೆ ಮನಸ್ಸಿಗೆ ಉಲ್ಲಾಸ,
ಹೃದಯಕ್ಕೆ ಆನಂದ.
29 ಮಿತಿಮೀರಿ ಕುಡಿಯುವುದರ ಪರಿಣಾಮ
ಕಡಿದಾಟ, ಬಡಿದಾಟ, ಮನಸ್ಸಿಗೆ
ಉಪಟಳ.
30 ಕುಡುಕತನ ಮೂರ್ಖನನು ಕೇಡಿನ ತನಕ
ಸಿಟ್ಟಿಗೆಬ್ಬಿಸುತ್ತದೆ
ಬಲವನು ಕುಂದಿಸುತ್ತದೆ, ಹೊಡೆದಾಟ
ಹೆಚ್ಚಿಸುತ್ತದೆ.
31 ನಿನ್ನೊಂದಿಗೆ ಕುಡಿಯುತ್ತಿರುವ ನೆರೆಯವನನು
ಗದರಿಸಬೇಡ
ಅವನು ಸಂತೋಷದಿಂದಿರುವಾಗ
ಹೀಯಾಳಿಸಬೇಡ
ಕೆಟ್ಟ ಮಾತನು ಆಡಬೇಡ;
ಸಾಲ ತೀರಿಸೆಂದು ಪೀಡಿಸಬೇಡ.

### ಔತಣ

**32** ಔತಣಕ್ಕೆ ಪಾರುಪತ್ಯನಾಗಿರ
ಬೇಕಾದಾಗ ಉಬ್ಬಿಕೊಳ್ಳಬೇಡ
ಆಮಂತ್ರಿತರಲಿ ನೀನೂ ಒಬ್ಬನೆಂದು ತಿಳಿ

ಅವರೊಂದಿಗಿರುವಾಗ;
ಊಟಕ್ಕೆ ಕುಳಿತುಕೊ, ಎಲ್ಲರನು ಶ್ರದ್ಧೆಯಿಂದ
ಉಪಚರಿಸಿದ ಬಳಿಕ.
2 ಕುಳಿತುಕೊ ನೀನು ವಹಿಸಿಕೊಂಡ ಕರ್ತವ್ಯ
ತೀರಿದ ನಂತರ
ಆಗ ನಿನಗೆ ಸಂತೋಷವಾಗುವುದು
ಅತಿಥಿಗಳ ನಿಮಿತ್ತ
ಕಾರ್ಯ ನೆರವೇರಿದ್ದಕ್ಕಾಗಿ ನಿನಗೆ ನೀಡುವರು
ಅಭಿವಂದನ.
3 ಹಿರಿಯನೇ, ಮಾತಾಡು; ನಿನಗದು
ತರವಾದುದು
ತಿಳುವಳಿಕೆಯಿಂದ ಸಮರ್ಪಕವಾಗಿ ಮಾತಾಡು
ಆದರೆ ಸಂಗೀತಕ್ಕೆ ಅಡ್ಡಿಮಾಡದಿರು.
4 ಗಾಯನ ನಡೆಯುವಾಗ ದೀರ್ಘ ಭಾಷಣ
ಮಾಡಬೇಡ
ಅಕಾಲದಲಿ ನಿನ್ನ ವಿದ್ವತ್ತು ತೋರಿಸಬೇಡ.
5 ಮದ್ಯಪಾನದ ಕೂಟದಲ್ಲಿ ಸಂಗೀತ ವಾದ್ಯ
ಚಿನ್ನದ ಮಧ್ಯೆ ಕೂರಿಸಿದ ಮಾಣಿಕ್ಯ.
6 ಮದ್ಯಪಾನದೊಂದಿಗೆ ಇಂಪಾದ ಗಾಯನ
ಆಹ್ಲಾದಕರ
ಚಿನ್ನದಲಿ ಕೂರಿಸಿದ ಪಚ್ಚೆಯಂತೆ ಸುಂದರ.
7 ಯುವಕನೇ, ಅಗತ್ಯವಿದ್ದಾಗ ಮಾತ್ರ ಮಾತಾಡು
ಅದೂ ಕನಿಷ್ಟಪಕ್ಷ ಎರಡುಬಾರಿ,
ವಿನಂತಿಸಿದಾಗ ಮಾತ್ರ ಮಾತಾಡು.
8 ವಿಷಯಗಳು ಅನೇಕವಿದ್ದರೂ, ಸಂಗ್ರಹಿಸಿ
ಹೇಳು ಸ್ವಲ್ಪದರಲಿ
ವಿಷಯ ಗೊತ್ತಿದ್ದರೂ, ನೀನಿರು
ಮೌನ ಪಂಡಿತನ ತರಹದಿ.
9 ಸರಿಸಮಾನನಂತೆ ವರ್ತಿಸಬೇಡ
ಹಿರಿಯರ ನಡುವೆ ಇರುವಾಗ
ಹರಟಬೇಡ ಇನ್ನೊಬ್ಬರು
ಮಾತಾಡುತ್ತಿರುವಾಗ.
10 ಮಿಂಚು ಹೊಳೆಯುವುದು ಗುಡುಗಿನ ಮುಂಚೆ
ಸನ್ಮಾನ ನಡೆಯುವುದು ಸಂಕೋಚವುಳ್ಳವನ
ಮುಂದೆ.
11 ಊಟದಿಂದ ಏಳು ಕೊನೆಯವನಾಗಿರದೆ,
ತಕ್ಕ ಸಮಯದಲ್ಲಿ ಎದ್ದುಬಿಡು
ವಿಳಂಬ ಮಾಡದೆ ಬೇಗನೆ ಮನೆಗೆ
ಹೋಗಿಬಿಡು.
12 ಅಲ್ಲಿ ಸಂತೋಷದಿಂದ ಕಾಲ ಕಳೆ;

ಮನಸ್ಸಿಗೆ ಬಂದಂತೆ ಮಾಡು
ಆದರೆ ಸೊಕ್ಕಿನ ಮಾತುಗಳನ್ನಾಡಿ
ಪಾಪಕಟ್ಟಿಕೊಳ್ಳದಿರು.
13 ನಿನ್ನ ಸೃಷ್ಟಿಕರ್ತನನು ಕೊಂಡಾಡು
ಇವೆಲ್ಲವುಗಳಿಗಾಗಿ
ತನ್ನ ಒಳ್ಳೆಯ ವಸ್ತುಗಳಿಂದ ನಿನಗೆ
ಕೊಡುವನಾತ ಧಾರಾಳವಾಗಿ.

## ದೈವಭಯ

14 ಸರ್ವೇಶ್ವರನಿಗೆ ಭಯಪಡುವವನು
ಸುಶಿಕ್ಷಣ ಪಡೆಯುವನು
ಹೊತ್ತಾರೆ ಎದ್ದು ಆತನನು ಹುಡುಕುವವನು,
ದಯೆಯನು ಹೊಂದುವನು.
15 ಧರ್ಮಶಾಸ್ತ್ರವನು ಅರಸುವವನು ಅದರಿಂದ
ಭರಿತನಾಗುವನು
ಕಪಟಿಯಾದರೋ ಅದರಿಂದಲೆ
ಎಡವಿ ಬೀಳುವನು.
16 ಸರ್ವೇಶ್ವರನಿಗೆ ಭಯಪಡುವವರು
ನ್ಯಾಯವನು ಕಂಡುಕೊಳ್ಳುವರು
ತಮ್ಮ ಸತ್ಕಾರ್ಯಗಳನು ದೀಪದಂತೆ
ಬೆಳಗಿಸುವರು.
17 ದುರಾತ್ಮನು ಗದರಿಕೆಗೆ ತಲೆ
ತಪ್ಪಿಸಿಕೊಳ್ಳುವನು
ತನಗೆ ಇಷ್ಟಬಂದ ತೀರ್ಮಾನವನೇ
ಹುಡುಕಿಕೊಳ್ಳುವನು.
18 ಬುದ್ಧಿವಂತನು ಇತರರ ಆಲೋಚನೆಯನು
ತೃಣೀಕರಿಸನು
ಪರಕೀಯನೂ ಗರ್ವಿಷ್ಠನೂ ತನ್ನಷ್ಟಕ್ಕೆ
ಏನು ಮಾಡಿದರೂ ಅಂಜನು, ತಲ್ಲಣಿಸನು.
19 ಆಲೋಚನೆಯಿಲ್ಲದೆ ಏನನ್ನೂ ಮಾಡಬೇಡ
ಮಾಡಿದ ಮೇಲೆ ಮರುಗಬೇಡ.
20–21 ತಿಕ್ಕಾಟದ ಹಾದಿಗೆ ಹೋಗಬೇಡ
ಕಲ್ಲುದಾರಿಯಲಿ ಎಡವಬೇಡ
ಸಮವಾದ ಹಾದಿಯಲಿ ಮೈಮರೆತಿರಬೇಡ.
22 ನಿನ್ನ ಸ್ವಂತ ಮಕ್ಕಳ ವಿಷಯದಲಿ
ಎಚ್ಚರಿಕೆಯಿಂದಿರು.
23 ಪ್ರತಿಯೊಂದು ಕಾರ್ಯಸಾಧನೆಯಲ್ಲು
ನಿನ್ನಲ್ಲೆ ನಂಬಿಕೆಯಿಟ್ಟು ವರ್ತಿಸು,
ದೈವಾಜ್ಞೆಗಳನ್ನು ಕೈಗೊಳ್ಳುವ ರೀತಿ ಇದು.
24 ಧರ್ಮಶಾಸ್ತ್ರದಲ್ಲಿ ನಂಬಿಕೆಯಿಡುವವನು

ಆಜ್ಞೆಗಳನು ಗಮನಿಸುವನು
ಸರ್ವೇಶ್ವರನಲಿ ಭರವಸೆಯಿಟ್ಟವನು ನಷ್ಟವನು
ಅನುಭವಿಸನು.

**33** ಸರ್ವೇಶ್ವರನಲಿ ಭಯಭಕ್ತಿ ಇದ್ದರೆ
ಅಂಥವನಿಗೆ ಯಾವ ಹಾನಿಯೂ
ತಟ್ಟದು
ಶೋಧನೆಯ ಸಮಯದಲಿ ಆತನಿಗೆ ಮೇಲಿಂದ
ಮೇಲೆ ಸಂರಕ್ಷಣೆ ದೊರಕುವುದು.
2 ಬುದ್ಧಿವಂತನು ಧರ್ಮಶಾಸ್ತ್ರವನು
ದ್ವೇಷಿಸನು
ಅದರ ಬಗ್ಗೆ ಕಪಟಿಯಾಗಿರುವವನು
ಬಿರುಗಾಳಿಗೆ ಸಿಕ್ಕ ಹಡಗಿನಂತಿರುವನು.
3 ವಿವೇಕಿಗೆ ಧರ್ಮಶಾಸ್ತ್ರದಲಿ
ಭರವಸೆಯಿರುತ್ತದೆ
ಅದು ಅವನಿಗೆ ನೀತಿವಾಕ್ಯದಂತೆ
ನಂಬಲರ್ಹವಾಗಿರುತ್ತದೆ.
4 ನಿನ್ನ ಭಾಷಣ, ತಯಾರಿಸಿದ್ದಾಗಿದ್ದರೆ ಅದನು
ಜನರು ಆಲಿಸುವರು
ವಿಷಯಗಳನ್ನೆಲ್ಲ ಸಂಗ್ರಹಿಸಿಕೊಂಡ
ವನಾಗಿದ್ದರೆ ಉತ್ತರಹೇಳು.
5 ಮೂರ್ಖನ ಹೃದಯ ಬಂಡಿಯ ಚಕ್ರದಂತೆ
ಅವನ ಆಲೋಚನೆ ಉರುಳುವ ಇರಸಿನಂತೆ.
6 ಬೀಜದ ಕುದುರೆಯು ಅಣಕಿಸುವ
ಗೆಳೆಯನಂತಿದೆ
ಅದರ ಮೇಲೆ ಯಾರು ಕೂತರೂ
ಅದು ಕೆನೆಯುತ್ತದೆ.

### ಅಸಮಾನತೆ

7 ವರ್ಷದಲಿ ಪ್ರತೀದಿನದ ಬೆಳಕು ಬರುವುದು
ಸೂರ್ಯನಿಂದಲ್ಲವೆ?
ಹೀಗಿರುವಲ್ಲಿ ಒಂದು ದಿನ ಇನ್ನೊಂದಕ್ಕಿಂತ
ಪವಿತ್ರವಾದುದು ಹೇಗೆ?
8 ಅವು ವೈಶಿಷ್ಟ್ಯ ಪಡೆದಿರುವುದು ಸರ್ವೇಶ್ವರನ
ಜ್ಞಾನದಿಂದಲೇ
ಋತುಗಳು, ಹಬ್ಬ ದಿನಗಳು ಬೇರೆ ಬೇರೆ
ಆಗಿರುವುದು ಆತನಿಂದಲೇ.
9 ಅವುಗಳಲ್ಲಿ ಕೆಲವನು ಗುರುತಿಸಿ ಪವಿತ್ರ
ಗೊಳಿಸಿದನು

ಇನ್ನು ಕೆಲವನು ಸಾಧಾರಣ ದಿನಗಳನ್ನಾಗಿ
ಮಾಡಿದನು.
10 ನರಮಾನವರೆಲ್ಲರು ಉತ್ಪನ್ನವಾದುದು
ಭೂಮಿಯಿಂದಲೇ
ಆದಾಮನೂ ನಿರ್ಮಿತನಾದುದು
ಮಣ್ಣಿನಿಂದಲೇ.
11 ಸರ್ವೇಶ್ವರನ ತನ್ನ ಸಂಪೂರ್ಣ ಜ್ಞಾನದಿಂದ
ಅವರಲಿ ವ್ಯತ್ಯಾಸವಿರಿಸಿದನು
ಅವರ ಹಾದಿಗಳನ್ನು ವಿಧವಿಧವಾಗಿ
ನೇಮಿಸಿದನು.
12 ಕೆಲವರನು ಆಶೀರ್ವದಿಸಿ ಮೇಲಕ್ಕೆತ್ತಿದನು
ಇನ್ನು ಕೆಲವರನು ಪ್ರತ್ಯೇಕಿಸಿ ತನ್ನ ಬಳಿಗೆ
ತಂದುಕೊಂಡನು
ಮತ್ತೆ ಕೆಲವರನು ಶಪಿಸಿ, ಹೀನಸ್ಥಿತಿಗೆ
ಇಳಿಸಿದನು
ಹಾಗು ಅವರ ಆ ಸ್ಥಾನದಿಂದ ಅವರನು
ತಳ್ಳಿಹಾಕಿದನು.
13 ಆತನ ಹಾದಿಗಳೆಲ್ಲ ಆತನ ಸುಚಿತ್ತದ
ಪ್ರಕಾರ ಇವೆ
ಕುಂಬಾರನ ಕೈಯೊಳಗಿನ ಜೇಡಿಮಣ್ಣಿನಂತೆ
ಮನುಷ್ಯರು ಸೃಷ್ಟಿಕರ್ತನ ಕೈಯಲ್ಲಿರುವುದು
ಅಂತೆಯೆ
ಆತನು ಅವರಿಗೆ ಮಾಡುತ್ತಾನೆ
ತನಗೆ ಸರಿಕಂಡಂತೆ.
14 ಕೆಡುಕಿಗೆ ಇದಿರಾಗಿದೆ ಒಳಿತು
ಸಾವಿಗೆ ಇದಿರಾಗಿದೆ ಜೀವವು
ಅಂತೆಯೆ ಸದ್ಧರ್ಮಿಗೆ ಇದಿರಾಗಿ
ಅಧರ್ಮಿಯು.
15 ಈ ರೀತಿ ಮಹೋನ್ನತನ ಕಾರ್ಯಗಳಿವೆ,
ನೋಡು;
ದ್ವಂದ್ವಗಳು, ಒಂದರ ಇದುರಾಗಿ ಇನ್ನೊಂದು.
16 ದ್ರಾಕ್ಷಿಯನು ಕೂಡಿಸುವವರ ಹಿಂದೆ
ಹಕ್ಕಲಾಯುವವನಂತೆ
ಕೊನೆಯಲಿ ನಾನು ಎಚ್ಚೆತ್ತುಕೊಂಡೆ;
17 ಸರ್ವೇಶ್ವರನ ಕೃಪೆಯಿಂದ ನಾನವರಿಗಿಂತ
ಮುಂದಾದೆ
ದ್ರಾಕ್ಷಿ ಕೂಡಿಸುವವನಂತೆ ನಾನು ತೊಟ್ಟಿಯನು
ತುಂಬಿದೆ.
18 ನೋಡು, ನಾನು ಶ್ರಮಪಟ್ಟಿದ್ದು
ನನ್ನೊಬ್ಬನಿಗೋಸ್ಕರವೇ ಅಲ್ಲ:

ಶಿಕ್ಷಣವನ್ನು ಅರಸುವವರೆಲ್ಲರಿಗೋಸ್ಕರ
ಕೂಡ.
19 ಜನಾಂಗಗಳಲ್ಲಿ ಗಣ್ಯರೆನಿಸಿಕೊಂಡವರೇ,
ನನ್ನನ್ನು ಆಲಿಸಿರಿ
ಜನಾಧಿಪತಿಗಳೇ, ನನಗೆ ಲಕ್ಷ್ಯಕೊಟ್ಟು ಕೇಳಿರಿ.

### ಸ್ವಾತಂತ್ರ್ಯ

20 ಮಗನಿಗೆ, ಹೆಂಡತಿಗೆ, ಸಹೋದರನಿಗೆ,
ಸ್ನೇಹಿತನಿಗೆ ಇವರಾರಿಗಾಗಲೀ
ಅಧಿಕಾರ ನಡೆಸಗೊಡಬೇಡ ನೀನು
ಜೀವದಿಂದಿರುವಾಗ;
ದುಡುಕಿನಿಂದ ಪರರಿಗೆ ಕೊಟ್ಟುಬಿಡಬೇಡ
ನಿನ್ನ ಆಸ್ತಿಪಾಸ್ತಿಯಿಂದ
ತರುವಾಯ ಬಂದೀತು ಅದನ್ನು ಪಶ್ಚಾತ್ತಾಪ
ದಿಂದ ತಿರುಗಿ ಕೇಳುವ ಸಂದರ್ಭ!
21 ನೀನು ಬದುಕಿರುವಾಗ,
ನಿನ್ನಲಿ ಉಸಿರಿರುವಾಗ
ನಿನ್ನನೇ ಯಾರಿಗೂ ಒಪ್ಪಿಸಿಬಿಡಬೇಡ.
22 ನೀನು ನಿನ್ನ ಮಕ್ಕಳ ಕೈಯಿಂದ
ಕೇಳುವುದಕ್ಕಿಂತಲು
ಅವರೇ ನಿನ್ನನ್ನು ಕೇಳಿ ಪಡೆದುಕೊಳ್ಳುವುದು
ಮೇಲು.
23 ನಿನ್ನ ಕಾರ್ಯಗಳಲ್ಲೆಲ್ಲ ನಿನ್ನ ಕೈಯೇ
ಮೇಲಾಗಿರಲಿ
ನಿನ್ನ ಗೌರವಕ್ಕೆ ಕುಂದು ಬಾರದಂತಿರಲಿ.
24 ನಿನ್ನ ಜೀವನದ ದಿನಗಳು ಮುಗಿಯುತ್ತಿರಲು
ಮರಣಕಾಲದಲಿ ನಿನ್ನ ಆಸ್ತಿಯನು
ಹಂಚಿಕೊಡು.

### ಸೇವಕರು

25 ಮೇವು, ಕೋಲು, ಹೊರೆ ಕತ್ತೆಗೆ
ಅನ್ನ, ಶಿಕ್ಷಣ, ಕೆಲಸ ಊಳಿಗದವನಿಗೆ.
26 ನಿನ್ನ ಊಳಿಗದವನಿಗೆ ಕೆಲಸಹಚ್ಚು,
ಆರಾಮವಾಗುವುದು ನಿನಗೆ
ಕೆಲಸವಿಲ್ಲದೆ ಬಿಟ್ಟರೆ ಅವನು ಸ್ವಾತಂತ್ರ್ಯ
ಹುಡುಕುವನು.
27 ನೊಗ, ಬಾರುಗಳು ಎತ್ತಿನ ಹೆಗಲಿಗೆ
ಕೈಕೋಳ, ಉಪದ್ರವಗಳು ದುಷ್ಟ
ಊಳಿಗದವನಿಗೆ.
28 ಅವನು ಮೈಗಳ್ಳನಾಗದಂತೆ ದುಡಿಮೆ ಹೆಚ್ಚಿಸು

ಏಕೆಂದರೆ ಸೋಮಾರಿತನ ತುಂಟತನವನ್ನು
ಕಲಿಸುವುದು.
29 ಅವನಿಗೆ ಸರಿಯಾದ ಕೆಲಸವನ್ನು ಕೊಡು
ಅವಿಧೇಯನಾದರೆ ಬೇಡಿಗಳ ಭಾರವನ್ನು
ಹೆಚ್ಚಿಸು.
30 ಯಾರ ವಿಷಯದಲೂ ಮಿತಿಮೀರಬೇಡ
ವಿಚಾರವಿಲ್ಲದೆ ಯಾವುದನ್ನು ಮಾಡಬೇಡ.
31 ನಿನಗೊಬ್ಬ ಊಳಿಗದವನಿದ್ದರೆ ಅವನನ್ನು
ನೋಡಿಕೊ ನಿನ್ನಂತೆ
ಅವನನ್ನು ಕೊಂಡುಕೊಂಡಿದ್ದೀಯೆ
ನೆತ್ತರವಿತ್ತೆ.
32 ನಿನಗೊಬ್ಬ ಊಳಿಗದವನಿದ್ದರೆ ನಿನ್ನಂತೆಯೆ
ಅವನನು ಸುಧಾರಿಸು
ನಿನ್ನ ಸ್ವಂತ ಪ್ರಾಣದಂತೆ, ಅವನ ಅಗತ್ಯ
ನಿನಗುಂಟು.
33 ಅವನನ್ನು ನಿರ್ದಯದಿಂದ ಕಂಡರೆ
ಓಡಿಹೋಗಿ ಬಿಟ್ಟಾನು
ಆಗ ಅವನನು ಹುಡುಕಿಕೊಂಡು ಎಲ್ಲೆಡೆ
ಸುತ್ತಬೇಕಾದೀತು.

### ಕನಸುಗಳು

**34** ತಿಳುವಳಿಕೆಯಿಲ್ಲದವರಿಗೆ ವ್ಯರ್ಥ
ಹಾಗು ಅಶುದ್ಧ ಆಕಾಂಕ್ಷೆಗಳು
ಇರುತ್ತವೆ
ಕನಸುಗಳು ಮೂರ್ಖರಿಗೆ ರೆಕ್ಕೆಬರುವಂತೆ
ಮಾಡುತ್ತವೆ.
2 ಕನಸುಗಳ ಮೇಲೆ ಮನಸ್ಸಿಡುವವನು ನೆರಳನು
ಹಿಡಿಯಹೋದವನಂತೆ
ಗಾಳಿಯನು ಬೆನ್ನಟ್ಟಿಹೋದವನಂತೆ.
3 ಕನಸಿನ ದರ್ಶನವು, ಇದಕ್ಕೆ ಪ್ರತಿಯಾಗಿ ಅದು
ಇದ್ದಂತೆ
ಮುಖಕ್ಕೆ ಇದಿರಾಗಿ ಅದರ ಪ್ರತಿಬಿಂಬವಿದ್ದಂತೆ.
4 ಹೊಲೆಯಿಂದ ಯಾವುದು ಶುದ್ಧವಾದೀತು?
ಸಟೆಯಿಂದ ಯಾವುದು ದಿಟವಾದೀತು?
5 ಭವಿಷ್ಯನುಡಿಗಳು, ಶಕುನಗಳು, ಕನಸುಗಳು
ಇವೆಲ್ಲವು ವ್ಯರ್ಥವೇ
ಪ್ರಸವವೇದನೆಯಲ್ಲಿರುವ ಸ್ತ್ರೀಯ ಮನಸ್ಸಿನಂತೆ
ಇವು ಮನಸ್ಸಿನಲ್ಲಿ ಊಹೆಗಳನ್ನು
ಉದ್ಭವಿಸುತ್ತವೆ.

6 ಗಮನಿಸಬೇಡ ಇಂಥವುಗಳೆಲ್ಲವನ್ನು
ಮಹೋನ್ನತನಿಂದ ನಿನಗಾಗಿ ಅವು
ಕಳುಹಿಸಲ್ಪಟ್ಟ ಹೊರತು.
7 ಕನಸುಗಳು ಅನೇಕರನು ಅಡ್ಡಹಾದಿಗೆ ಹಚ್ಚಿವೆ
ಅವುಗಳನು ನೆಚ್ಚಿಕೊಂಡು ಅವರು
ಮೋಸ ಹೋಗಿದ್ದಾರೆ.
8 ಸುಳ್ಳು ಮಾತು ಬೇಕಿಲ್ಲ ಧರ್ಮಶಾಸ್ತ್ರ
ನೆರವೇರುವುದಕ್ಕೆ
ಜ್ಞಾನ ಪರಿಪೂರ್ಣವಾಗುವುದು
ಸತ್ಯಸಂಧನಿಗೆ.

## ಪ್ರಯಾಣ

9 ದೇಶಸಂಚಾರಮಾಡುವವನು ಅನೇಕ ವಿಷಯ
ಗಳನು ಬಲ್ಲನು
ಅನುಭವಸ್ಥನು ಜ್ಞಾನವನ್ನು ಪ್ರಸಿದ್ಧಿಗೆ
ತರುವನು.
10 ಅನುಭವವಿಲ್ಲದವನಿಗೆ ತಿಳುವಳಿಕೆ ಕಡಿಮೆ
ಹೆಚ್ಚಾಗಿ ದೇಶಸಂಚಾರ ಮಾಡಿದವನಿಗೆ
ಹೆಚ್ಚು ನಿಪುಣತೆ.
11 ನಾನು ದೇಶಾಟನೆ ಮಾಡಿದ ಕಾಲದಲಿ
ಅನೇಕ ಸಂಗತಿಗಳನ್ನು ಕಂಡಿರುವೆ
ನನ್ನ ನುಡಿಗೆ ನಿಲುಕದಷ್ಟು ತಿಳುವಳಿಕೆ
ನನಗಾಗಿದೆ.
12 ಅನೇಕ ಸಾರಿ ನನ್ನ ಪ್ರಾಣಕ್ಕೆ ಅಪಾಯವಿತ್ತು
ಆದರೆ ಈ ತಿಳುವಳಿಕೆಯ ಮೂಲಕ ಪ್ರಾಣ
ಉಳಿಯಿತು.

## ದೈವಭಯ

13 ದೇವರಿಗೆ ಭಯಪಡುವವರ ಆತ್ಮ
ಬದುಕುತ್ತದೆ
ಏಕೆಂದರೆ ತಮ್ಮನು ಕಾಪಾಡುವವರ ಮೇಲೆ
ಅವರ ನಿರೀಕ್ಷೆಯಿದೆ.
14 ದೇವರಿಗೆ ಭಯಪಡುವವನು
ಅಂಜುವುದಿಲ್ಲ
ದೇವರೇ ಅವನ ನಿರೀಕ್ಷೆಯಾಗಿರುವುದರಿಂದ,
ಅಳುಕಿ ಹಿಂಜರಿಯುವುದಿಲ್ಲ.
15 ಯಾರ ಕಡೆಗೆ ಅವನ ಗಮನ?
ಯಾರು ಅವನಿಗೆ ಆಶ್ರಯ?
ದೇವರಿಗೆ ಭಯಪಡುವವನ ಆತ್ಮ ಧನ್ಯ !
16 ಸರ್ವೇಶ್ವರನ ಕಟಾಕ್ಷ ತನ್ನನು ಪ್ರೀತಿಸುವವರ

ಮೇಲೆ
ಅಂಥವರಿಗೆ ಬಲವಾದ ರಕ್ಷಣೆ ಹಾಗು ಆಶ್ರಯ
ಆತನೇ.
ಆತನೇ ಬಿಸಿಗಾಳಿಯಿಂದ ರಕ್ಷಿಸುವ ಮರೆ,
ಮಧ್ಯಾಹ್ನದ ತಾಪವ ತಪ್ಪಿಸುವ ಹೊದಿಕೆ.
ಎಡವದಂತೆ ಕಾಯುವವನು, ಬೀಳದಂತೆ
ಕಾಪಾಡುವವನು ಆತನೇ.
17 ಆತನು, ಆತ್ಮವನ್ನು ಚೈತನ್ಯಗೊಳಿಸಿ,
ಕಣ್ಣುಗಳನ್ನು ಕಳೆಗೊಳಿಸುವನು;
ಕ್ಷೇಮ, ಜೀವ, ಆಶೀರ್ವಾದಗಳನ್ನು
ದಯಪಾಲಿಸುವನು.

**ಬಲಿಯರ್ಪಣೆ**

18 ಅನ್ಯಾಯದಿಂದ ಗಳಿಸಿದವುಗಳನ್ನು ಬಲಿಯಾಗಿ
ಅರ್ಪಿಸುವುದು ಕುಚೇಷ್ಟೆಯಷ್ಟೇ
ದುಷ್ಟರ ಕುಚೇಷ್ಟೆಯಿಂದ ಗಿಟ್ಟದು ಮೆಚ್ಚಿಗೆ.
19 ಅಧರ್ಮಿಗಳ ಅರ್ಪಣೆಗಳಲ್ಲಿ ಮಹೋನ್ನತನಿಗೆ
ಸಂತೋಷವಿಲ್ಲ
ಅವರ ಅನೇಕ ಯಜ್ಞಗಳ ನಿಮಿತ್ತ ಪಾಪ
ನಿವಾರಣೆ ದೊರಕುವುದಿಲ್ಲ.
20 ಬಡವರ ಸ್ವತ್ತಿನಿಂದ ಯಜ್ಞಪಶುವನ್ನು
ತರುವವನು
ತಂದೆಯ ಎದುರಿನಲ್ಲೇ ಮಗನನ್ನು
ಕೊಲ್ಲುವಂಥವನು.
21 ಹಸಿದವನ ಅನ್ನ ಬಡವನ ಜೀವಾಧಾರ
ಅದನ್ನು ಕಸಿದುಕೊಳ್ಳುವವನು ಕೊಲೆಗಾರ.
22 ನೆರೆಯವನ ಜೀವನಾಧಾರವನು ಕಿತ್ತು
ಕೊಳ್ಳುವುದು ಕೊಲೆಗೆ ಸಮಾನ
ತನ್ನ ಆಳಿನ ಕೂಲಿಯನು ಹಿಡಿದುಕೊಳ್ಳುವುದು
ರಕ್ತಪಾತಕ್ಕೆ ಸಮಾನ.
23 ಒಬ್ಬನು ಕಟ್ಟುವುದು, ಇನ್ನೊಬ್ಬನು
ಕೆಡವುವುದು;
ಇದರಿಂದೇನು ಲಾಭ, ಕಠಿಣ ದುಡಿಮೆಯ
ಹೊರತು?
24 ಒಬ್ಬನು ಪ್ರಾರ್ಥಿಸುವುದು, ಇನ್ನೊಬ್ಬನು
ಶಪಿಸುವುದು;
ಇವರಲ್ಲಿ ಯಾರ ಮಾತನು ದೇವರು
ಆಲಿಸುವುದು?
25 ಶವ ಮುಟ್ಟಿದ ಮೇಲೆ ಸ್ನಾನ ಮಾಡಿದವನು
ತಿರುಗಿ ಅದನ್ನು ಮುಟ್ಟಿದರೆ ಸ್ನಾನದಿಂದಾದ

ಲಾಭವೇನು?
26 ಅಂತೆಯೇ ತನ್ನ ಪಾಪಗಳಿಗಾಗಿ ಉಪವಾಸ
ಮಾಡಿ ಪುನಃ ಪಾಪಮಾಡುವವನು;
ಇಂಥವನ ಮೊರೆಯನು ಕೇಳುವರಾರು? ದೇಹ
ದಂಡನೆಯಿಂದ ಅವನಿಗಾದ ಲಾಭವೇನು?

### ಧರ್ಮಶಾಸ್ತ್ರ – ಬಲಿಯರ್ಪಣೆ

**35** ಧರ್ಮಶಾಸ್ತ್ರವನ್ನು ಅನುಸರಿಸು
ವವನು ಕಾಣಿಕೆಗಳನು ಹೆಚ್ಚಾಗಿ
ಅರ್ಪಿಸಿದವನಂತೆ
ಆಜ್ಞೆಗಳನ್ನು ಕೈಗೊಳ್ಳುವವನು ಶಾಂತಿ
ಸಮಾಧಾನದ ಬಲಿಯರ್ಪಿಸಿದವನಂತೆ.
2 ಪ್ರತ್ಯುಪಕಾರ ಮಾಡುವವನು ಗೋದಿಹಿಟ್ಟನ್ನು
ನೈವೇದ್ಯ ಮಾಡಿದವನಂತೆ
ದಾನಧರ್ಮ ಮಾಡುವವನು ಸ್ತುತಿಬಲಿಯನ್ನು
ಅರ್ಪಿಸಿದವನಂತೆ.
3 ದುಷ್ಟತನವನು ಬಿಟ್ಟುಬಿಡುವುದು,
ಸರ್ವೇಶ್ವರನಿಗೆ ಸುಪ್ರೀತ
ಅಧರ್ಮವನು ಬಿಟ್ಟುಬಿಡುವುದು
ಪಾಪಕ್ಕೆ ಪ್ರಾಯಶ್ಚಿತ್ತ.
4–5 ಸರ್ವೇಶ್ವರನ ಸನ್ನಿಧಿಯನು ಸೇರಬಾರದು
ಬರಿಗೈಯಿಂದ,
ಇವುಗಳನ್ನೆಲ್ಲ ಮಾಡಬೇಕಾಗಿದೆ
ಆತನ ಆಜ್ಞೆಯ ನಿಮಿತ್ತ.
6 ನೀತಿವಂತನ ಅರ್ಪಣೆ ಒಂದು ಅಲಂಕಾರ
ಯಜ್ಞವೇದಿಕೆ
ಅದರ ಸುವಾಸನೆ ಏರುವುದು ಮಹೋನ್ನತನ
ಸನ್ನಿಧಿಗೆ.
7 ಸಮರ್ಪಕವಾಗಿರುವುದು ನೀತಿವಂತ ನೀಡುವ
ಬಲಿಕಾಣಿಕೆ
ಮರೆತುಹೋಗುವುದಿಲ್ಲ ಅದರ ಸ್ಮರಣೆ.
8 ಉದಾರದೃಷ್ಟಿಯಿಂದ ಸರ್ವೇಶ್ವರನನು
ಮಹಿಮೆಪಡಿಸು
ಕಡಿಮೆಮಾಡಬೇಡ ನಿನ್ನ ಕೈಯ ಪ್ರಥಮ
ಫಲಗಳನು.
9 ಕಾಣಿಕೆ ಕೊಡುವಾಗಲೆಲ್ಲ ಹಸನ್ಮುಖಿಯಾಗಿರು
ಸಂತೋಷದಿಂದ ದಶಮಾಂಶವನು ಸಲ್ಲಿಸು.
10 ಮಹೋನ್ನತನು ನಿನಗೆ ಕೊಟ್ಟ ಪ್ರಮಾಣಕ್ಕೆ
ಕೊಡು

ನಿನ್ನ ಕೈ ಗಳಿಸಿದ ಪ್ರಮಾಣಕ್ಕೆ ಸರಿಯಾಗಿ
ಒಳ್ಳೇ ದೃಷ್ಟಿಯಿಂದ ಕೊಡು.
11 ಏಕೆಂದರೆ ಸರ್ವೇಶ್ವರ ಪ್ರತಿಫಲ ನೀಡುವನು
ಏಳ್ಮಡಿಯಾಗಿ ನಿನಗೆ ಕೊಡುವನು.

## ದೈವನೀತಿ

12 ಲಂಚದೋಪಾದಿ ಕಾಣಿಕೆ ತರಬೇಡ,
ಆತನು ಅವುಗಳನ್ನು ಅಂಗೀಕರಿಸುವುದಿಲ್ಲ
ಅಕ್ರಮವಾದ ಬಲಿಯ ಮೇಲೆ ಮನಸ್ಸಿಡಬೇಡ,
ಆತ ನ್ಯಾಯಾಧೀಶ, ಆತನಲ್ಲಿ
ಮುಖದಾಕ್ಷಿಣ್ಯವಿಲ್ಲ.
13 ಬಡವನ ವಿರೋಧವಾಗಿ ಯಾರನ್ನೂ
ಅಂಗೀಕರಿಸನಾತ
ಅನ್ಯಾಯಕ್ಕೀಡಾದವನ ಮೊರೆಯನು
ಆಲಿಸುವನಾತ.
14 ತಿರಸ್ಕರಿಸನಾತ ಯಾವ ದಿಕ್ಕುದೆಸೆಯಿಲ್ಲದವರ
ವಿನಂತಿಯನು
ತನ್ನ ಸ್ಥಿತಿಯನು ತೋಡಿಕೊಳ್ಳುವ
ವಿಧವೆಯನು.
15 ವಿಧವೆಯ ಕಣ್ಣೀರು ಅವಳ ಕೆನ್ನೆಯ ಮೇಲೆ
ಇಳಿಯುವುದಿಲ್ಲವೆ?
ಆಕೆಯ ಕೂಗು ಆಕೆಯನು ಗೋಳಾಡಿಸಿದವನ
ವಿರುದ್ಧ ನಿಲ್ಲುವುದಿಲ್ಲವೆ?
16 ದೇವರ ಸುಚಿತ್ತದಂತೆ ಸೇವೆ ಮಾಡುವವನು
ಅಂಗೀಕೃತನಾಗುವನು
ಇಂಥವನ ಪ್ರಾರ್ಥನೆ ಮುಟ್ಟುವುದು
ಗಗನಮಂಡಲವನು.
17 ಮೇಘಮಂಡಲವನು ದಾಟುವುದು
ದೀನನ ಪ್ರಾರ್ಥನೆ
ಅವನಿಗೆ ಉಪಶಮನವೇ ಇರದು
ಅದು ದೇವರ ಸನ್ನಿಧೀ ಸೇರುವವರೆಗೆ.
18 ಅವನು ಅಲ್ಲಿಂದ ಏಳುವುದಿಲ್ಲ
ಮಹೋನ್ನತನು ಸದುತ್ತರ ಕೊಡುವವರೆಗೆ
ಆತ ಉತ್ತರ ಕೊಡುವುದು
ನ್ಯಾಯತೀರಿಸಿದ ನಂತರವೆ.
19 ಸರ್ವೇಶ್ವರ ನಿಧಾನಮಾಡನು;
ಅನ್ಯಾಯವನು ಸಹಿಸನು
ಮುರಿದುಬಿಡುವನು ನಿರ್ದಯಿಗಳ
ನಡುವನು.
20 ಅನ್ಯರಿಗೆ ಮುಯ್ಯಿತೀರಿಸುವನು;

21 ಸೊಕ್ಕಿನವರ ಗುಂಪನು ನಿರ್ನಾಮಗೊಳಿಸುವನು
ಪುಡಿಪುಡಿ ಮಾಡುವನು ಅಧರ್ಮಿಗಳ
ದಂಡಗಳನು.
22 ಪ್ರತಿಯೊಬ್ಬನಿಗೂ ಪ್ರತಿಫಲವೀಯುವನು
ಅವನವನ ಕೃತ್ಯಗಳ ಪ್ರಕಾರ;
ಮಾನವರ ಕೃತ್ಯಗಳಿಗೆ ಫಲವೀಯುವನು
ಅವರವರ ಉದ್ದೇಶಗಳಿಗೆ ಅನುಸಾರ.
23 ನ್ಯಾಯ ತೀರಿಸುವನಾತ ತನ್ನ ಜನರ
ಪಕ್ಷ ವಹಿಸಿ
ಅವರು ಆನಂದಿಸುವಂತೆ ಮಾಡುವನು ತನ್ನ
ಕೃಪೆ ತೋರಿಸಿ.
24 ಅನಾವೃಷ್ಟಿಯಲಿ ಮಳೆಮೋಡಗಳು ಬಂದಂತೆ
ಕಷ್ಟಬಾಧೆಗಳ ಕಾಲದಲ್ಲಿ ಸುಸ್ವಾಗತವಿದೆ ಆತನ
ಕರುಣೆಗೆ.

### ಇಸ್ರಯೇಲಿಗಾಗಿ ಪ್ರಾರ್ಥನೆ

**36** 1–2 ಎಲ್ಲರ ದೇವರಾದ ಒಡೆಯಾ,
ನಮ್ಮನು ಕರುಣಿಸು, ಕಟಾಕ್ಷಿಸು
ಎಲ್ಲ ಜನಾಂಗಗಳಲ್ಲು ನಿನ್ನ ಭಯಭಕ್ತಿಯನು
ಹುಟ್ಟಿಸು.
3 ನಿನ್ನನ್ನರಿಯದ ಜನರ ಮೇಲೆ ಎತ್ತು ನಿನ್ನ
ಕೈಯನು
ಅವರು ಕಾಣಲಿ ನಿನ್ನ ಶಕ್ತಿಪರಾಕ್ರಮವನು.
4 ನೀ ಪರಿಶುದ್ಧನೆಂಬುದನು ಪ್ರಕಟಿಸಿದೆ ಅವರಿಗೆ
ನಮ್ಮ ಮೂಲಕ
ಈಗ ನೀ ಮಹಾಮಹಿಮನೆಂಬುದನು
ತೋರ್ಪಡಿಸು ನಮಗೆ ಅವರ ಮೂಲಕ.
5 ಸರ್ವೇಶ್ವರಾ ನೀನೊಬ್ಬನೇ ಹೊರತು ಬೇರೆ
ದೇವರಿಲ್ಲ
ನಾವು ನಿನ್ನನು ಅರಿತುಕೊಂಡಂತೆ
ಅರಿತುಕೊಳ್ಳಲಿ ಅವರೆಲ್ಲ.
6 ಹೊಸ ಹೊಸ ಸೂಚಕಕಾರ್ಯಗಳನ್ನು
ತೋರಿಸು
ತರತರದ ಅದ್ಭುತಕಾರ್ಯಗಳನ್ನು ನಡೆಸು
ನಿನ್ನ ಹಸ್ತದ, ನಿನ್ನ ಭುಜಬಲದ ಶಕ್ತಿಯನ್ನು
ಪ್ರದರ್ಶಿಸು.
7 ರೌದ್ರವನು ತಾಳು; ನಿನ್ನ ಕೋಪವನು
ಸುರಿದುಬಿಡು
ಎದುರಾಳಿಯನು ತೆಗೆದು ಹಾಕು, ವೈರಿಯನು

ಅಳಿಸಿಬಿಡು.
8 ಬೇಗನೆ ಬರಮಾಡು ಆ ಸಮಯವನು
ಲಕ್ಷ್ಯಕ್ಕೆ ತೆಗೆದುಕೊ ನೀ ಮಾಡಿದ ಪ್ರಮಾಣವನು
ಸಾರಿ ಹೇಳಲಿ ಜನರು
ನಿನ್ನ ಮಹತ್ಕಾರ್ಯಗಳನು.
9 ಇದರಿಂದ ತಪ್ಪಿಸಿಕೊಳ್ಳುವವನು ಬೆಂಕಿಯ
ದಳ್ಳುರಿಗೆ ತುತ್ತಾಗಲಿ
ನಿನ್ನ ಜನರಿಗೆ ಕೇಡು ಬಗೆವವರು
ಹಾಳಾಗಿ ಹೋಗಲಿ.
10 ನಸುಕಿಬಿಡು ನಮ್ಮ ವಿರೋಧಿಜನರ
ಅಧಿಪತಿಗಳ ತಲೆಗಳನು
ನಮ್ಮ ಹೊರತು ಬೇರೆ ಯಾರೂ ಇಲ್ಲ
ಎಂದು ಕೊಚ್ಚಿಕೊಳ್ಳುವವರನು.
11 ಒಟ್ಟುಗೂಡಿಸು ಯಕೋಬನ ಕುಲಗಳನ್ನೆಲ್ಲಾ
ಮೊದಲಿನಂತೆ ಸ್ವಾಸ್ಥ್ಯವಾಗಿ ತೆಗೆದುಕೊ
ಅವರನ್ನೆಲ್ಲಾ.
12 ಸರ್ವೇಶ್ವರಾ, ಕರುಣಿಸು ನಿನ್ನ ಹೆಸರಿನಿಂದ
ಕರೆಯಲಾಗುವ ಜನರನು
ಚೊಚ್ಚಲು ಮಗನಿಗೆ ಹೋಲಿಸಿದ
ಇಸ್ರಯೇಲನು.
13 ದಯೆತೋರು ನಿನ್ನ ಪವಿತ್ರಾಲಯವಿರುವ
ಪಟ್ಟಣದ ಮೇಲೆ
ಹೌದು, ನಿನ್ನ ವಾಸಸ್ಥಾನವಾಗಿರುವ
ಜೆರುಸಲೇಮಿನ ಮೇಲೆ.
14 ಸಿಯೋನ್ ನಗರ ತುಂಬಿರಲಿ ನಿನ್ನ
ಪರಾಕ್ರಮ ಕೃತ್ಯಗಳ ಸುದ್ದಿಯಿಂದ
ನಿನ್ನ ಜನರು ಬೆಳಗಲಿ ನಿನ್ನ
ಮಹಿಮಾ ಪ್ರಭಾವದಿಂದ.
15 ಆದಿಯಲ್ಲೇ ಸೃಷ್ಟಿಯಾದವರಿಗೆ ನಿನ್ನ ಕುರಿತ
ಸಾಕ್ಷಿ ದೊರಕಲಿ
ನಿನ್ನ ಪ್ರವಾದಿಗಳು ನುಡಿದದ್ದೆಲ್ಲ ಈಡೇರಲಿ.
16 ನಿನ್ನನು ನಿರೀಕ್ಷಿಸಿದವರಿಗೆ ಪ್ರತಿಫಲ ದೊರಕಲಿ
ಜನರು ನಿನ್ನ ಪ್ರವಾದಿಗಳಲಿ ಭರವಸೆಯಿಡಲಿ.
17 ನಿನ್ನ ಜನರನು ಆರೋನನು ಆಶೀರ್ವದಿಸಿದಂತೆ
ಸರ್ವೇಶ್ವರಾ, ನಿನಗೆ ಸೇರಲಿ
ಮೊರೆಯಿಡುವವರ ಪ್ರಾರ್ಥನೆ.
ಆಗ ಭೂನಿವಾಸಿಗಳೆಲ್ಲ ಅರಿಯುವರು
ನೀ ಸರ್ವೇಶ್ವರನೆಂದು
ನೀನೇ ಸರ್ವಯುಗಗಳ ದೇವರೆಂದು.

### ವ್ಯತ್ಯಾಸದ ಅರಿವು

18 ಹೊಟ್ಟೆ ತಿನ್ನುತ್ತದೆ ಎಲ್ಲಾ ತರದ
ಆಹಾರ ಪದಾರ್ಥ
ಆದರೂ ಒಂದು ಪದಾರ್ಥ ಇನ್ನೊಂದಕ್ಕಿಂತ
ರುಚಿಕರ.
19 ಬೇಟೆಮಾಂಸದ ರುಚಿನೋಡಿ
ತಿಳಿದುಕೊಳ್ಳುತ್ತದೆ ಬಾಯಿ
ಅದರಂತೆ ಸುಳ್ಳು ಮಾತುಗಳನು
ತಿಳಿದುಕೊಳ್ಳುತ್ತಾನೆ ವಿವೇಕವುಳ್ಳ ಹೃದಯಿ.
20 ವಕ್ರ ಹೃದಯದಿಂದ ಉಂಟಾಗುವುದು ದುಃಖ
ಅನುಭವಿಯಿಂದ ಅದಕ್ಕಾಗುವುದು ತಕ್ಕ
ಪ್ರತೀಕಾರ.

### ವಧುವಿನ ಆಯ್ಕೆ

21 ಯಾವ ಪುರುಷನನ್ನಾದರು ವರಿಸಬಹುದು
ಮಹಿಳೆ
ಆದರೆ ಪುರುಷನಿಗೆ ಒಬ್ಬಳು
ಇನ್ನೊಬ್ಬಳಿಗಿಂತಲೂ ಚೆಲುವೆ.
22 ಸ್ತ್ರೀ ಲಾವಣ್ಯದಿಂದ ಪುರುಷನ
ಮುಖಕ್ಕೇರುವುದು ಕಾಂತಿ
ಇನ್ನಾವ ಅಭಿಲಾಷೆಯಿಂದಲೂ ಅವನಿಗೆ
ದೊರಕದು ತೃಪ್ತಿ.
23 ನಯವಿನಯ ಆಕೆಯ ಬಾಯಲ್ಲಿದ್ದರೆ
ಅವಳ ಗಂಡ ಶ್ರೇಷ್ಠ ಅದೃಷ್ಟವಂತನೆ!
24 ಪತ್ನಿಯನು ಸಂಪಾದಿಸಿಕೊಂಡವನಿಗಿದೆ
ಸುಖಸಂಪತ್ತಿನ ಸಾಧನ
ಆಕೆ ಅವನಿಗೆ ಸರಿಬೀಳುವ ಸಹಕಾರಿ;
ಸ್ತಂಭದಂತಹ ಬೆಂಬಲ.
25 ಆವರಣವಿಲ್ಲದವನ ಆಸ್ತಿ ಹಾಳು
ಹೆಂಡತಿಯಿಲ್ಲದವನ ಜೀವನ
ಗೊತ್ತುಗುರಿಯಿಲ್ಲದ ಗೋಳು.
26 ಪಟ್ಟಣದಿಂದ ಪಟ್ಟಣಕ್ಕೆ ಜಿಗಿಯುವ
ಚಪಲಚೋರನನು ನಂಬುವರಾರು?
ಕತ್ತಲೆಯಾದಾಗ ಕಂಡಲ್ಲಿ ತಂಗುವ
ಗೂಡಿಲ್ಲದ ಮನುಷ್ಯನನ್ನು ನಂಬುವರಾರು?

### ಮಿತ್ರದ್ರೋಹ

**37** ಪ್ರತಿಯೊಬ್ಬ ಪರಿಚಿತನು 'ನಾನು
ನಿನ್ನ ಸ್ನೇಹಿತ' ಎನ್ನಬಹುದು

ಆದರೆ ಕೆಲವರು ಹೆಸರಿಗೆ ಮಾತ್ರ ಸ್ನೇಹಿತರು.
2 ಆಪ್ತಮಿತ್ರನೇ ತಿರುಗಿಕೊಂಡು ಶತ್ರುವಾದರೆ
ಆ ದುಃಖ ಸಾವಿನ ದುಃಖಕ್ಕೆ ಸಮಾನವಲ್ಲವೆ?
3 ಓ ಕೆಟ್ಟ ಕಲ್ಪನೆಯೇ! ನೀನು ಏತಕ್ಕಾಗಿ
ಸೃಷ್ಟಿಯಾದೆ?
ಭೂಲೋಕವನ್ನೆಲ್ಲ ಮೋಸದಿಂದ
ಮುಚ್ಚುವುದಕ್ಕಾಗಿಯೆ?
4 ಒಡನಾಡಿ ಸಂತೋಷಪಡುವನು ಸ್ನೇಹಿತನು
ಸುಖವಾಗಿರುವಾಗ
ಆದರೆ ವಿರೋಧಿಯಾಗುವನವನು ಆ ಸ್ನೇಹಿತ
ಕಷ್ಟದಲ್ಲಿರುವಾಗ.
5 ಹೊಟ್ಟೆಗಾಗಿ ಸ್ನೇಹಿತನೊಂದಿಗೆ ದುಡಿಯುವ
ಒಡನಾಡಿಯೂ ಇದ್ದಾನೆ
ಇಂಥವನು ಯುದ್ಧಕಾಲದಲ್ಲಿ ಗುರಾಣಿ
ಹಿಡಿಯುತ್ತಾನೆ.
6 ಪ್ರಾಮಾಣಿಕ ಸ್ನೇಹಿತನನು ಮರೆತುಬಿಡಬೇಡ
ನಿನ್ನ ಸೌಭಾಗ್ಯದಲ್ಲಿ ಅವನನು ಅಲಕ್ಷಿಸಬೇಡ.

### ಸಲಹೆಗಾರರ ಬಗ್ಗೆ ಎಚ್ಚರಿಕೆ

7 ಆಲೋಚನೆ ಕೊಡುವ ಪ್ರತಿಯೊಬ್ಬನು
ಅದನ್ನು ಹೊಗಳುತ್ತಾನೆ
ಆದರೆ ಸ್ವಂತ ಹಿತಕ್ಕಾಗಿ ಆಲೋಚನೆ
ಕೊಡುವಂಥವರೂ ಇದ್ದಾರೆ.
8 ಎಚ್ಚರಿಕೆಯಿಂದಿರು ಸಲಹೆಗಾರರ ವಿಷಯದಲ್ಲಿ
ಮನಬಿಚ್ಚುವುದಕ್ಕೆ ಮುಂಚೆ ಅವನಿಗೆ
ಬೇಕಾದುದೇನೆಂದು ತಿಳಿ.
ಆಲೋಚನೆ ಹೇಳುತ್ತಿರಬಹುದು ಸ್ವಂತ
ಲಾಭಕ್ಕಾಗಿ
ಆ ಸಲಹೆಯನ್ನು ಬಳಸಿಕೊಳ್ಳಬಹುದು
ನಿನಗೆ ವಿರೋಧವಾಗಿ.
9 ತೀರ್ಮಾನಿಸಿ ಹೇಳಬಹುದವರು,
'ನಿನ್ನ ದಾರಿ ಸರಿಯಾಗಿದೆ' ಎಂದು
ಆದರೆ ನಿನಗೇನು ಸಂಭವಿಸುವುದೋ ಎಂದು
ನೋಡುವರು ದೂರ ನಿಂತುಕೊಂಡು.
10 ಸಂದೇಹ ದೃಷ್ಟಿಯಿಂದ ನಿನ್ನ ಕಾಣುವವ
ನೊಂದಿಗೆ ಆಲೋಚನೆ ಮಾಡಬೇಡ
ನಿನ್ನ ಮೇಲೆ ಹೊಟ್ಟೆಕಿಚ್ಚು ಪಡುವವನಿಗೆ
ನಿನ್ನ ಮನಸ್ಸನ್ನು ಬಿಚ್ಚಬೇಡ.
11 ಸ್ತ್ರೀಯೊಂದಿಗೆ ಅವಳ ಸವತಿಯನ್ನು ಕುರಿತು
ಹೇಡಿಯೊಂದಿಗೆ ಯುದ್ಧವನ್ನು ಕುರಿತು

ವರ್ತಕನೊಂದಿಗೆ ವ್ಯಾಪಾರವನ್ನು ಕುರಿತು
ಕೊಳ್ಳುವವನೊಂದಿಗೆ ಮಾರುವುದನ್ನು ಕುರಿತು
ಮತ್ಸರಿಯೊಂದಿಗೆ ಕೃತಜ್ಞತೆಯನ್ನು ಕುರಿತು
ನಿರ್ದಯಿಯೊಂದಿಗೆ ದಯೆಯನ್ನು ಕುರಿತು
ಸೋಮಾರಿಯೊಂದಿಗೆ ಕೆಲಸದ ರೀತಿಯನ್ನು
ಕುರಿತು
ಅನಿಯತ ಕೂಲಿಯಾಳಿನೊಂದಿಗೆ ಕೆಲಸ
ಮುಗಿಸುವುದನ್ನು ಕುರಿತು
ಮೈಗಳ್ಳ ಸೇವಕನೊಂದಿಗೆ ದೊಡ್ಡ
ಯೋಜನೆಯನ್ನು ಕುರಿತು
ಆಲೋಚನೆ ಕೇಳಬೇಡ:
ಅವರು ಕೊಡುವ ಸಲಹೆಯನು
ಗಮನಿಸಬೇಡ.
12 ಆದರೆ ಯಾವನು ದೇವಾಜ್ಞೆಗಳನ್ನು ಸರಿಯಾಗಿ
ಅನುಸರಿಸುತ್ತಾನೆಂದು ತಿಳಿದಿದೆಯೋ
ಯಾವನ ಮನೋಭಾವ ನಿನ್ನ
ಮನೋಭಾವದಂತಿದೆಯೋ
ನೀನು ಕಷ್ಟದಲ್ಲಿದ್ದಾಗ ಯಾವನು ನಿನ್ನೊಂದಿಗೆ
ದುಃಖಿಸುತ್ತಾನೋ
ಅಂಥ ಸತ್ಪುರುಷನೊಂದಿಗಿದ್ದು
ಆಲೋಚನೆಯನ್ನು ಕೇಳಿಕೊ.
13 ನಿನ್ನ ಅಂತರಂಗದ ಆಲೋಚನೆಯೇ
ಸ್ಥಿರವಾದುದು
ನಿನಗೆ ಅದಕ್ಕಿಂತ ವಿಶ್ವಾಸ ಪಾತ್ರವಾದುದಿಲ್ಲ
ಇನ್ನಾವುದು.
14 ಎತ್ತರದ ಬುರುಜಿನ ಮೇಲಿರುವ
ಏಳು ಮಂದಿ ಕಾವಲುಗಾರರಿಗಿಂತ
ಮನುಷ್ಯನ ಅಂತರಂಗ ನೀಡುವ ಎಚ್ಚರಿಕೆಯೇ
ಹೆಚ್ಚು ಸೂಕ್ತ.
15 ಮೇಲಾಗಿ ಪ್ರಾರ್ಥನೆ ಮಾಡು ಮಹೋನ್ನತನಿಗೆ
ನಿನ್ನನು ಸತ್ಯದ ಮಾರ್ಗದಲ್ಲಿ ನಡೆಸುವಂತೆ.

### ಸುಜ್ಞಾನ – ಆತ್ಮವಿಶ್ವಾಸ

16 ಯಾವ ಕೆಲಸಕ್ಕಾದರೂ ಯೋಜನೆಯೇ
ಮೊದಲು
ಯಾವ ಕಾರ್ಯಸಾಧನೆಗೂ ಆಲೋಚನೆಯೇ
ಮುಂದು.
17–18 ನಾಲ್ಕು ಯೋಚನೆಗಳು ಬೇರೂರುವುದು
ಹೃದಯದಲೇ
ಅಲ್ಲಿಂದ ತಲೆಯೆತ್ತುತ್ತವೆ ಒಳಿತು–ಕೆಡುಕು,

ಜೀವ ಹಾಗೂ ಸಾವು
ಇವುಗಳನ್ನು ನಿರಂತರ ಆಳುವಂಥದು
ನಾಲಗೆಯು.
19 ಒಬ್ಬನು ಚತುರ, ಇನ್ನೊಬ್ಬನಿಗೆ ಆಲೋಚನೆ
ಕೊಡುವುದರಲ್ಲಿ
ಆದರೆ ಸ್ವಂತ ಆತ್ಮಕೆ ಅವನು ನಿರುಪಯೋಗಿ.
20 ಒಬ್ಬನು ಮಾತಿನ ಮಲ್ಲ, ಆದರೆ ಅಪ್ರಿಯ;
ಇಂಥವನು ಹೊಟ್ಟೆಗಿಲ್ಲದ ನಿರ್ಗತಿಕ.
21 ಕಾರಣ, ಸರ್ವೇಶ್ವರನ ಪ್ರೀತಿಯನ್ನು ಅವನು
ಗಳಿಸಿಲ್ಲ
ಆದ್ದರಿಂದ ಅವನು ತೀರಾ ಸುಜ್ಞಾನರಹಿತ.
22 ಇನ್ನೊಬ್ಬನು ತಾನು ಜಾಣನೆಂದು ನೆನೆಸುತ್ತಾನೆ
ತನ್ನ ತೀರ್ಪುಗಳೇ ನಂಬಲು ಅರ್ಹವೆಂದು
ಘೋಷಿಸುತ್ತಾನೆ.
23 ಆದರೆ ಸುಜ್ಞಾನಿ ತನ್ನ ಜನರಿಗೆ ನೀಡುತ್ತಾನೆ
ಶಿಕ್ಷಣ
ಅವನ ತಿಳುವಳಿಕೆಯ ಫಲಗಳು ಶಾಶ್ವತ.
24 ಸುಜ್ಞಾನಿಯ ಮೇಲೆ ಸುರಿಸಲಾಗುವುದು
ಆಶೀರ್ವಾದಗಳು
ನೋಡಿದವರೆಲ್ಲರು ಅವನು ಧನ್ಯನೆಂದು
ಹೇಳುವರು.
25 ಮನುಷ್ಯನ ಜೀವನದ ದಿನಗಳು ಎಣಿಕೆಯಾಗಿವೆ
ಆದರೆ ಇಸ್ರಯೇಲಿನ ದಿನಗಳು ಅಗಣಿತವಾಗಿವೆ.
26 ಸುಜ್ಞಾನಿ ತನ್ನ ಜನರಿಗೆ ವಿಶ್ವಾಸಪಾತ್ರ
ಅವನ ಹೆಸರು ಉಳಿಯುವುದು ಚಿರಕಾಲ.

**ತಿಂಡಿಯಲ್ಲಿ ಇತಿ–ಮಿತಿ**

27 ಮಗನೇ, ಜೀವನದಲಿ ನಿನ್ನನ್ನೇ ಪರೀಕ್ಷಿಸಿಕೊ
ಕೆಟ್ಟದ್ದೇನೆಂದು ತಿಳಿದು ಅದಕೆ ಎಡೆಕೊಡದಂತೆ
ನೋಡಿಕೊ.
28 ಏಕೆಂದರೆ, ಎಲ್ಲವೂ ವಿಹಿತವಾಗಿರುವುದಿಲ್ಲ
ಎಲ್ಲರು, ಎಲ್ಲದರಲ್ಲಿ ಮೆಚ್ಚಿಕೆ
ಪಡೆಯುವುದಿಲ್ಲ.
29 ಪ್ರತಿಯೊಂದು ವಿಶಿಷ್ಟ ಭೋಜನಕ್ಕೂ
ಕಾತುರವಾಗಿರಬೇಡ
ತಿನ್ನುವ ಪದಾರ್ಥಗಳಲ್ಲಿ ಅತ್ಯಾಶೆಯುಳ್ಳವ
ನಾಗಿರಬೇಡ.
30 ರೋಗ ಉತ್ಪತ್ತಿಯಾಗುವುದು ಅತಿಯಾದ
ತಿಂಡಿ–ತಿನಸುಗಳಿಂದ
ಉದರಶೂಲೆಯೂ ಆರಂಭವಾಗುವುದುಂಟು

ಅದರಿಂದ.
31 ಅನೇಕರು ತೀರಿಹೋದರು ಅತಿಯಾದ
ಭೋಜನದಿಂದ
ನಿನ್ನ ಜೀವನದ ದಿನಗಳನು ಹೆಚ್ಚಿಸಿಕೋ
ಎಚ್ಚರಿಕೆಯಿಂದ.

**ಅನಾರೋಗ್ಯ – ಔಷಧ**

**38** ವೈದ್ಯನ ಸೇವೆಗನುಸಾರ ಮರ್ಯಾದೆ
ಸಲ್ಲಿಸು ಅವನಿಗೆ
ಅವನನ್ನು ಉಂಟು ಮಾಡಿದಾತ ದೇವರೇ.
2 ಗುಣಪಡಿಸುವ ಶಕ್ತಿ ಬರುವುದು
ಮಹೋನ್ನತನಿಂದ
ವೈದ್ಯನಿಗೆ ಬಹುಮಾನ ದೊರಕುವುದು
ಅರಸನಿಂದ.
3 ವೈದ್ಯನು ತಲೆಯೆತ್ತುವನು ತನ್ನ ಕೌಶಲ್ಯದ
ನಿಮಿತ್ತ
ಹಿರಿಯರ ದೃಷ್ಟಿಯಲ್ಲವನು ಕೀರ್ತಿಪಾತ್ರ.
4 ಸರ್ವೇಶ್ವರ ಔಷಧವನ್ನು ಉತ್ಪನ್ನ ಮಾಡಿದನು
ಭೂಮಿಯಿಂದ
ಬುದ್ಧಿವಂತನಾರಿಗೂ ಹೇಸಿಗೆಯಾಗುವುದಿಲ್ಲ
ಅದರಿಂದ.
5 ಗಿಡ ಹಾಕಿದ್ದರಿಂದ ನೀರು ಸಿಹಿಯಾಯಿತಲ್ಲಾ
ಇದರಿಂದ ಅದರ ಸತ್ವ ತಿಳಿದು ಬಂತಲ್ಲಾ!
6 ತನ್ನ ಅದ್ಭುತ ಕಾರ್ಯಗಳಿಗಾಗಿ
ಮಹಿಮೆಸಲ್ಲುವಂತೆ
ದೇವರು ತಿಳುವಳಿಕೆ ದಯಪಾಲಿಸಿದ
ಮನುಷ್ಯನಿಗೆ.
7–8 ಗಿಡಮೂಲಿಕೆಗಳಿಂದ ಔಷಧಮಾಡುವವನು
ತಯಾರಿಸುವನು ಮಿಶ್ರಣವನು
ಅದರ ಮೂಲಕ ವಾಸಿ ಮಾಡುವನು
ರೋಗವನು, ನೀಗಿಸುವನು ಬೇನೆಯನು.
ಹೀಗೆ ದೇವರ ಕೆಲಸಕಾರ್ಯಗಳಿಗೆ
ಮುಗಿವೇ ಇಲ್ಲ
ಆತನಿಂದಲೇ ಭೂಮಿಯ ಮೇಲೆ
ಆರೋಗ್ಯ ದಾನ.
9 ಮಗನೇ, ನೀನು ಕಾಯಿಲೆಯಾಗಿರುವಾಗ
ಅಲಕ್ಷ್ಯಮಾಡದಿರು
ಸರ್ವೇಶ್ವರನನ್ನು ಪ್ರಾರ್ಥಿಸು,
ಆತ ನಿನ್ನನು ಗುಣಪಡಿಸುವನು.

10 ತಪ್ಪು ಮಾಡುವುದನು ಬಿಟ್ಟುಬಿಟ್ಟು,
ನಿನ್ನ ಕೈ ಕೆಲಸವನು ಸರಿಪಡಿಸು
ಎಲ್ಲಾ ತರದ ಪಾಪಗಳಿಂದ ನಿನ್ನ ಹೃದಯವನು
ಶುದ್ಧಗೊಳಿಸು.
11 ಸುಗಂಧಬಲಿಯನು, ಗೋದಿಹಿಟ್ಟಿನ
ನೈವೇದ್ಯವನು ಅರ್ಪಿಸು
ನಿನಗೆ ಸಾಧ್ಯವಾದಷ್ಟು ಎಣ್ಣೆಯನು
ಅದರ ಮೇಲೆ ಸುರಿಸು.
12 ಅನಂತರ ತಕ್ಕ ಅವಕಾಶ ನೀಡು ವೈದ್ಯನಿಗೆ
ಅವನು ಸೃಷ್ಟಿಯಾದುದು ಸರ್ವೇಶ್ವರನಿಂದಲೇ
ಅವನು ನಿನ್ನಿಂದ ಅಗಲದಿರಲಿ;
ನಿನಗಿದೆ ಅವನ ಅವಶ್ಯಕತೆ.
13 ವೈದ್ಯರ ಕೈಯಿಂದ ಗುಣಮುಖನಾಗುವ
ಸಂದರ್ಭಗಳಿವೆ.
14 ಪ್ರಾಣರಕ್ಷೆಗಾಗಿ ಉಪಶಮನವನ್ನೂ
ಆರೋಗ್ಯವನ್ನೂ ದಯಪಾಲಿಸುವಂತೆ
ಅವರೂ ಪ್ರಾರ್ಥನೆಮಾಡುವರು
ಸರ್ವೇಶ್ವರನಿಗೆ.
15 ಸೃಷ್ಟಿಕರ್ತನಿಗೆ ವಿರುದ್ಧ ಪಾಪಕಟ್ಟಿ
ಕೊಳ್ಳುವವನು
ವೈದ್ಯರ ಆರೈಕೆಗೆ ಗುರಿಯಾಗುವನು.

**ಶೋಕಾಚರಣೆ**

16 ಮಗನೇ, ತೀರಿಹೋದವನ ಬಗ್ಗೆ ಕಣ್ಣೀರು
ಸುರಿಸು
ದುಃಖಾಕ್ರಾಂತನಾಗಿ ಗೋಳಾಟವನ್ನು
ಆರಂಭಿಸು
ಘನತೆಗೆ ತಕ್ಕಂತೆ ಅವನ ಪಾರ್ಥಿವ
ಶರೀರವನ್ನು ಅಲಂಕರಿಸು
ಅವನ ಶವಸಂಸ್ಕಾರವನ್ನು ಗೌರವದಿಂದ
ನೆರವೇರಿಸು.
17 ಅತ್ತು ಪ್ರಲಾಪಿಸು: ಗೋಳಾಟ
ಮನಃಪೂರ್ವಕವಾಗಿರಲಿ
ನಿನ್ನ ಶೋಕಾಚರಣೆ ಮೃತನ ಘನತೆಗೆ
ತಕ್ಕಂತಿರಲಿ.
ಒಂದೆರಡು ದಿನವಾದರೂ ಅವನ ಬಗ್ಗೆ ಟೀಕೆ
ನಿನ್ನ ಬಾಯಿಂದ ಬಾರದಿರಲಿ
ಅನಂತರ ನಿನ್ನ ದುಃಖಕ್ಕೆ ಉಪಶಮನ
ದೊರಕಲಿ
18 ಏಕೆಂದರೆ ದುಃಖದಿಂದ ಸಾವು ಬರಬಹುದು

ಮನೋವೇದನೆಯಿಂದ ಬಲ
ಕುಗ್ಗಿ ಹೋಗಬಹುದು.
19 ದುಃಖ ನೀಗದು ವ್ಯಕ್ತಿಯು ತೀರಿದ ಬಳಿಕ
ಆದರೆ ಮನೋವೇದನೆ ನಡೆಸಬಾರದು
ಬಡತನದತ್ತ.
20 ದುಃಖವನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ
ಅಂತ್ಯವನ್ನು ನೆನೆಸಿಕೊಂಡು ಅಳಿಸಿಬಿಡದನ್ನು
ಮನಸ್ಸಿನಿಂದ.
21 ಜ್ಞಾಪಕವಿರಲಿ: ಸತ್ತವರು ಹಿಂದಿರುಗಿ
ಬರುವಂತಿಲ್ಲ
ಅದರಿಂದ ನಿನಗೆ ಹಾನಿಯೇ ಹೊರತು
ಸತ್ತವರಿಗೆ ಲಾಭವಿಲ್ಲ.
22 ಅವನ ಗತಿಯನ್ನು ನೆನಸಿಕೊ;
ನಿನ್ನ ಗತಿಯೂ ಅದೇ
ನಿನ್ನೆ ಅವನಿಗೆ, ಇಂದು ನಿನಗೆ
23 ತೀರಿಹೋದವನು ವಿಶ್ರಾಂತಿ
ಪಡೆಯುತ್ತಿರುವಾಗ
ವಿಶ್ರಮಿಸಲಿ ಅವನ ಸ್ಮರಣೆ
ಅವನಿಂದ ಪ್ರಾಣಹೋದಮೇಲೆ
ನೀ ತಂದುಕೋ ಸ್ಥೈರಣೆ.

**ಕಾಯಕವೇ ಕೈಲಾಸ**

24 ಬಿಡುವಿನ ಸಮಯ ಜ್ಞಾನಾರ್ಜನೆಗೊಂದು
ಸದವಕಾಶ ಶಾಸ್ತ್ರಿಗೆ
ವ್ಯವಹಾರ ಕಡಿಮೆಯಾದಷ್ಟು ಅನುಕೂಲತೆ
ಹೆಚ್ಚು ವಿದ್ಯೆಯ ಗಳಿಕೆಗೆ
25 ನೇಗಿಲು ಹಿಡಿದು ಚಾಟಿಗೋಲಿನಲ್ಲೇ
ಆಸಕ್ತಿವಹಿಸುವವನು,
ಎತ್ತುಗಳನ್ನು ಹೊಡೆದು, ಅವುಗಳ
ದುಡಿಮೆಯಲ್ಲೇ ಮಗ್ನನಾಗಿರುವವನು,
ಹೋರಿಗಳನ್ನು ಸಾಕುವುದರ ಬಗ್ಗೆಯೇ
ಮಾತಾಡುವವನು,
ಇಂಥವರು ವಿದ್ಯಾವಂತರಾಗುವುದೆಂತು?
26 ಅವನ ಲಕ್ಷ್ಯ ಹೊಲವನುತ್ತು ಮಣ್ಣು ತಿರುವಿ
ಹಾಕುವುದರಲ್ಲಿ
ಅವನ ಎಚ್ಚರಿಕೆ ದನಗಳಿಗೆ ಮೇವುಮಿಡಿ
ನೀಡುವುದರಲ್ಲಿ
27 ಅವರಂತೆಯೇ ಎಲ್ಲಾ ಕೆಲಸಗಾರರು,
ಕಲಾಕುಶಲರು
ಹಗಲಿರುಳೂ ದುಡಿಯುತ್ತಾರೆ ಅವರೆಲ್ಲರು;

ಮುದ್ರೆಯುಂಗುರದಲ್ಲಿ ಚಿತ್ರಕೊರೆಯುವ
ಅಕ್ಕಸಾಲಿಗನು,
ನಾನಾ ಪ್ರಾಕಾರಗಳನ್ನು ರಚಿಸುವುದರಲಿ
ಮಗ್ನನಾಗಿರುವ ಕಾರ್ಮಿಕನು,
ತನಗೆ ಕೊಡಲಾದ ನಕ್ಷೆಯಂತೆ ಪ್ರತಿಮೆ
ಮಾಡುವವನು,
ಆಸಕ್ತರಾಗಿರುತ್ತಾರೆ ಇವರೆಲ್ಲರು
ತಮ್ಮ ಕೆಲಸವನ್ನು ಮುಗಿಸಲು;
28 ಅಂತೆಯೇ ಅಡಿಗಲ್ಲಿನೆದುರು ಕುಳಿತಿರುವ
ಕಮ್ಮಾರನು,
ಗಮನಿಸುತ್ತಿರುವನು ಕಬ್ಬಿಣದ ತುಂಡನ್ನು
ಹಿಡಿದು
ಅವನ ದೇಹ ಕರಗುತ್ತಿರುವುದು
ಕುಲುಮೆಯ ಕಾವಿನಿಂದ
ಸೊರಗುತ್ತಿರುವನವನು ಬೆಂಕಿಯ ಝಳದಿಂದ;
ಅವನನ್ನು ಕಿವುಡುಗೊಳಿಸುತ್ತಿರುವುದು
ಸುತ್ತಿಗೆಯ ಸಪ್ಪಳ
ಅವನ ಕಣ್ಣುಗಳನ್ನು ಸೆರೆಹಿಡಿದಿರುವುದು
ಪಾತ್ರೆಯ ರೂಪ
ಅವನ ಮನಸ್ಸು ಕೆಲಸವನ್ನು
ಪೂರ್ತಿಗೊಳಿಸುವುದರಲ್ಲಿ
ಅವನ ಗಮನ ಅವುಗಳನು
ಸುಂದರಗೊಳಿಸುವುದರಲ್ಲಿ;
29 ಅಂತೆಯೇ ತಿಗರಿಯನು ತಿರುಗಿಸುತ್ತಿರುವ
ಕುಂಬಾರ
ಮಡಕೆಗಳನ್ನು ಮಾಡುತ್ತಾ ಕುಳಿತಿರುವನಾತ
ಸತತ ಕೆಲಸಮಾಡುವನು ಬಹುಜಾಗ್ರತೆಯಿಂದ
ಅವುಗಳನ್ನು ಸರಿಯಾಗಿ ಮಾಡುವನು ಲೆಕ್ಕದ
ಪ್ರಕಾರ;
30 ಇವನು ಮಣ್ಣಿನ ಮುದ್ದೆಗೆ ಆಕಾರ
ಕೊಡುವನು ತನ್ನ ಕೈಗಳಿಂದ
ಅದನ್ನು ಬಗ್ಗಿಸುವನು ತನ್ನ ಕಾಲುಗಳ
ಶಕ್ತಿಯಿಂದ
ಮನಸ್ಸಿಟ್ಟು ಒಪ್ಪೆಹಾಕಿ, ಅವಿಗೆಯನ್ನು ಹಸನು
ಮಾಡುವನು ಎಚ್ಚರಿಕೆಯಿಂದ;
31 ಇವರೆಲ್ಲರೂ ನೆಚ್ಚಿಕೊಂಡಿರುವರು
ತಮ್ಮ ತಮ್ಮ ಕೈಕೆಲಸಗಳನ್ನೇ
ಪ್ರತಿಯೊಬ್ಬನೂ ಕುಶಲನಾಗಿರುವನು
ತನ್ನ ತನ್ನ ಕಸಬಿನಲ್ಲೇ;
32 ಇವರಿಲ್ಲದೆ ಪಟ್ಟಣದ ವಾಸ ಸಾಧ್ಯವಿಲ್ಲ

ಜನರು ಅಲ್ಲಿ ಬೀಡು ಬಿಡರು, ಅಲ್ಲಿ ಜನರ
ಸುಳಿದಾಟ ಕಾಣುವುದಿಲ್ಲ;
33 ಹೀಗಿದ್ದರೂ ಕಾಣರಿವರು ಸಭಾಕೂಟಗಳ
ಉನ್ನತ ಸ್ಥಾನಗಳಲ್ಲಿ
ಕುಳಿತುಕೊಳ್ಳರವರು ನ್ಯಾಯಾಧಿಪತಿಗಳ
ಪೀಠಗಳಲ್ಲಿ
ತಿಳಿಯಲಾಗದು ಅವರಿಂದ ನ್ಯಾಯನಿರ್ಣಯದ
ವಿಧಾನ
ಕೊಡಲಾಗದು ಅವರಿಂದ ನೀತಿಬೋಧೆಗಳ ಶಿಕ್ಷಣ
ರಚಿಸಲಾಗದು ಅವರಿಂದ ಜ್ಞಾನೋಕ್ತಿಗಳ
ವಚನ.
32 ಹೀಗಿದ್ದರೂ ಇವರ ಕೈಯಲ್ಲಿದೆ
ಜಗದ್ರಚನೆಯ ನಕ್ಷೆ
ಇವರ ಕೈಕೆಲಸವೇ ಇವರ ಪ್ರಾರ್ಥನೆ !

## ಧರ್ಮಶಾಸ್ತ್ರಜ್ಞ

**39** ಹೀಗಲ್ಲ, ಮಹೋನ್ನತನ ಧರ್ಮ
ಶಾಸ್ತ್ರವನ್ನು ಮನಸ್ಸಿಟ್ಟು
ಧ್ಯಾನಿಸುವವನು:
ಪೂರ್ವಜರ ಜ್ಞಾನವನ್ನು ಅಧ್ಯಯನ
ಮಾಡುವನವನು
ಪ್ರವಾದನೆಗಳನ್ನು ಅರಿಯುವುದರಲ್ಲಿ ಸಮಯ
ಕಳೆಯುವನವನು.
2 ಈತ ಸುಪ್ರಸಿದ್ಧ ಜನರ ಹೇಳಿಕೆಗಳನ್ನು
ಕಾದಿರಿಸಿಕೊಳ್ಳುವನು
ಸಾಮತಿಗಳ ಸೂಕ್ಷ್ಮ ಚರ್ಚೆಗಳಲ್ಲಿ
ಭಾಗವಹಿಸುವನು.
3 ಒಗಟುಗಳ ಗೂಡಾರ್ಥವನ್ನು ಹುಡುಕಿ
ತೆಗೆಯುವನು
ಸಾಮತಿಗಳ ಅವ್ಯಕ್ತ ಅರ್ಥವನ್ನು
ಅರಿತವನಾಗಿರುವನು.
4 ಗಣ್ಯವ್ಯಕ್ತಿಗಳ ಮಧ್ಯೆ ಸೇವೆ ಕೈಗೊಳ್ಳುವನು
ಆಳುವವರ ಸನ್ನಿಧಿಯಲ್ಲಿ ಕಾಣಿಸಿಕೊಳ್ಳುವನು
ಪರದೇಶಗಳಲ್ಲಿಯೂ ಸಂಚಾರಮಾಡುವನು
ಮಾನವನಲ್ಲಿರುವ ಒಳಿತು–ಕೆಡುಕುಗಳನ್ನು
ಪರೀಕ್ಷಿಸುವನು.
5 ಮುಂಜಾನೆಯೇ ಆಸಕ್ತಿಯಿಂದ ಎದ್ದೇಳುವನು
ತನ್ನ ಸೃಷ್ಟಿಕರ್ತ ದೇವನಿಗೆ ಮೊರೆಯಿಡುವನು
ಮಹೋನ್ನತನ ಸನ್ನಿಧಿಯಲಿ ವಿಜ್ಞಾಪಿಸಿ,

ಬಾಯ್ದೆರೆದು ಬೇಡಿಕೊಳ್ಳುವನು
ತನ್ನ ಪಾಪಗಳಿಗೆ ಆತನಲಿ ಕ್ಷಮೆಯನ್ನು
ಯಾಚಿಸುವನು.
6 ಸರ್ವೋಚ್ಚ ಸರ್ವೇಶ್ವರನ ಚಿತ್ತವಾದರೆ,
ತುಂಬುವುದವನಲ್ಲಿ ತಿಳುವಳಿಕೆಯ
ಚೈತನ್ಯವು
ಸುರಿಸುವನವನು ಸುಜ್ಞಾನದ ಮಾತುಗಳನು
ಪ್ರಾರ್ಥನೆಯ ಸಮಯದಲ್ಲಿ ಆ
ಸರ್ವೇಶ್ವರನಿಗೆ
ಮಾಡುವನು ಕೃತಜ್ಞತಾಸ್ತುತಿಯನ್ನು.
7 ಸರಿಯಾಗಿ ಸಾಗಿಸುವನು
ತನ್ನಾಲೋಚನೆಗಳನ್ನು
ಮನನ ಮಾಡುವನು ಗುಪ್ತವಿಚಾರಗಳನ್ನು.
8 ತಾನು ಕಲಿತುಕೊಂಡ ಶಿಕ್ಷಣವನ್ನು
ಪ್ರಕಟಿಸುವನು
ಸರ್ವೇಶ್ವರನ ಒಡಂಬಡಿಕೆಯ
ಧರ್ಮಶಾಸ್ತ್ರದಲ್ಲಿ ಹೆಚ್ಚಳಪಡುವನು.
9 ಅನೇಕರು ಹೊಗಳುವರು ಅವನ
ಜ್ಞಾನವನ್ನು
ಅದು ಅಳಿಸಿಹೋಗದು ಲೋಕಾಂತ್ಯದವರೆಗು.
ಮರೆತುಹೋಗದು ಅವನ ಸ್ಮರಣೆ
ಉಳಿಯುವುದು ಅವನ ಹೆಸರು
ತಲತಲಾಂತರದವರೆಗು.
10 ಜನಾಂಗಗಳು ಅವನ ಜ್ಞಾನವನ್ನು
ಘೋಷಿಸುವರು
ಇಸ್ರಯೇಲ್ ಸಭೆಯು ಅವನನ್ನು
ಹೊಗಳುವುದು.
11 ಹೀಗೆ ಮುಂದುವರೆದರೆ ಸಾವಿರ ಜನಕ್ಕಿಂತ
ಕೀರ್ತಿಶ್ರೇಷ್ಠನಾಗುವನು
ಸತ್ತರೆ ಇನ್ನೂ ಹೆಸರುವಾಸಿಯಾಗುವನು.

**ಸರ್ವೇಶ್ವರನ ಸ್ತುತಿ**

12 ನನ್ನ ಆಲೋಚನೆಗಳನ್ನು ಇನ್ನೂ ಹೇಳುವೆ
ಪೂರ್ಣಚಂದ್ರನಂತೆ ನಾ ತುಂಬಿಕೊಂಡಿರುವೆ.
13 ಭಕ್ತಿಯುಳ್ಳ ಮಕ್ಕಳೇ, ನನ್ನ ಮಾತನ್ನು ಕೇಳಿರಿ
ನದಿಯ ದಂಡೆಯಲ್ಲಿ ಬೆಳೆಯುವ
ಗುಲಾಬಿಗಿಡದಂತೆ ವಿಕಾಸಗೊಳ್ಳಿರಿ.
14 ಧೂಪದ ಸುವಾಸನೆಯನ್ನು ಬೀರಿರಿ
ನೈದಿಲೆಯಂತೆ ಹೂ ಬಿಡಿರಿ
ಸುತ್ತಲೂ ಸುಗಂಧವನ್ನು ಹರಡಿರಿ,

ಸ್ತುತಿಗೀತೆ ಹಾಡಿರಿ
ಸರ್ವೇಶ್ವರನನ್ನು ಆತನ ಎಲ್ಲಾ
ಕಾರ್ಯಗಳಿಗಾಗಿ ಕೊಂಡಾಡಿರಿ.
15 ಕೀರ್ತನೆಗಳಿಂದ, ಕಿನ್ನರಿಗಳಿಂದ
ಆತನ ಸ್ತುತಿಗೈಯಿರಿ:
ಆತನ ನಾಮವನ್ನು ಈ ಪರಿ ಘನಪಡಿಸಿರಿ:
16 ಅತ್ಯುತ್ತಮವಾಗಿದೆ ಸರ್ವೇಶ್ವರನ
ಕಾರ್ಯಗಳೆಲ್ಲ
ಸಕಾಲದಲಿ ನೆರವೇರುವುವು ಆತನ
ಆಜ್ಞೆಗಳೆಲ್ಲ.
17 ಹೇಳದಿರಲಿ ಯಾರೂ 'ಇದು ಏನು?
ಅದು ಏಕೆ?' ಎಂದು
ಸಕಾಲದಲಿ ತಿಳಿಯುವುದು ಅವುಗಳ
ಫಲಿತಾಂಶವು.
ಜಲವು ಕುಪ್ಪೆಯಾಗಿ ನಿಂತಿತು ಆತನ
ಅಪ್ಪಣೆಗೆ
ಜಲಾಶಯಗಳು ನಿಂತವು ಕೇವಲ ಆತನ
ಬಾಯಿಮಾತಿಗೆ.
18 ಆತನು ಮೆಚ್ಚುವುದೆಲ್ಲವೂ ನಡೆಯುವುದು
ಆತನ ಅಪ್ಪಣೆಯ ಮೇರೆಗೆ
ತಡೆಯೊಡ್ಡುವವನಾರೂ ಇಲ್ಲ
ಆತನ ರಕ್ಷಣಾಕಾರ್ಯಕ್ಕೆ.
19 ಎಲ್ಲಾ ಜೀವಿಗಳ ಕಾರ್ಯಕಲಾಪಗಳು
ಆತನ ಎದುರಿನಲ್ಲಿವೆ
ಯಾವುದೂ ಮರೆಯಾಗಿರಲು ಸಾಧ್ಯವಿಲ್ಲ
ಆತನ ಕಣ್ಣಿಗೆ.
20 ಆತನ ದೃಷ್ಟಿ ಹರಿಯುವುದು
ಯುಗಯುಗಾಂತರಕ್ಕೆ
ಆಶ್ಚರ್ಯವಾದುದೇನೂ ಇಲ್ಲ
ಆತನ ನಯನಕ್ಕೆ.
21 ಯಾರೂ ಅನ್ನದಿರಲಿ 'ಇದು ಏನು?
ಅದು ಏಕೆ?' ಎಂದು
ಅದರದರ ಉಪಯೋಗಕ್ಕಾಗಿಯೇ
ನಿರ್ಮಿಸಲಾಗಿದೆ ಒಂದೊಂದು ವಸ್ತುವು.
22 ಆತನ ಆಶೀರ್ವಾದ ಆವರಿಸಿತು
ಒಣಭೂಮಿಯನ್ನು ಹೊಳೆಯಂತೆ
ಅದನ್ನು ತೋಯಿಸಿತು ಮಹಾಪೂರದಂತೆ.
23 ಆತ ನೀರನ್ನು ಉಪ್ಪು ನೀರನ್ನಾಗಿ
ಮಾರ್ಪಡಿಸಿದಂತೆ
ಆತನ ಕೋಪ ಅನ್ಯರಿಗೆ ತಗಲುವುದು

ಪೂರ್ವಾರ್ಜಿತ ಆಸ್ತಿಯಂತೆ.
24 ಸಜ್ಜನರಿಗೆ ಆತನ ಮಾರ್ಗಗಳು
ಸರಾಗವಾಗಿವೆ
ಆದರೆ ದುರ್ಜನರಿಗೆ ಅವು ತೊಡಕಾಗಿವೆ.
25 ಆದಿಯಿಂದ ಒಳ್ಳೆಯವು ನಿರ್ಮಿತವಾದವು
ಒಳ್ಳೆಯವರಿಗೆ
ಅಂತೆಯೇ ಕೆಟ್ಟವುಗಳು ನಿರ್ಮಿತವಾದವು
ಪಾಪಿಗಳಿಗೆ.
26 ನೀರು, ಬೆಂಕಿ, ಕಬ್ಬಿಣ, ಉಪ್ಪು
ಗೋದಿ ಹಿಟ್ಟು,
ಜೇನುತುಪ್ಪ, ಹಾಲು, ದ್ರಾಕ್ಷಾರಸ, ಎಣ್ಣೆ,
ಬಟ್ಟೆಗಳು
ಇವು ಮಾನವ ಜೀವನಕ್ಕೆ ಎಲ್ಲಕ್ಕಿಂತ
ಮುಖ್ಯವಾದವುಗಳು.
27 ಈ ವಸ್ತುಗಳೆಲ್ಲ ಇರುವುದು ಭಕ್ತರ ಹಿತಕ್ಕಾಗಿ
ಪಾಪಿಗಳಿಗೆ ಅವು ಪರಿಣಮಿಸುವುವು
ಕೆಡುಕಾಗಿ.
28 ಮುಯ್ಯಿ ತೀರಿಸುವುದಕ್ಕೆಂದು ನಿರ್ಮಿತವಾಗಿವೆ
ಕೆಲವು ಚಂಡಮಾರುತಗಳು
ಪ್ರಕೋಪಗೊಂಡಾಗ ತೀಕ್ಷ್ಣವಾಗಿರುವುವು
ಅವುಗಳ ಭಾದೆಗಳು
ತಮ್ಮ ಬಲವನ್ನು ತೋರಿಸುವುವು
ಪರಿಸಮಾಪ್ತಿಯ ಕಾಲದೊಳು
ಹೀಗೆ ತಣಿಸುವುವು ಅವುಗಳನ್ನು
ನಿರ್ಮಿಸಿದಾತನ ಕೋಪವನ್ನು.
29 ಬೆಂಕಿ, ಆಲಿಕಲ್ಲು, ಕ್ಷಾಮ, ಸಾವು
ಇವು ಮುಯ್ಯಿ ತೀರಿಸಲೆಂದೇ ನಿರ್ಮಿತವಾದವು.
30 ಕಾಡುಮೃಗಗಳ ಹಲ್ಲುಗಳು, ಚೇಳು,
ಹೆಬ್ಬಾವುಗಳು ಆದುವು ಅದಕ್ಕಾಗಿಯೆ
ಅಧರ್ಮಿಗಳು ನಾಶವಾಗುವಂತೆ ಅವರನ್ನು
ಶಿಕ್ಷಿಸುವ ಕತ್ತಿಯೂ ಇದೆ.
31 ಅವು ಆನಂದಗೊಳ್ಳುವುವು ಆತನ
ಅಪ್ಪಣೆಯಲ್ಲಿ
ಅಗತ್ಯಬಿದ್ದರೆ ಒದಗಲು ಸಿದ್ಧವಾಗಿವೆ
ಈ ಲೋಕದಲ್ಲಿ
ಆತನ ಮಾತನ್ನು ಅವು ಮೀರವು
ತಕ್ಕ ಸಮಯ ಬಂದಲ್ಲಿ.
32 ಇದನ್ನೆಲ್ಲ ಆಲೋಚನೆ ಮಾಡಿ ಬರೆದಿಟ್ಟೆ
ಮೊದಲಿನಿಂದಲೇ ನಾನು ನಿಶ್ಚಯಿಸಿದಂತೆ.
33 ಸರ್ವೇಶ್ವರನ ಕಾರ್ಯಗಳೆಲ್ಲವು ಒಳ್ಳೆಯವು

ತಕ್ಕಕಾಲದಲ್ಲಿ ಒದಗಿಸುವನಾತ
ಅಗತ್ಯವಿದ್ದವುಗಳನ್ನು.
ಯಾರೂ ಹೇಳಲಾರರು 'ಇದು ಅದಕ್ಕಿಂತ
ಕೆಟ್ಟದು' ಎಂದು
ಸೂಕ್ತಸಮಯದಲ್ಲಿ ಸಮರ್ಥನೆಗೊಳ್ಳುವುವು
ಅವು ಸರಿಯಾದವುಗಳೆಂದು.
34 ಈಗ ಹಾಡಿರಿ ನಿಮ್ಮ ಹೃದಯದಿಂದಲೂ
ಬಾಯಿಂದಲೂ ಸ್ತುತಿಗೀತೆಯನ್ನು;
ಕೀರ್ತಿಸಿರಿ ಸರ್ವೇಶ್ವರನ ನಾಮವನ್ನು.

### ಮಾನವನ ದುರವಸ್ಥೆ

**40** ತಾಯಗರ್ಭದಿಂದ ಹೊರಬಂದ
ದಿನದಿಂದ, ಭೂಮಾತೆಯಲ್ಲಿ
ಅಡಕವಾಗುವ ತನಕ
ಆದಾಮನ ಮಕ್ಕಳ ಮೇಲೆ ಇಡಲಾಗಿದೆ
ಒಂದು ಭಾರವಾದ ನೊಗ
ಪ್ರತಿಮನುಷ್ಯನಿಗಾಗಿ ಉಂಟುಮಾಡಲಾಗಿದೆ
ತೀವ್ರವಾದ ಕಷ್ಟಸಂಕಟ.
2 ಮನಸ್ಸು ಕದಲುತ್ತದೆ ಮುಂಬರುವ
ಘಟನೆಗಳ ನಿರೀಕ್ಷೆಯಿಂದ
ಮರಣದಿನದ ಭಯದಾಲೋಚನೆಯಿಂದ.
3 ಮಹಿಮಾಸನದಲಿ ಕುಳಿತಿರುವವನಿಂದ
ತನ್ನನ್ನೆ ತಗ್ಗಿಸಿಕೊಂಡು ಬೂದಿಮಣ್ಣಿನಲಿ
ಕುಳಿತಿರುವವನ ತನಕ.
4 ಕೆನ್ನೀಲಿ ವಸ್ತ್ರ ಮುಕುಟಧಾರಿಯಾದವನಿಂದ
ನಾರಿನ ನಿಲುವಂಗಿಯನು ಧರಿಸಿರುವವನ ತನಕ
ಎಲ್ಲರನ್ನು ಆವರಿಸಿದೆ ಈ ಭಯ
5 ಕೋಪ, ಹೊಟ್ಟೆಕಿಚ್ಚು, ಅಸಮಾಧಾನ,
ತೊಂದರೆತಾಪತ್ರಯಗಳು
ಮರಣಭಯ, ಕೋಪ, ಜಗಳ–ಇವೆಲ್ಲವು
ಪ್ರಾಪ್ತವಾಗುವುವು.
ರಾತ್ರಿಕಾಲದೊಳು, ಹಾಸಿಗೆಯಲ್ಲಿ
ಮಲಗಿರುವಾಗಲು
ಉದ್ಭವಿಸುವುವು ಹೊಸ ಹೊಸ ಚಿಂತೆ
ಪೇಚಾಟಗಳು.
6 ಅವನಿಗೆ ವಿಶ್ರಾಂತಿಯೇ ಇಲ್ಲ, ಇದ್ದರೂ
ಅತ್ಯಲ್ಪವೇ
ಅವನ ಮನಸ್ಸಿಗೆ ಕನಸುಗಳಿಂದಲೂ
ಕಳವಳವೇ.

ನಿದ್ರೆಮಾಡುವಾಗ ಬಾಸವಾಗುವುದು ದಿನದಲಿ
ಕಾವಲಿದ್ದಂತೆ
ಹಾಗು ಯುದ್ಧದಲ್ಲಿ ತಪ್ಪಿಸಿಕೊಂಡು
ಓಡಿಹೋಗುವ ಯೋಧನಂತೆ.
7 ಬಿಡುಗಡೆಯಾದಂತಾಗುವುದರಲ್ಲೇ
ಎಚ್ಚರಗೊಳ್ಳುವನು
ಅವನಿಗೇ ಆಶ್ಚರ್ಯ, ಭಯವೆಲ್ಲಾ
ಭ್ರಾಂತಿಯೆಂದು !
8 ಮನುಷ್ಯನಿಂದ ಪಶುಪ್ರಾಣಿಗಳವರೆಗೆ
ಸಕಲ ಜೀವಿಗಳಿಗೂ ಇದೇ ಗತಿ
ಆದರೆ ಪಾಪಿಗಳಿಗೆ ಏಳರಷ್ಟು ದುರ್ಗತಿ !
9–10 ಮರಣ, ರಕ್ತಪಾತ, ಜಗಳ, ಖಡ್ಗ,
ಅನಾಹುತ,
ಬರ, ಸಂಕಟ, ದಂಡನೆ – ಇವೆಲ್ಲ
ಕೆಡುಕರಿಗೆಂದು ನಿರ್ಮಿತ
ಜಲಪ್ರಳಯ ಬಂದುದೇ ಇಂಥವರ ದೆಸೆಯಿಂದ.
11 ಮಣ್ಣಿನಿಂದಾದುದೆಲ್ಲ ಹಿಂದಿರುಗಬೇಕು
ಮಣ್ಣಿಗೆ
ನೀರಿನವುಗಳು ಮರಳಬೇಕು ನೀರಿಗೆ.

**ಕೆಡುಕಿನ ಪರಿಣಾಮ**

12 ಲಂಚಕೋರತನ, ಅನ್ಯಾಯ–ಇವುಗಳೆಲ್ಲ
ಅಳಿದುಹೋಗುವುವು
ಎಂದೆಂದಿಗೂ ನೆಲೆಯಾಗಿರುವುದು
ಪ್ರಾಮಾಣಿಕತೆಯು.
13 ಅನ್ಯಾಯಗಾರನ ಆಸ್ತಿ ಬತ್ತಿಹೋಗುವುದು
ನದಿಯಂತೆ
ಅದೃಶ್ಯವಾಗುವುದು ಮಳೆಯ ಮುಂಚೆ
ಬಡಿಯುವ ಸಿಡಿಲಿನಂತೆ.
14 ಧಾರಾಳವಾಗಿ ನೀಡುವವನು
ಹರ್ಷಗೊಳ್ಳುವನು
ದುರ್ಜನನು ಸಂಪೂರ್ಣವಾಗಿ
ಸೋತು ಹೋಗುವನು.
15 ಕೊಂಬೆಗಳು ಹೆಚ್ಚಾಗುವುದಿಲ್ಲ ದುರ್ಜನರ
ಸಂತತಿಗೆ
ಬರಡುಬೇರುಗಳಂತಿರುವರವರು ಬರೀ
ಬಂಡೆಯ ಮೇಲೆ.
16 ಜೊಂಡುಹುಲ್ಲು ನೀರಿನಲ್ಲೇ, ನದಿಯ
ದಡದಲ್ಲೇ ಬೆಳೆಯುತ್ತದೆ
ಆದರೆ ಎಲ್ಲ ಹುಲ್ಲುಗರಿಕೆಗಿಂತ ಮುಂಚಿತವಾಗಿ

ಕೀಳಲ್ಪಡುತ್ತದೆ.
17 ದಯೆಯು ಭಾಗ್ಯವಾದ ಉದ್ಯಾನವನ
ದಾನಧರ್ಮ ಎಂದೆಂದಿಗೂ ಶಾಶ್ವತ.

**ಜೀವನದ ಸ್ವಾರಸ್ಯ**

18 ದುಡಿವವನ ಹಾಗು ಉಂಡು
ತೃಪ್ತನಾಗಿರುವವನ ಜೀವನ ಮಧುರ
ನಿಧಿ ಕಂಡುಕೊಂಡವನ ಜೀವನ
ಇವೆರಡಕ್ಕಿಂತಲೂ ಉತ್ತಮ.
19 ಸಂತಾನಪ್ರಾಪ್ತಿಯಿಂದ, ನಗರ
ನಿರ್ಮಾಣದಿಂದ
ಸ್ಥಿರವಾಗಿಸುವರು ತಮ್ಮ ನಾಮವನು
ನಿರ್ದೋಷಿಯಾದ ಮಡದಿಯೋ
ಉತ್ತಮ ಇವೆರಡಕ್ಕಿಂತಲು.
20 ಮಧುಪಾನ ಮತ್ತು ಸಂಗೀತ ಮನಸ್ಸಿಗೆ
ಆಹ್ಲಾದಕರ
ಜ್ಞಾನ ಪ್ರೇಮ ಇವೆರಡಕ್ಕಿಂತಲು ಉತ್ತಮ.
21 ಕೊಳಲು ಮತ್ತು ತಂತಿವಾದ್ಯ ಸೂಸುತ್ತವೆ
ಇಂಪಾದ ನಾದ
ಮಧುರವಾದ ನಾಲಗೆ ಇವೆರಡಕ್ಕಿಂತಲೂ
ಮೋದ.
22 ನಿನ್ನ ಕಣ್ಣು ಆಶಿಸುತ್ತದೆ ಅಂದಚಂದವನು
ವಸಂತ ಪಚ್ಚೆ ಇವೆರಡಕ್ಕಿಂತಲೂ ಮೋಜು.
23 ಸ್ನೇಹಿತನಾಗಲೀ ಗೆಳೆಯನಾಗಲೀ
ಸಂಧಿಸುವುದು ಸಂತೋಷಕರ
ಗಂಡನೊಂದಿಗೆ ಹೆಂಡತಿಯಿರುವುದು
ಇವೆರಡಕ್ಕಿಂತಲೂ ಮಧುರ.
24 ಸಹೋದರ ಮತ್ತು ಸಹಾಯ ಆಪತ್ಕಾಲಕ್ಕೆ
ಹಿತಕರ
ಇವೆರಡಕ್ಕಿಂತಲೂ ದಾನಧರ್ಮ ಕ್ಷೇಮಕರ.
25 ಬೆಳ್ಳಿಬಂಗಾರದಿಂದ ಬಾಳು ಭದ್ರ
ಒಳ್ಳೆಯ ಆಲೋಚನೆ ಇವೆರಡಕ್ಕಿಂತಲು
ಸುಸ್ಥಿರ.
26 ಮನಸ್ಸನ್ನು ಮೇಲೆತ್ತುತ್ತವೆ ಐಶ್ವರ್ಯ ಮತ್ತು ಶಕ್ತಿ
ಇವೆರಡಕ್ಕಿಂತಲೂ ಮೇಲು ದೇವರಲ್ಲಿ
ಭಯಭಕ್ತಿ.
ದೇವರ ಭಕ್ತಿಯಲ್ಲಿ ಕೊರತೆಯೆಂಬುದಿಲ್ಲ
ಸಹಾಯ ಹುಡುಕುವ ಅವಶ್ಯಕತೆಯಿಲ್ಲ.
27 ದೇವರಲ್ಲಿ ಭಯಭಕ್ತಿಯು ಭಾಗ್ಯವಾದ
ಉದ್ಯಾನವನ

ಅದು ಭಕ್ತನನ್ನು ಆವರಿಸುವ ಉತ್ತಮ
ಭೂಷಣ.

### ಭಿಕ್ಷೆ

28 ಮಗನೇ, ಬೇಡ ನಿನಗೆ ತಿರುಕರ ಬಾಳು
ತಿರುಪೆಗಿಂತ ಮರಣವೇ ಲೇಸು.
29 ಮತ್ತೊಬ್ಬನ ಊಟದ ಮೇಲೆ ಕಣ್ಣಿಡುವವನ
ಬಾಳು ಜೀವನವಲ್ಲ
ಇಂಥವನ ಮನ ಹೆರವರ ಅನ್ನದಿಂದ ಮಲಿನ.
ಆದರೆ ಜ್ಞಾನಿ ಹಾಗು ಸುಶಿಕ್ಷಿತನು ಬದುಕುವನು
ಎಚ್ಚರಿಕೆಯಿಂದ.
30 ನಾಚಿಕೆಯಿಲ್ಲದವನ ಬಾಯಲ್ಲಿ
ತಿರುಪೆಯೂ ಸಿಹಿ
ಆದರೆ ಅವನ ಒಡಲಲ್ಲೆಲ್ಲಾ ಬೆಂಕಿಯ ಉರಿ.

### ಮರಣ

**41** ತನ್ನ ಆಸ್ತಿಪಾಸ್ತಿಯಲ್ಲಿ ನಿಶ್ಚಿಂತೆ
ಯಿಂದಿರುವವನಿಗೆ
ತಳಮಳವಿಲ್ಲದೆ ಎಲ್ಲದರಲ್ಲು
ಸಮೃದ್ಧವಾಗಿರುವವರಿಗೆ
ಇನ್ನೂ ತಿಂದು ಕುಡಿಯಲು ಆಸಕ್ತಿಯುಳ್ಳವನಿಗೆ
ಮರಣವೇ, ನೆನೆಯಲು ನೀನೆಷ್ಟು
ಕಹಿಯಾಗಿರುವೆ !
2 ಆದರೆ ಮರಣವೇ, ನಿನ್ನಾಗಮನದ ತೀರ್ಪು
ಸುಸ್ವಾಗತವೇ:
ಗತಿಹೀನರಿಗೆ, ಬಲಗುಂದಿದವರಿಗೆ, ವೃದ್ಧರಿಗೆ,
ಎಲ್ಲದರಲು ತೊಂದರೆ ತಾಪತ್ರಯಗಳಿಗೆ
ಈಡಾಗಿರುವವರಿಗೆ,
ತೀವ್ರ ಅಸಮಾಧಾನದಿಂದಿರುವವರಿಗೆ
ತಾಳ್ಮೆಗೆಟ್ಟವರಿಗೆ.
3 ಮರಣತೀರ್ಪಿಗೆ ನೀನು ಹೆದರದಿರು
ನಿನ್ನ ಹಿಂದೆ ಬಂದವರನು, ಮುಂದೆ
ಬರಲಿರುವವರನು ಗಮನಿಸು.
4 ಎಲ್ಲಾ ಜೀವಿಗಳಿಗೆ ಸರ್ವೇಶ್ವರನಿತ್ತಿರುವ
ತೀರ್ಪು ಅದು
ಅದನ್ನು ನೀನು ನಿರಾಕರಿಸುವುದೆಂತು?
ವರ್ಷಹತ್ತಾಗಲಿ, ನೂರಾಗಲಿ, ಸಾವಿರವಾಗಲಿ
ನಿನ್ನ ಜೀವನದಾ ವಿಚಾರವೇ ಇರದು
ಪಾತಾಳದಲಿ.

### ಪಾಪಾತ್ಮರ ಸಂತತಿ

5 ಪಾಪಾತ್ಮರ ಮಕ್ಕಳು ಹೇಸತಕ್ಕವರು
ಅವರು ದುರ್ಜನರ ಸಹವಾಸದಲ್ಲೇ
ಬೆಳೆದವರು.
6 ಪಾಪಾತ್ಮರ ಮಕ್ಕಳ ಆಸ್ತಿ ಹಾಳಾಗುವುದು
ಅವರ ಪೀಳಿಗೆ ಯಾವಾಗಲು ಅವಮಾನಕ್ಕೆ
ಗುರಿಯಾಗುವುದು.
7 ಅಧರ್ಮಿಯಾದ ತಂದೆಯನ್ನು
ಮಕ್ಕಳು ದೂಷಿಸುವಂಥವರೇ
ಏಕೆಂದರೆ ಅವರು ಅವಮಾನ
ಸಹಿಸಬೇಕಾಗುವುದು ಅವನಿಂದಲೇ.
8 ಮಹೋನ್ನತ ದೇವರ ಧರ್ಮಶಾಸ್ತ್ರವನ್ನು
ತ್ಯಜಿಸಿದ ದುರ್ಜನರೇ,
ಅಯ್ಯೋ, ಧಿಕ್ಕಾರ ನಿಮಗೆ !
9 ನೀವು ಹುಟ್ಟಿದರೆ ಶಾಪಕ್ಕಾಗಿ ಹುಟ್ಟುತ್ತೀರಿ
ಸತ್ತರೆ ಪಾಪದ ಪಾಲಿಗಾಗಿ ಸಾಯುತ್ತೀರಿ.
10 ಮಣ್ಣಿನಿಂದಾದ ವಸ್ತುಗಳು ತಿರುಗಿ ಸೇರುವುವು
ಮಣ್ಣಿಗೆ
ಅದರಂತೆಯೇ ದುರ್ಜನರು ಶಾಪದಿಂದ
ಸೇರುವರು ನಾಶನಕ್ಕೆ.
11 ಜನರ ಗೋಳಾಟ ಅವರ ದೇಹಕ್ಕಾಗಿ
ಪಾಪಾತ್ಮರ ಹೆಸರು ಹೋಗುವುದು
ಕಣ್ಮರೆಯಾಗಿ.

### ಒಳ್ಳೆಯ ಹೆಸರು

12 ಲಕ್ಷ್ಯವಿರಲಿ ನಿನ್ನ ಹೆಸರಿನತ್ತ !
ಬಂಗಾರದ ಸಾವಿರಗಟ್ಟಿಗಳಿಗಿಂತ ಅದು
ನೆಲೆಯಾಗಿ ಮುಂದುವರೆವುದು ಹೆಚ್ಚುಕಾಲ.
13 ಒಳ್ಳೆಯ ಬಾಳಿನ ದಿನಗಳು
ಎಣಿಕೆಯಾಗುವುವು
ಆದರೆ ಒಳ್ಳೆಯ ಹೆಸರು ಶಾಶ್ವತವಾಗಿರುವುದು.

### ನಾಚಿಕೆ

14 ಮಕ್ಕಳೇ, ಶಿಕ್ಷಣವನ್ನು ಕಾಪಾಡಿಕೊಳ್ಳಿ
ಶಾಂತಿಯಿಂದ
ಏನು ಲಾಭ ಅಡಗಿಸಿಟ್ಟ ಜ್ಞಾನದಿಂದ,
ಹುದುಗಿರುವ ನಿಧಿಯಿಂದ?
15 ತನ್ನ ಜ್ಞಾನವನು
ಮುಚ್ಚಿಟ್ಟುಕೊಳ್ಳುವವನಿಗಿಂತಲೂ

ತನ್ನ ಅಜ್ಞಾನವನು
ಮುಚ್ಚಿಟ್ಟುಕೊಳ್ಳುವವನೇ ಮೇಲು.
16 ಆದುದರಿಂದ ನನ್ನ ಮಾತಿಗೆ ಮನ್ನಣೆ
ಕೊಡಬಲ್ಲಿರಾ?
ಎಲ್ಲಾ ಬಗೆಯ ನಾಚಿಕೆಯನ್ನು
ಅಡಗಿಸಿಡುವುದು ಒಳಿತಲ್ಲ:
ನಿಜವಾಗಿ ಎಲ್ಲಾ ಸಂಗತಿಗಳು ಎಲ್ಲರಿಗೂ
ಸಮ್ಮತವಾಗಿರುವುದಿಲ್ಲ.
17 ನಾಚಿಕೆಪಡು, ಕೆಟ್ಟನಡತೆಗಾಗಿ
ತಂದೆತಾಯಿಗಳ ಮುಂದೆ
ಆಡಿದ ಸುಳ್ಳಿಗಾಗಿ ಅರಸನ ಹಾಗು ಮಹಾತ್ಮರ
ಮುಂದೆ;
18 ಮಾಡಿದ ತಪ್ಪಿಗಾಗಿ ನ್ಯಾಯಾಧಿಪತಿಯ
ಹಾಗು ಅಧಿಕಾರಿಗಳ ಮುಂದೆ
ಎಸಗಿದ ಅಧರ್ಮಕ್ಕಾಗಿ ದೇವಸಭೆಯ ಹಾಗು
ಜನಕೂಟದ ಮುಂದೆ.
19 ನಾಚಿಕೆಪಡು, ಅನ್ಯಾಯದ ವ್ಯವಹಾರಕ್ಕಾಗಿ
ಪಾಲುಗಾರನ ಹಾಗು ಸ್ನೇಹಿತನ ಮುಂದೆ.
20 ನಾಚಿಕೆಪಡು ಕಳ್ಳತನಕ್ಕಾಗಿ ನೀನು ವಾಸಿಸುವ
ಸ್ಥಳದ ಹಾಗು ಸತ್ಯ ಒಡಂಬಡಿಕೆಯ
ನಿಮಿತ್ತ.
ನಾಚಿಕೆಪಡು ಊಟಕ್ಕೆ ಕುಳಿತಿರುವಾಗ
ಮೊಳಕ್ಕೆ ಮೇಲೆ ಆತುಕೊಂಡುದಕ್ಕಾಗಿ.
21 ನಾಚಿಕೆಪಡು ಕೊಡುವ ಮತ್ತು ಕೊಳ್ಳುವ
ವಿಷಯದಲ್ಲಿ ಮಾಡಿದ ಬಂಡತನಕ್ಕಾಗಿ.
ವಂದಿಸಬೇಕಾದವರ ಮುಂದೆ
ಮೌನತಾಳಿದುದಕ್ಕಾಗಿ.
22 ನಾಚಿಕೆಪಡು ಸೂಳೆಯರ ಕಡೆಗೆ ದೃಷ್ಟಿ
ಹಾಯಿಸಿದ್ದಕ್ಕಾಗಿ.
ನಿನ್ನ ಬಳಗದವನಿಗೆ
ಮುಖತಪ್ಪಿಸಿಕೊಂಡುದಕ್ಕಾಗಿ.
23 ನಾಚಿಕೆಪಡು, ನೆರೆಯವರ ಕಾಣಿಕೆಯನ್ನಾಗಲಿ,
ಅದರ ಭಾಗವನ್ನಾಗಲೀ ತೆಗೆದಿಟ್ಟದ್ದಕ್ಕಾಗಿ.
ಮದುವೆಯಾದ ಸ್ತ್ರೀಯನ್ನು
ದಿಟ್ಟಿಸಿ ನೋಡಿದ್ದಕ್ಕಾಗಿ.
24–25 ನಾಚಿಕೆಪಡು, ಒಬ್ಬನ ದಾಸಿಯೊಂದಿಗೆ
ಸಹವಾಸ ಮಾಡಿದ್ದಕ್ಕಾಗಿ,
ಸ್ನೇಹಿತರನ್ನು ಬಯ್ದು ಹಂಗಿಸಿದ್ದಕ್ಕಾಗಿ.
ಒಬ್ಬನ ದಾಸಿಯ ಹಾಸಿಗೆಯ ಬಳಿ
ಸುಳಿಯಬೇಡ

ಸ್ನೇಹಿತನಿಗೆ ಕೊಟ್ಟ ಮೇಲೆ ಹಂಗಿಸಬೇಡ.
26 ನಾಚಿಕೆಪಡು, ಕಿವಿಯಿಂದ ಕೇಳಿದ್ದನು,
ಬಾಯಿಂದ ಹೇಳಿದ್ದಕ್ಕಾಗಿ
ಗುಟ್ಟನು ರಟ್ಟು ಮಾಡಿದ್ದಕ್ಕಾಗಿ.
27 ನಿಜವಾಗಿಯೂ ಲಜ್ಜಾವಂತನಾಗಿರುವೆ ಹೀಗೆ
ನಡೆದಲ್ಲಿ
ಆಗ ನಿನಗೆ ಕರುಣೆ ದೊರಕುವುದು ಎಲ್ಲರ
ದೃಷ್ಟಿಯಲ್ಲಿ.

**42** ಈ ಕೆಳಗಿನ ವಿಷಯಗಳನ್ನು ಕುರಿತು
ನಾಚಿಕೊಳ್ಳಬೇಡ
ಯಾರ ದಾಕ್ಷಿಣ್ಯಕ್ಕೋಸ್ಕರವೂ ಪಾಪದಲ್ಲಿ
ಬೀಳಬೇಡ:
2 ಮಹೋನ್ನತನ ಧರ್ಮಶಾಸ್ತ್ರ ಹಾಗು ಆತನ
ಒಡಂಬಡಿಕೆ ಕುರಿತು
ದುರ್ಜನರಿಗೆ ಕೊಡಬೇಕಾದ ನ್ಯಾಯವಾದ
ತೀರ್ಪು ಕುರಿತು;
3 ಪಾಲುಗಾರನಿಂದ, ಹಾದಿಕಾರನಿಂದ
ತೆಗೆದುಕೊಳ್ಳಬೇಕಾದ ಲೆಕ್ಕ ಕುರಿತು
ಸ್ನೇಹಿತರ ಆಸ್ತಿಯಿಂದ ಕೊಡಬೇಕಾದ ಪಾಲು
ಕುರಿತು;
4 ನ್ಯಾಯವಾದ ಬಟ್ಟು, ತಕ್ಕಡಿ ಕುರಿತು
ಬಹಳವಾಗಲಿ, ಅಲ್ಪವಾಗಲಿ, ಬರುವ
ಸಂಪಾದನೆ ಕುರಿತು;
5 ವ್ಯಾಪಾರದಿಂದ ಬರುವಂಥ ನ್ಯಾಯವಾದ
ಆದಾಯ ಕುರಿತು
ಮಕ್ಕಳನ್ನು ಶಿಸ್ತಿನ ಪ್ರಕಾರ ತಿದ್ದುವುದನ್ನು
ಕುರಿತು
ತಪ್ಪಿತಸ್ಥ ಆಳಿಗೆ ರಕ್ತ ಬರುವಷ್ಟು
ಹೊಡೆಯುವುದನ್ನು ಕುರಿತು.
6 ದುಷ್ಟ ಹೆಂಡತಿಯಿದ್ದರೆ, ಬೀಗ ಹಾಕುವುದು
ಒಳಿತು,
ಬಹಳ ಕೈಗಳು ಆಡುತ್ತಿದ್ದರೆ, ಮುಚ್ಚಿಡುವುದು
ಮೇಲು.
7 ನೀನು ಕೊಡುವುದನ್ನು ಅಂಕೆತೂಕಗಳಿಂದ
ಕೊಡು;
ಕೊಡುವುದನ್ನೂ ತೆಗೆದುಕೊಳ್ಳುವುದನ್ನೂ
ಬರೆದಿಡು.
8 ಬುದ್ಧಿ ಹೇಳಲು ನಾಚಬೇಡ ದಡ್ಡನಿಗೆ,

ಮೂರ್ಖನಿಗೆ
ಯುವಕನೊಂದಿಗೆ ವಾದಿಸುವ
ಹಣ್ಣುಮುದುಕನಿಗೆ.
ಆಗ ನೀನು ಸುಶಿಕ್ಷಿತನಾಗುವೆ
ಸಕಲಮಾನವರಿಗೂ ಸಮ್ಮತನಾಗುವೆ.

**ಮಗಳ ಬಗ್ಗೆ ತಂದೆಯ ಚಿಂತೆ**

9 ಮಗಳಿಗೆ ಗೊತ್ತಿಲ್ಲದೆಯೆ ತಂದೆ
ನಿದ್ದೆಗೆಡುತ್ತಾನೆ:
ಆಕೆಯ ಚಿಂತೆ ನಿದ್ರೆಯನ್ನು ಹಾರಿಸಿಬಿಡುತ್ತದೆ.
ಆಕೆ ಯುವತಿಯಾಗಿರುವಾಗ ವಯಸ್ಸೆಲ್ಲಿ
ಕಳೆದುಹೋಗುವುದೋ ಎಂಬ ಚಿಂತೆ,
ಮದುವೆಯಾದಾಗ ಎಲ್ಲಿ ಅಪಮಾನಕ್ಕೆ
ಗುರಿಯಾಗುವಳೋ ಎಂಬ ಚಿಂತೆ;
10 ಕನ್ಯಾವಸ್ಥೆಯಲ್ಲಿ ಗರ್ಭಿಣಿಯಾಗಿ ಎಲ್ಲಿ
ಹೆತ್ತವರ ಮನೆಯಲೇ
ಉಳಿದು ಬಿಡುವಳೋ ಎಂಬ ಚಿಂತೆ,
ಗಂಡನಿರುವಾಗಲೂ ಎಲ್ಲಿ ಅಡ್ಡದಾರಿ
ಹಿಡಿಯುವಳೋ ಎಂಬ ಚಿಂತೆ,
ಮದುವೆಯಾದ ಮೇಲೆ ಎಲ್ಲಿ
ಬಂಜೆಯಾಗುವಳೋ ಎಂಬ ಚಿಂತೆ.
11 ಮೊಂಡು ಮಗಳನ್ನು ಹದ್ದುಬಸ್ತಿನಲ್ಲಿಟ್ಟು
ಕಾಯಬೇಕು:
ನಿನ್ನ ಶತ್ರುಗಳೆದುರಿನಲಿ ನಿನ್ನನವಳು
ನಗೆಗೀಡುಮಾಡದಂತೆ
ಊರಲ್ಲಿ ಎಲ್ಲರು ಆಡಿಕೊಳ್ಳಲು
ಆಸ್ಪದವಾಗದಂತೆ
ಜನರಲ್ಲಿ ಅವಳು ಅಪಕೀರ್ತಿಗೊಳಗಾಗದಂತೆ
ಎಲ್ಲರ ಎದುರಿನಲ್ಲಿ ನಿನ್ನನ್ನು ಅವಮಾನಕ್ಕೆ
ಗುರಿಪಡಿಸದಂತೆ.
12 ಚೆಲುವಿಕೆಗಾಗಿಯೇ ಯಾರನ್ನು
ದಿಟ್ಟಿಸಿ ನೋಡಬೇಡ
ಮಹಿಳೆಯರ ಮಧ್ಯೆ ಕುಳಿತುಕೊಳ್ಳಬೇಡ.
13 ನುಸಿಬರುವುದು ಬಟ್ಟೆಯಿಂದ
ಹೆಂಗಸಿಗೆ ಕೆಟ್ಟತನ ಬರುವುದು
ಹೆಂಗಸರಿಂದ.
14 ಗಂಡಸಿನ ಗಡಸುತನವೇ ಲೇಸು
ಸವಿಮಾತಿನ ಹೆಂಗಸಿಗಿಂತ
ನಿನ್ನನ್ನು ಅವಮಾನಕೆ ಗುರಿಪಡಿಸುವ
ಮಹಿಳೆಗಿಂತ.

**ಪ್ರಕೃತಿಯಲ್ಲಿ ಪರಮಾತ್ಮನ ಮಹಿಮೆ**

15 ಸರ್ವೇಶ್ವರನ ಕೆಲಸಗಳನ್ನು ಕುರಿತು ಈಗ
ನೆನಪು ಮಾಡಿಕೊಡುತ್ತೇನೆ:
ನಾನು ಕಂಡ ಸಂಗತಿಗಳನ್ನು ವಿವರಿಸುತ್ತೇನೆ:
ಸರ್ವೇಶ್ವರನ ವಾಣಿಯ ಪ್ರಕಾರ
ಆತನ ಕಾರ್ಯ ನೆರವೇರಿದೆ
ಸೃಷ್ಟಿಸಮಸ್ತವೂ ಆತನ ಆಜ್ಞೆಗಳನ್ನು
ಅನುಸರಿಸುತ್ತವೆ.
16 ಪ್ರಕಾಶಕೊಡುವ ಸೂರ್ಯ ಎಲ್ಲವನ್ನು
ದೃಷ್ಟಿಸುವನು
ಸರ್ವೇಶ್ವರನ ಕೆಲಸ ಆತನ ಮಹಿಮೆಯಿಂದ
ತುಂಬಿರುವುದು.
17 ಸರ್ವೇಶ್ವರನ ಮಹತ್ಕಾರ್ಯಗಳನ್ನು
ವಿವರಿಸುವ ಶಕ್ತಿಯನ್ನು
ಆತ ಕೊಟ್ಟಿಲ್ಲ ತನ್ನ ದೇವದೂತರಿಗೂ.
ಎಲ್ಲವೂ ತನ್ನ ಮಹಿಮೆಯಲ್ಲೇ
ನೆಲೆಗೊಂಡಿರುವಂತೆ
ಸ್ಥಾಪಿಸಿದವ ಸರ್ವಶಕ್ತನಾದ ಸರ್ವೇಶ್ವರನೇ.
18 ಮಹೋನ್ನತ ಸರ್ವೇಶ್ವರ ತಿಳಿದಿರುವನು
ಸರ್ವಜ್ಞಾನವನು, ಯುಗದ ಲಕ್ಷಣವನು;
ಎಂದೇ ಪರಿಶೋಧಿಸಿಹನು ಪ್ರಪಾತವನು,
ಹೃದಯವನು;
ಬಲ್ಲನಾತನು ಅವುಗಳ ತಂತ್ರಕುತಂತ್ರಗಳನು.
19 ಪ್ರಕಟಪಡಿಸುವನು ಹಿಂದೆ ನಡೆದವುಗಳನು
ಮುಂದೆ ನಡೆಯುವಂಥವುಗಳನು
ಶ್ರುತಪಡಿಸಬಲ್ಲನಾತನು ಗುಪ್ತವಾದುವುಗಳ
ಸುಳಿವನು.
20 ಯಾವ ಕಲ್ಪನೆಯೂ ಆತನಿಂದ
ತಪ್ಪಿಸಿಕೊಳ್ಳದು
ಯಾವ ಮಾತೂ ಆತನಿಗೆ ಮರೆಯಾಗಿರದು.
21 ಯುಗಯುಗಾಂತರಕ್ಕೂ ಇರುವಾತನವನು
ತನ್ನ ಜ್ಞಾನದ ಮಹತ್ಕಾರ್ಯಗಳನು
ಕ್ರಮಪಡಿಸಿದರುವನು
ಅದಕ್ಕೆ ಯಾವುದನ್ನು ಕೂಡಿಸಲಿಲ್ಲ,
ಯಾವುದನ್ನು ಅದರಿಂದ ಕಳೆದಿಲ್ಲ
ಸಲಹೆಗಾರನ ಅಗತ್ಯವೂ ಆತನಿಗಿರಲಿಲ್ಲ.
22 ಆಹಾ, ಆತನ ಕಾರ್ಯಗಳು ಎಷ್ಟು
ಅಪೇಕ್ಷಣೀಯ!
ಆತನ ಕೆಲಸಗಳು ಎಷ್ಟು ತೇಜೋಮಯ!

23 ಇವೆಲ್ಲವು ಅವುಗಳ ಪ್ರಯೋಜನಕ್ಕನುಸಾರ
ಜೀವಿಸುತ್ತವೆ
ನಿತ್ಯಕ್ಕೂ ಉಳಿಯುತ್ತವೆ, ಆತನಿಗೆ
ವಿಧೇಯವಾಗಿರುತ್ತವೆ.
24 ಎಲ್ಲ ಸಂಗತಿಗಳಿರುವುವು ದ್ವಂದ್ವವಾಗಿ
ಒಂದು ಇನ್ನೊಂದಕ್ಕೆ ಎದುರಾಗಿ
ಆತ ಯಾವುದನ್ನೂ ಮಾಡಿಲ್ಲ ಅಪೂರ್ಣವಾಗಿ.
25 ವೈಶಿಷ್ಟ್ಯತೆಯಲ್ಲಿ ಒಂದು
ಪರಿಪೂರ್ಣಗೊಳ್ಳುತ್ತದೆ ಇನ್ನೊಂದರಿಂದ.
ಆತನ ಮಹಿಮೆಯನ್ನು ಪೂರ್ತಿಯಾಗಿ
ಗ್ರಹಿಸಲು ಯಾರಿಂದ ಸಾಧ್ಯ?

**ಸೂರ್ಯ**

**43** ಉನ್ನತದಲ್ಲಿ ನಿರ್ಮಲ ಆಕಾಶ
ಎಷ್ಟೋ ಪ್ರಭಾವವುಳ್ಳದ್ದು
ಗಗನದ ದೃಶ್ಯ ಎಷ್ಟೋ ಮಹಿಮೆಯುಳ್ಳದ್ದು!
2 ಸೂರ್ಯನು ಉದಯವಾಗಿ ಸಾರುತ್ತಾನೆ
ಶುಭಸಂದೇಶ
ಏರುವ ರವಿ ಎಷ್ಟು ಆಶ್ಚರ್ಯಕರ, ಎಂಥ
ಮಹೋನ್ನತ ಸಾಧನ !
3 ಭೂಮಿಯನ್ನೆಲ್ಲಾ ಒಣಗಿಸುತ್ತಾನೆ
ಮಧ್ಯಾಹ್ನದೊಳು
ಯಾರಿಂದ ಸಾಧ್ಯ ಅವನ ಉರಿಯ ತಾಪವನು
ಸಹಿಸಲು?
4 ಕುಲುಮೆಯನ್ನು ಊದುವವನು ಕಾವಿನ
ಕೆಲಸದಲ್ಲೇ ಇರುತ್ತಾನೆ
ಸೂರ್ಯನಾದರೋ ಮೂರರಷ್ಟು ತೀಕ್ಷ್ಣ
ಆಗಿದ್ದು ಪರ್ವತಗಳನ್ನೇ ಸುಡುತ್ತಾನೆ.
ಬಿಸಿ ಹವೆಬಿಡುತ್ತಾ ಹೊಳೆಯುವ ಕಿರಣಗಳಿಂದ
ಕಣ್ಣುಗಳನ್ನೆ ಕುಕ್ಕಿಸುತ್ತಾನೆ.
5 ಅವನನ್ನು ರಚಿಸಿದ ಸರ್ವೇಶ್ವರ ಘನವಂತ
ಆತನ ಅಪ್ಪಣೆಯಂತೆ ಹಿಡಿದೋಡುತ್ತಾನೆ
ರವಿ ತನ್ನ ಪಥ.

**ಚಂದ್ರ**

6 ಚಂದ್ರನು ಸಹ ಕಾಣಿಸಿಕೊಳ್ಳುತ್ತಾನೆ
ಸದಾ ಸಮಯಕ್ಕೆ ಸರಿಯಾಗಿ
ಪ್ರಪಂಚಕ್ಕೆ ಗುರುತನ್ನು ತೋರಿಸುತ್ತಾನೆ,
ವಿಶೇಷ ದಿನಗಳನ್ನು ಸೂಚಿಸಿ.

7 ಹಬ್ಬದ ದಿನಗಳು ಸೂಚಿತವಾಗುವುದು
ಚಂದ್ರನಿಂದಲೇ
ಅವನ ಬೆಳಕು ಕಡಿಮೆಯಾಗುತ್ತಾ ಬರುವುದು
ಹುಣ್ಣಿಮೆಯಾದ ಮೇಲೆ.
8 ತಿಂಗಳು ಸಹ ಕರೆಯಲಾಗುತ್ತದೆ ಚಂದ್ರನ
ಹೆಸರಿನಿಂದ
ಬೆಳೆಯುತ್ತಾನೆ ಆಶ್ಚರ್ಯಕರವಾಗಿ
ಪೂರ್ಣವಾಗುತ.
ಆಕಾಶದಲಿ ಹೊಳೆಯುತ್ತಿರುವನು
ಮಹೋನ್ನತ ಗಣಗಳ ಸಾಧನವಾಗಿ
ಗಗನ ಮಂಡಲದ ತಾರಾಗಣಗಳಿಗೆ
ಬೆಳಗುವ ಪತಾಕೆಗೆ ಸಮನಾಗಿ.

**ನಕ್ಷತ್ರಗಳು**

9 ಮಿಣುಗುವ ನಕ್ಷತ್ರಗಳು ಆಕಾಶದ
ಸೌಂದರ್ಯಸೊಬಗುಗಳು
ಮಹೋನ್ನತ ಸರ್ವೇಶ್ವರನ
ದೇದೀಪ್ಯಮಾನವಾದ ಆಭರಣಗಳು.
10 ಇವೆಲ್ಲವು ನಿಂತುಕೊಳ್ಳುತ್ತವೆ ತಮಗೆ
ನಿಯಮಿತ ಸ್ಥಳಗಳಲಿ
ಅವು ಬಳಲಿಹೋಗುವುದಿಲ್ಲ ತಮ್ಮ ಕಾವಲಿನಲಿ
ಅನುಸರಿಸುತ್ತವೆ ಈ ಪರಿ ಪರಿಶುದ್ಧನ
ಅಣತಿ.

**ಮುಗಿಲು ಬಿಲ್ಲು**

11 ಮಳೆಬಿಲ್ಲನು ನೋಡು: ಅದನ್ನುಂಟು
ಮಾಡಿದಾತನನ್ನು ಕೊಂಡಾಡು
ಅದು ಹೊಳೆಯುವಾಗ ಎಷ್ಟು ರಮ್ಯವಾಗಿದೆ
ನೋಡು !
12 ಆಕಾಶವನ್ನೆಲ್ಲ ಬಳಸುವುದು ಕಾಂತಿಯ
ಆವರಣದಿಂದ
ಬಿಲ್ಲಂತೆ ಅದು ಬಗ್ಗಿರುವುದು,
ಮಹೋನ್ನತನ ಕೈಗಳಿಂದ.

**ಪ್ರಕೃತಿಯ ಅದ್ಭುತಗಳು**

13 ಸರ್ವೇಶ್ವರ ತನ್ನ ಅಪ್ಪಣೆಯ ಪ್ರಕಾರ
ಹಿಮಬೀಳುವಂತೆ ಮಾಡುತ್ತಾನೆ
ತನ್ನ ನ್ಯಾಯತೀರ್ಪಿನ ಸಿಡಿಲುಗಳನ್ನು
ತೀವ್ರವಾಗಿ ಕಳುಹಿಸುತ್ತಾನೆ.
14 ಈ ಕಾರಣ ತೆರೆಯುವುವು ನಿಧಿನಿಲಯಗಳು

ಹಕ್ಕಿಗಳಂತೆ ಹಾರಿಬರುವುವು ಮೋಡಗಳು.
15 ಆತನ ಅಪಾರಶಕ್ತಿಯಿಂದ ಬಲಗೊಳ್ಳುತ್ತವೆ
ಮೋಡಗಳು
ಸಣ್ಣಗೆ ಒಡೆದು ಚದುರುತ್ತವೆ ಆಲಿಕಲ್ಲುಗಳು.
16 ಬೆಟ್ಟಗಳು ನಡುಗುವುವು ಆತನು
ಪ್ರತ್ಯಕ್ಷವಾದಾಗ
ತೆಂಕಣಗಾಳಿ ಬೀಸುವುದು ಆತನಿಗೆ
ಇಷ್ಟವಾದಾಗ
ಅಂತೆಯೇ ಬಡಗಣ ಗಾಳಿ, ಸುಂಟರಗಾಳಿ
ಆತನಿಗೆ ಇಷ್ಟಬಂದಾಗ.
17 ಆತನ ಗುಡುಗಿನ ಶಬ್ದಕ್ಕೆ ಜಗ
ಗುರಿಯಾಗುತ್ತದೆ ವೇದನೆಗೆ
ಮಂಜನು ಚಿಮುಕಿಸುವನಾತ
ಹಕ್ಕಿಗಳು ಹಾರಿಬರುವಂತೆ
ಮಿಡಿತೆಗಳು ಧರೆಗೆ ಇಳಿದು ಬರುವ ಹಾಗೆ.
18 ಬೆರಗಾಗುವುವು ಕಣ್ಣುಗಳು ಅದರ ಬಿಳುಪಿನ
ಚೆಲುವಿಗೆ
ಚಕಿತಗೊಳ್ಳುವುದು ಹೃದಯ ಅದರ ಹನಿಹನಿಗೆ.
19 ಭೂಮಿಯ ಮೇಲೆ ಆತ ಸುರಿಸುವನು
ಇಬ್ಬನಿಯನು ಉಪ್ಪಿನಂತೆ
ಹೆಪ್ಪುಗಟ್ಟಿದಾಗ ಅದಾಗುವುದು ಮುಳ್ಳಿನ
ಮೊನೆಯಂತೆ.
20 ನೀರ್ಗಲ್ಲಾಗುವುದಾ ನೀರು ಬಡಗಣ ಶೀತಲ
ಗಾಳಿಬೀಸಲು
ಅದು ಹರಡಿ ನೆಲೆಸುವುದು ಎಲ್ಲ ನೀರಿನ
ಗುಂಡಿಗಳ ಮೇಲೂ
ಆ ನೀರೇ ಆಗ ಕವಚ
ಧರಿಸಿಕೊಂಡಂತಾಗುವುದು.
21 ಪರ್ವತಗಳ ಕಬಳಿಸಿ, ಅರಣ್ಯವನು
ಸುಡುವುದು ಗಾಳಿ
ಹಸಿರು ಹುಲ್ಲನ್ನೆಲ್ಲಾ ಬೆಂಕಿಯಂತೆ
ದಹಿಸಿಬಿಡುವುದಾ ಗಾಳಿ.
22 ತೀವ್ರವಾಗಿ ಬರುವ ಮಂಜು ಎಲ್ಲಕೂ
ಕ್ಷೇಮಕರ
ಶೆಕೆಯ ನಂತರ ಬರುವ ಇಬ್ಬನಿ ಸುಖಕರ.
23 ತನ್ನ ಸಂಕಲ್ಪದನುಸಾರ ಶಾಂತಪಡಿಸುವನಾತ
ಸಾಗರಗಳನ್ನು
ಅವುಗಳಲ್ಲಿ ನೆಟ್ಟಿಹನು ದ್ವೀಪಗಳನು.
24 ಸಮುದ್ರ ಪ್ರಯಾಣಮಾಡುವವರು
ತಿಳಿಸುವರು ಅದರ ಗಂಡಾಂತರಗಳನು

ಚಕಿತರಾಗುವೆವು ಹೀಗೆ ಕಿವಿಯಿಂದ
ಕೇಳಿದವುಗಳ ಕುರಿತು.
25 ಅಲ್ಲಿಯೂ ಇರುವುವು ವಿಲಕ್ಷಣವಾದ,
ಅಗಾಧವಾದ ಸೃಷ್ಟಿಗಳು
ಬಗೆಬಗೆಯ ಜೀವಿಗಳು, ಹಲವಾರು ಜಾತಿಯ
ಜಲಚರಗಳು.
26 ಆತನ ದೂತರು ದಡಸೇರುವುದು
ಆತನ ದೆಸೆಯಿಂದಲೆ
ಎಲ್ಲಕ್ಕು ಆಧಾರವಾಗಿರುವುದು
ಆತನ ಮಾತೊಂದೇ.
27 ನಾನು ಎಷ್ಟು ಮಾತುಗಳನ್ನಾಡಿದರೂ
ಕಡಿಮೆಯೆ
ನನ್ನ ಮಾತಿನ ಸಾರಾಂಶ ಇದುವೇ:
"ಎಲ್ಲವೂ ಆತನೆ".
28 ನಮಗೆ ಬಲವೆಲ್ಲಿಂದ ಬಂದೀತು ಆತನನು
ಘನಪಡಿಸುವುದಕ್ಕೆ?
ಆತನೇ ದೊಡ್ಡವನು ಆತ ಗೈದ
ಸಕಲ ಕೆಲಸಕಾರ್ಯಗಳಿಗೆ.
29 ಭಯಂಕರನು, ಘನವಂತನು ಸರ್ವೇಶ್ವರ
ಆತನ ಶಕ್ತಿಸಾಮರ್ಥ್ಯ ಆಶ್ಚರ್ಯಕರ.
30 ಸರ್ವೇಶ್ವರನನ್ನು ನೀವು ಮಹಿಮೆಪಡಿಸುವಾಗ
ನಿಮ್ಮ ಕೈಯಿಂದಾದಷ್ಟು ಆತನನ್ನು
ಕೀರ್ತಿಸಿರಿ
ಆದರೂ ಆತ ಮಿಗಿಲಾಗಿರುವನು; ಆತನನ್ನು
ಕೀರ್ತಿಸುವಾಗ ದಣಿಯದೆ ಶಕ್ತಿಯನ್ನೆಲ್ಲ
ಬಳಸಿರಿ.
ಏಕೆಂದರೆ ಸಾಕಾಗುವಷ್ಟು ಆತನನ್ನು ನೀವು
ಹೊಗಳಲಾರಿರಿ.
31 ಆತನನ್ನು ನೋಡಿದವರು ಯಾರಿದ್ದಾರೆ
ಆತನನ್ನು ವಿವರಿಸಲಾಗುವಂತೆ?
ಆತನನ್ನು ಘನಪಡಿಸುವವರು ಯಾರಿದ್ದಾರೆ
ಆತನಿದ್ದಂತೆ?
32 ಇವುಗಳಿಗಿಂತಲೂ ಹೆಚ್ಚಾಗಿ ಇನ್ನು ಅನೇಕ
ವಿಷಯಗಳು ಮರೆಯಾಗಿವೆ
ಆತನ ಕೆಲಸಕಾರ್ಯಗಳಲ್ಲಿ ನಾವು ನೋಡಿದ್ದು
ಅತಿ ಸ್ವಲ್ಪವೇ.
33 ಎಲ್ಲವನು ಮಾಡಿದವನು ಸರ್ವೇಶ್ವರನೇ
ಜ್ಞಾನವನು ಅನುಗ್ರಹಿಸಿಹನು ಭಕ್ತರಿಗೆ.

## ಪೂರ್ವಜರ ಸ್ತುತಿ

**44** ವಂದನೆ ಸಲ್ಲಿಸೋಣ ನಾವೀಗ
ಪ್ರಸಿದ್ಧ ಪುರುಷರಿಗೆ
ನಮ್ಮನ್ನು ಪಡೆದ ನಮ್ಮ ಕುಲದ
ಮೂಲಪಿತೃಗಳಿಗೆ.
2 ಪ್ರಕಟಿಸಿಹನು ಸರ್ವೇಶ್ವರ ತನ್ನ
ಮಹಾಮಹಿಮೆಯನ್ನು
ತೋರ್ಪಡಿಸಿಹನು ಮೊದಲಿಗಿಂತಲೂ
ತನ್ನ ಮಹಾಶಕ್ತಿಯನು.
3 ತಮ್ಮ ತಮ್ಮ ರಾಜ್ಯಗಳನು ಆಳಿದವರು,
ತಮ್ಮ ಶಕ್ತಿಯಿಂದ ಹೆಸರು ಗಳಿಸಿಕೊಂಡವರು,
ತಮ್ಮ ತಿಳುವಳಿಕೆಯಿಂದ ಆಲೋಚನೆ
ನೀಡಿದವರು,
ಪ್ರವಚನಗಳಿಂದ ಸಂದೇಶವನು
ಸಾರಿದವರು;
4 ತಮ್ಮ ಸಲಹೆಗಳಿಂದ ಜನಾಂಗಕ್ಕೆ
ಮುಂದಾಳಾದವರು,
ತಮ್ಮ ತಿಳುವಳಿಕೆಯಿಂದ ಜನಾಂಗಕ್ಕೆ
ವಿದ್ಯಾವಂತರಾದವರು,
(ಜ್ಞಾನಮಯವಾಗಿತ್ತು ಇವರು ನೀಡಿದ
ಬೋಧನೆಯು)
5 ರಾಗಗಳನ್ನು ಕಂಡು ಹಿಡಿದವರು
ಗೀತೆಗಳನ್ನು ರಚಿಸಿ ಕಲಿಸಿದರು.
6 ತಮ್ಮ ನಿವಾಸಗಳಲ್ಲಿ ಶಾಂತಿಯಿಂದ ಬಾಳಿದ
ಸಮರ್ಥ ಶ್ರೀಮಂತರು.
7 ಇವರೆಲ್ಲರು ತಮ್ಮ ಜೀವನಕಾಲದಲ್ಲಿ
ಗೌರವಕ್ಕೆ ಪಾತ್ರರಾಗಿದ್ದರು;
ಆಯಾಕಾಲದಲ್ಲಿ ಭೂಷಣಪ್ರಾಯರಾಗಿ
ಹೋದರು.
8 ಇವರಲಿ ಕೆಲವರು ತಮ್ಮ ಹೆಸರುಗಳನ್ನು
ಕೆತ್ತಿ ಹೋದರು
ಆ ಹೆಸರುಗಳು ಅವರ ಕೀರ್ತಿಯನ್ನು
ಸಾರುತ್ತಿರುವುವು.
9 ಇನ್ನು ಕೆಲವರು ಯಾವ ಸ್ಮಾರಕವೂ ಇಲ್ಲದೆ
ಎಂದೂ ಇಲ್ಲದ್ದವರಂತೆ ಗತಿಸಿಹೋದರು
ಹುಟ್ಟಲಿಲ್ಲವೇನೋ ಎಂಬಂತೆ
ಕಣ್ಮರೆಯಾಗಿ ಹೋದರು
ಅವರ ನಂತರ ಅವರ ಮಕ್ಕಳು ಸಹ ಅವರಂತೆ
ಹೋಗಿಬಿಟ್ಟರು.

10 ಆದರೆ ಅವರು ದಯಾಳುಗಳಾಗಿದ್ದರು
ಮರೆತು ಹೋಗಲಿಲ್ಲ ಅವರ ಸತ್ಕಾರ್ಯಗಳು.
11 ಒಳ್ಳೆಯ ಸೊತ್ತು ಸದಾ ಉಳಿಯುವುದು
ಅವರ ಪೀಳಿಗೆಯಲ್ಲಿ
ಅವರ ಮಕ್ಕಳು ಸ್ಥಿರವಾಗಿರುವರು
ಒಡಂಬಡಿಕೆಯ ಅನುಸರಣೆಯಲ್ಲಿ.
12 ಅವರ ಸಂತಾನ ಸ್ಥಿರವಾಗಿರುವುದು
ಒಡಂಬಡಿಕೆಯ ಪಾಲನೆಯಲ್ಲಿ
ಅವರ ಮಕ್ಕಳೂ ಸಹ ನೆಲೆಯಾಗಿ ನಿಲ್ಲುವರು
ಅದರ ಅನ್ವೇಷಣೆಯಲ್ಲಿ.
13 ಉಳಿಯುವುದು ಅವರ ಸಂತಾನ ಎಂದೆಂದಿಗು
ಅವರ ಗೌರವ ಅಳಿಸಿಹೋಗದು.
14 ಸಮಾಧಾನದಲ್ಲಿ ಅವರ ದೇಹಗಳಿಗೆ
ಸಮಾಧಿಯಾಯಿತು
ಜೀವಂತವಾಗುವುದು ಅವರ ಹೆಸರು
ತಲತಲಾಂತರದವರೆಗೂ.
15 ಕುಲದವರು ಪ್ರಸಿದ್ಧಪಡಿಸುವರು ಅವರ
ಜ್ಞಾನವನು
ಸಭೆಯು ಸಾರುವುದು ಅವರ ಕೀರ್ತಿಯನು.

**ಹನೋಕ**

16 ಸರ್ವೇಶ್ವರನಿಗೆ ಮೆಚ್ಚಿಕೆಯಾಗಿದ್ದರಿಂದ
ಹನೋಕನು ಒಯ್ಯಲ್ಪಟ್ಟನು
ಹೀಗೆ ಪರಿವರ್ತನೆಯ ಆದರ್ಶವಾದನು
ಸಮಸ್ತ ಪೀಳಿಗೆಗು.

**ನೋಹ**

17 ನೋಹನು ಕಂಡುಬಂದನು
ಸಂಪೂರ್ಣ ಸತ್ಯವಂತನಾಗಿ
ಅಂಗೀಕೃತನಾದನು ಪ್ರಕೋಪದ ಕಾಲದಲ್ಲಿ
ಲೋಕಕ್ಕೆ ಬದಲಾಗಿ
ಹೀಗೆ ಜಗತ್ತಿಗೊಂದು ಜನಶೇಷ ಉಳಿಯಿತು
ಪ್ರಳಯಕಾಲದಲ್ಲಿ.
18 ಅವನೊಂದಿಗೆ ನಿತ್ಯವಾದ
ಒಡಂಬಡಿಕೆಗಳಾದವು
ಎಲ್ಲ ಪ್ರಾಣಿಗಳು ಪ್ರಳಯದಿಂದ
ನಾಶವಾಗುವುದಿಲ್ಲವೆಂದು.

**ಅಬ್ರಹಾಮ**

19 ಅಬ್ರಹಾಮನು ತಂದೆಯಾದನು ಅನೇಕ
ಜನಾಂಗಗಳಿಗೆ
ಪ್ರಖ್ಯಾತಿಯಲ್ಲಿ ಯಾವನು ಸಿಗನು
ಸರಿಸಮಾನನು ಅವನಿಗೆ.
20 ನಡೆದುಕೊಂಡನವನು ಮಹೋನ್ನತನ
ಇಚ್ಛೆಯಂತೆ
ಮಾಡಿಕೊಂಡನಾತ ಒಡಂಬಡಿಕೆಯನ್ನು
ಅವನೊಂದಿಗೆ
ಒಡಂಬಡಿಕೆಯನ್ನು ಸ್ಥಿರಪಡಿಸಿದನಾತ ಅವನ
ದೇಹದಲ್ಲೇ
ನಂಬಿಗಸ್ಥನಾಗಿ ಕಂಡುಬಂದನವನು
ಅಗ್ನಿಪರೀಕ್ಷೆಯ ಕಾಲದಲ್ಲೇ.
21 ಎಂದೇ ಅವನ ಸಂತಾನದ ಮೂಲಕ ಎಲ್ಲ
ಜನರಿಗೆ ಆಶೀರ್ವಾದವಿರುವುದೆಂದು
ಧರೆಯ ದೂಳಿನಂತೆ ಅವನ ಸಂತಾನ
ಹೆಚ್ಚುವುದೆಂದು
ಅವನ ಸಂತಾನವು ನಕ್ಷತ್ರಗಳಷ್ಟು
ಅಧಿಕವಾಗುವುದೆಂದು
ಸಮುದ್ರದಿಂದ ಸಮುದ್ರದವರೆಗು,
ನದಿಯಿಂದ ಭೂಮಿಯ ಕಟ್ಟಕಡೆಯವರೆಗು
ವನಿಗೆ ಸ್ವಾಸ್ತ್ಯವನ್ನು ಕೊಡುವೆನೆಂದು
ಸರ್ವೇಶ್ವರ ಆಣೆಯಿಟ್ಟು ವಾಗ್ದಾನಮಾಡಿದನು.

ಇಸಾಕ, ಯಕೋಬ

22 ಅಬ್ರಹಾಮನ ನಿಮಿತ್ತ ಆತನ ಮಗ
ಇಸಾಕನೊಂದಿಗೆ ಮಾಡಲಾಯಿತು ಅದೇ
ವಾಗ್ದಾನ.
23 ಸ್ಥಿರಗೊಳಿಸಿದನು ಸರ್ವೇಶ್ವರ ಎಲ್ಲ
ಮಾನವರಿಗೂ
ಒದಗಲಿರುವ ಆ ಆಶೀರ್ವಾದವನ್ನು,
ಒಡಂಬಡಿಕೆಯನ್ನು;
ಯಕೋಬನ ತಲೆಯ ಮೇಲೆ ಹೊರಿಸಿದನು
ಆ ಹೊಣೆಗಾರಿಕೆಯನ್ನು;
ಅವನನ್ನು ದೃಢಗೊಳಿಸಿ, ಸೊತ್ತನ್ನು ಕೊಟ್ಟು,
ಹನ್ನೆರಡು ಕುಲಗಳಿಗೆ ವಿಭಾಗಿಸಿದನು
ಆ ಪಾಲನ್ನು.

**ಮೋಶೆ**

**45** ಆ ಯಕೋಬನ ಸಂತತಿಯಿಂದ ಬರ
ಮಾಡಿದನು ದಯಾಶೀಲನೊಬ್ಬನನ್ನು,
ದೇವರಿಗೂ ಮಾನವರಿಗೂ ಪ್ರಿಯನಾದ
ವ್ಯಕ್ತಿಯೊಬ್ಬನನ್ನು,
ಅವನೇ ಮೋಶೆ ಎಂಬವನು, ಪೂಜ್ಯ ಸ್ಮರಣೆಗೆ
ಯೋಗ್ಯನಾದವನು.
2 ಇವನನ್ನು ಏರಿಸಿದನು ಮಹಿಮಾಪದವಿಗೆ
ವೈರಿಗಳೂ ಭಯಪಡುವಂಥ ಘನತೆಗೆ.
3 ಇವನ ಬಾಯಿಮಾತಿನ ಮೂಲಕವಾಗಿ
ಸರ್ವೇಶ್ವರ ನಡೆಸಿದನು ಅದ್ಭುತಗಳನ್ನು
ಅನಿರೀಕ್ಷಿತವಾಗಿ
ಘನತೆಗೇರಿಸಿದವನನ್ನು ಅರಸರುಗಳ
ಎದುರಿನಲ್ಲಿ
ಕೊಟ್ಟನವನಿಗೆ ತನ್ನ ನಿಬಂಧನೆಗಳನ್ನು ತನ್ನ
ಜನರ ಹಿತಕ್ಕಾಗಿ
ತೋರಿಸಿದನು ತನ್ನ ಮಹಿಮಾ ಪ್ರಭಾವವನ್ನು
ಅವನಿಗಾಗಿ.
4 ಇವನ ಸತ್ಯಸಾತ್ವಿಕತೆಗಳಿಗಾಗಿ ಇವನನ್ನು
ಪ್ರತಿಷ್ಠಿಸಿದನಾತ
ಸಕಲ ಮಾನವರಲ್ಲಿ ಇವನನ್ನೇ
ಆಯ್ದುಕೊಂಡನಾತ.
5 ಇವನು ಕೇಳುವಂತೆ ಮಾಡಿದನು
ತನ್ನ ವಾಣಿಯನ್ನು
ಕಾರ್ಗತ್ತಲಿಗೆ ಕೊಂಡೊಯ್ದು, ಮುಖಾಮುಖಿ
ಯಾಗಿ ಕೊಟ್ಟನವನಿಗೆ ಆಜ್ಞೆಗಳನ್ನು
ಜೀವದಾಯಕ ಹಾಗು ಜ್ಞಾನದಾಯಕ
ನಿಯಮವದು
ಯಕೋಬನೊಡನೆ ಮಾಡಿಕೊಂಡ
ಒಡಂಬಡಿಕೆಯದು
ಇಸ್ರಯೇಲರಿಗೆ ಬೋಧಿಸಬೇಕಾಗಿದ್ದ
ನ್ಯಾಯವಿಧಿಗಳವು.

**ಆರೋನ**

6 ಅನಂತರ ಇವನಂತೆ ಪೂಜ್ಯ ಆರೋನನನ್ನು
ಮೇಲಕ್ಕೆತ್ತಲಾಯಿತು
ಇವನು ಮೋಶೆಯ ಅಣ್ಣನೂ
ಲೇವಿಯ ಕುಲದವನೂ ಆಗಿದ್ದನು.
7 ಸರ್ವೇಶ್ವರ ನಿತ್ಯ ಒಡಂಬಡಿಕೆಯೊಂದನ್ನು

ಸ್ಥಾಪಿಸಿದ ಇವನೊಂದಿಗೆ
ತನ್ನ ಜನರ ಹಿತಕ್ಕಾಗಿ ಯಾಜಕತ್ವವನ್ನು
ಅನುಗ್ರಹಿಸಿದ ಇವನಿಗೆ
ಅಲಂಕರಿಸಿದ ಇವನನ್ನು ಸುಂದರವಾದ
ಆಭರಣಗಳಿಂದ
ಸಿಂಗರಿಸಿದನು ಪ್ರತಿಭಾಯುತ
ನಿಲುವಂಗಿಯಿಂದ.
8 ಬಲಪಡಿಸಿದವನನ್ನು ಪೂರ್ಣ ಗೌರವದಿಂದ
ಹೊದಿಸಿದ ನಾರುಮಡಿಯ ಒಳವಸ್ತ್ರ
ನಿಲುವಂಗಿಗಳಿಂದ
'ಏಫೋದು' ಎಂಬ ಗಂಭೀರ ತೊಡಿಗೆಯಿಂದ.
9 ಚಿನ್ನದ ದಾಳಿಂಬ ಹಾಗು ಗೆಜ್ಜೆಗಳಿದ್ದವು
ಅವನಾ ನಿಲುವಂಗಿಗೆ
ನಡೆದುಹೋಗುವಾಗ ಸದ್ದು ಮಾಡುವುದಕ್ಕೆ
ದೇವಾಲಯದಲ್ಲಿ ಸೇವೆ ಮಾಡುವಾಗ ಶಬ್ದ
ಕೇಳಿಸುವುದಕ್ಕೆ
ತನ್ನ ಜನಾಂಗದವರಾ ಶಬ್ದ ಕೇಳಿ
ನೆನಪಿಗೆ ತಂದುಕೊಳ್ಳಲಿಕ್ಕೆ.
10 ಶೃಂಗರಿಸಿದವನನ್ನು ಸರ್ವೇಶ್ವರ
ಚಿನ್ನದ, ನೀಲ ಮತ್ತು ಊದವರ್ಣದ
ದಾರದಿಂದ
ಕಸೂತಿಯವರು ತಯಾರಿಸಿದ
ದೀಕ್ಷಾವಸ್ತ್ರದಿಂದ
ಅದರೊಂದಿಗೆ ದೈವನಿರ್ಣಯಗಳನ್ನು
ಸೂಚಿಸುವಂಥ
'ಊರಿಮ್' ಮತ್ತು 'ತುಮ್ಮಿಮ್'ಗಳಿಂದ.
11 ಶೃಂಗರಿಸಿದ ಕಸೂತಿ ಕೆಲಸದವರು
ತಯಾರಿಸಿದ,
ಹುರಿಮಾಡಿದ ಕಡುಗೆಂಪು ವರ್ಣದ ದಾರದಿಂದ;
ಇಸ್ರಯೇಲ್ ಕುಲಗಳ ಪ್ರಕಾರ ಜ್ಞಾಪಕಾರ್ಥ
ಅಕ್ಷರಗಳನ್ನು ಕೊರೆಯಿಸಿದ;
ಮುದ್ರಾರತ್ನದಂತೆ ಕೆತ್ತಿಸಿದ, ಅಕ್ಕಸಾಲಿಗನಿಂದ
ಕುಂದಣದಲ್ಲಿ ಕಟ್ಟಿಸಿದ ರತ್ನಗಳಿಂದ.
12 ಇರಿಸಿದನು ಆತನ ಮೇಲೆ ಚಿನ್ನದ ಕಿರೀಟ,
ಪೂಜಾಪೇಟ
ಕೆತ್ತಿಸಿದನು ಅದರ ಮೇಲೆ "ಸರ್ವೇಶ್ವರನಿಗೆ
ಮೀಸಲು" ಎಂಬ ಪ್ರತಿಷ್ಠಿತ ವಾಕ್ಯ.
ಎಂಥ ಗೌರವಾನ್ವಿತ ಅಲಂಕಾರ!
ಸುಂದರವಾಗಿ ಕಂಗೊಳಿಸುವ ಅಮೂಲ್ಯ
ಕಸೂತಿ ಕೆಲಸ!

13 ತತ್ಪೂರ್ವದಲ್ಲಿರಲಿಲ್ಲ ಇಂಥ ಸೊಗಸಾದ
ವಸ್ತುಗಳು
ಧರಿಸುವಂತಿರಲಿಲ್ಲ ಅವುಗಳನ್ನು
ಪರಕೀಯರಾರು
ಅವನ ಮಕ್ಕಳು ಹಾಗು ಸಂತಾನದವರು ಮಾತ್ರ
ಧರಿಸಬಹುದಾಗಿತ್ತು.
14 ಇವನು ತಪ್ಪದೆ ಅರ್ಪಿಸಬೇಕಾಗಿತ್ತು
ದಿನಕ್ಕೆ ಎರಡು ಬಾರಿ ದಹನಬಲಿಗಳನ್ನು.
15 ಪ್ರತಿಷ್ಠಿಸಿದನು ಮೋಶೆ ಆರೋನನನ್ನು,
ಪವಿತ್ರ ತೈಲದಿಂದ ಅಭಿಷೇಕಿಸಿದವನನ್ನು
ಸರ್ವೇಶ್ವರನಿಗೆ ಸೇವೆ ಮಾಡುವುದಕ್ಕೂ
ಯಾಜಕ ಕಾರ್ಯಗಳನ್ನು ನಡೆಸುವುದಕ್ಕೂ
ಜನರನ್ನು ಆತನ ನಾಮದಲ್ಲಿ
ಆಶೀರ್ವದಿಸುವುದಕ್ಕೂ
ಶಾಶ್ವತ ಒಡಂಬಡಿಕೆಯಾಯಿತದು
ಆಕಾಶವಿರುವವರೆಗೂ
ಅವನಿಗೂ ಅವನ ಸಂತಾನಕ್ಕೂ.
16 ಸರ್ವೇಶ್ವರನಿಗೆ ಬಲಿಯನ್ನು ಅರ್ಪಿಸುವುದಕ್ಕೆ
ಧೂಪ, ಸುಗಂಧಬಲಿಗಳನ್ನು
ಜ್ಞಾಪಕಾರ್ಥವಾಗಿ ಒಪ್ಪಿಸುವುದಕ್ಕೆ
ಜನರಿಗೋಸ್ಕರ ದೋಷಪರಿಹಾರ
ಮಾಡುವುದಕ್ಕೆ
ಜೀವಿಗಳಲ್ಲೆಲ್ಲಾ ಆತನನ್ನೆ
ಆಯ್ದುಕೊಳ್ಳಲಾಯಿತು.
17 ಇಸ್ರಯೇಲರಿಗೆ ನಿಬಂಧನೆಗಳನ್ನು
ಬೋಧಿಸುವುದಕ್ಕೆ
ತನ್ನ ಧರ್ಮಶಾಸ್ತ್ರದ ಮೂಲಕ ಅವರಿಗೆ
ಜ್ಞಾನಪ್ರಕಾಶ ನೀಡುವುದಕ್ಕೆ
ಕೊಟ್ಟನವನಿಗೆ ಆಜ್ಞಾವಿಧಿನಿಯಮಗಳನ್ನು
ದೈವನಿರ್ಣಯದ ಒಡಂಬಡಿಕೆಗಳಲ್ಲಿ
ಅಧಿಕಾರವನ್ನು.
18 ಪರಕೀಯರು, ದಾತಾನ – ಅಭೀರಾಮರು,
ಅವರ ಪಂಗಡದವರು,
ಕೋರಹನು ಹಾಗು ಅವನ ಗುಂಪಿನವರು
ಮರುಭೂಮಿಯಲ್ಲಿ ಅವನ ಮೇಲೆ
ಅಸೂಯೆಪಟ್ಟರು
ಬಹುಕೋಪರೌದ್ರದಿಂದ ಅವನ ಸುತ್ತ ಒಟ್ಟಾಗಿ
ಕೂಡಿಬಂದರು.
19 ಇದು ಹಿಡಿಸಲಿಲ್ಲ ಸರ್ವೇಶ್ವರನ ಮನಸ್ಸಿಗೆ,
ದೃಷ್ಟಿಗೆ,

ಅವರನ್ನು ನಾಶಗೊಳಿಸಲು ಗುರಿಪಡಿಸಿದ ತನ್ನ
ಕೋಪಾಗ್ನಿಗೆ.
ಅದ್ಭುತವನ್ನು ನಡೆಸಿದನು ಅವರಿಗೆ
ವಿರುದ್ಧವಾಗಿ,
ಅವರಿಲ್ಲದಂತೆ ಮಾಡಿದ ಬೆಂಕಿಗೆ
ಆಹುತಿಯಾಗಿಸಿ.
20 ಸರ್ವೇಶ್ವರ ನೀಡಿದ ಆರೋನನಿಗೆ
ಹೆಚ್ಚಿನ ಗೌರವವನ್ನು
ಅನುಗ್ರಹಿಸಿದವನಿಗೆ ಸ್ವಾಸ್ತ್ಯವನ್ನು
ಏರ್ಪಡಿಸಿದ ಬೆಳೆಯ ಪ್ರಥಮ ಫಲ
ಅವನಿಗೆ ಸಲ್ಲುವಂತೆ
ಅವನಿಗೇ ಮೊದಲು ಆಹಾರವು ಸಮೃದ್ಧಿಯಾಗಿ
ಒದಗುವಂತೆ.
21 ತನಗೇ ಅರ್ಪಿತವಾದ ಬಲಿಯರ್ಪಣೆಗಳನ್ನು
ಕೊಟ್ಟನಾತನು ಇವನಿಗೂ ಇವನ ಸಂತಾನಕ್ಕೂ.
ಹೀಗೆ ಅವರು ಅವುಗಳನ್ನೇ ತಿನ್ನುವಂತೆ
ಆಯಿತು.
22 ಆದರೆ ಅವನಿಗಿರಲಿಲ್ಲ ನಾಡಿನಲ್ಲಿ ಸ್ವಂತ ಆಸ್ತಿ,
ಇರಲಿಲ್ಲ ಪಾಲು ನಾಡಿನ ಜನರಲ್ಲಿ,
ಏಕೆಂದರೆ ಸರ್ವೆಶ್ವರನೇ ಆಗಿದ್ದ
ಅವನ ಪಾಲು ಹಾಗು ಆಸ್ತಿ.

**ಫೀನೆಹಾಸನು**

23 ಎಲ್ಲಾಜಾರನ ಮಗ ಫೀನೆಹಾಸನು
ಮೂರನೆಯವನು ಸನ್ಮಾನ್ಯರಲ್ಲಿ,
ಆಸಕ್ತಿಯುಳ್ಳವನಾಗಿದ್ದನಾತ ಸರ್ವೇಶ್ವರನ
ಭಯಭಕ್ತಿಯಲ್ಲಿ.
ಧೈರ್ಯದಿಂದ ಎದ್ದುನಿಂತು ಪ್ರತಿಭಟಿಸಿದ
ಜನರು ಧರ್ಮಭ್ರಷ್ಟರಾದ ಸಮಯದಲ್ಲಿ.
ದೋಷಪರಿಹಾರ ಮಾಡಿದ ಇಸ್ರಯೇಲರ
ಪರವಾಗಿ.
24 ಆದ್ದರಿಂದ ಸಮಾಧಾನ ಒಡಂಬಡಿಕೆ
ಮಾಡಲಾಯಿತು ಇವನೊಂದಿಗೆ
ಪವಿತ್ರಸ್ಥಾನದಲ್ಲಿ ಜರನ
ಮುಂದಾಳಾಗಿರುವಂತೆ
ಆತನಿಗೂ ಅವನ ಸಂತತಿಗೂ ಯಾಜಕತ್ವದ
ಶಾಶ್ವತ ಗೌರವ ದೊರಕುವಂತೆ.
25 ಒಡಂಬಡಿಕೆ ಮಾಡಿಕೊಂಡ ಸರ್ವೇಶ್ವರ
ಯೆಹೂದಕುಲದ ಜೆಸ್ಸೆಯ ಮಗ
ದಾವೀದನೊಂದಿಗೆ

ಮಗನಿಂದ ಮಗನಿಗೆ ಅವರದೇ ಆಯಿತು
ಅರಸೊತ್ತಿಗೆ
ಅಂತೆಯೇ ಆರೋನನ ಸ್ವಾಸ್ತ್ಯ ಕೊಡಲಾಯಿತು
ಆತನ ಪೀಳಿಗೆಗೆ.
26 ದೇವಜನರಲ್ಲಿದ್ದ ಒಳ್ಳೆಯವುಗಳು
ನಾಶವಾಗದಂತೆ
ತಲೆಮಾರಿನಿಂದ ತಲೆಮಾರಿಗೆ ಅವರ ಕೀರ್ತಿ
ಉಳಿಯುವಂತೆ
ನೀತಿಯಿಂದ ಅವರಿಗೆ ನ್ಯಾಯತೀರಿಸುವಂತೆ
ದೇವರು ನೀಡಲಿ ಸುಜ್ಞಾನವನ್ನು ನಿಮಗೆ.

**ಯೆಹೋಶುವ**

**46** ಯುದ್ಧವೀರನಾಗಿದ್ದನು ನೂನನ
ಮಗ ಯೆಹೋಶುವನು
ಪ್ರವಚನಗಳಲ್ಲಿ ಮೋಶೆಯ ಉತ್ತರಾಧಿಕಾರಿ
ಇವನು.
ಇವನು, ಹೆಸರಿಗೆ ತಕ್ಕಂತೆ, ಮಹಾರಕ್ಷಕನಾದ
ದೇವರಾಯ್ದುಕೊಂಡವರಿಗೆ
ಮುಯ್ಯಿ ತೀರಿಸುವವನಾದ ಜನರ
ವಿರೋಧವಾಗಿ ಎದ್ದವರಿಗೆ
ಸ್ವಾಸ್ತ್ಯವನ್ನು ಗಳಿಸಿಕೊಡುವಂಥವನಾದ
ಇಸ್ರಯೇಲರಿಗೆ.
2 ಎಷ್ಟು ಘನವಂತನಾದ ಈತ ತನ್ನ
ಕೈಗಳನ್ನೆತ್ತಿದಾಗ !
ಪಟ್ಟಣಗಳ ವಿರುದ್ಧ ತನ್ನ ಕತ್ತಿಯನ್ನು
ಇರಿದಾಗ !
3 ಇಂಥ ಧೈರ್ಯಸ್ಥೈರ್ಯ ಯಾರಿಗಿತ್ತು
ಇವನಿಗೆ ಮುಂಚೆ?
ವೈರಿಗಳಿಗೆ ವಿರುದ್ಧ ಸರ್ವೇಶ್ವರನ
ಯುದ್ಧಗಳನ್ನು ನಡೆಸಿದವನು ಇವನೇ.
4 ಸೂರ್ಯನು ನಿಲ್ಲುವಂತೆ ಮಾಡಿದ್ದು ಇವನೇ
ಅಲ್ಲವೇ?
ಆಗ ಒಂದು ದಿನ ಎರಡರಷ್ಟಾಗಲಿಲ್ಲವೆ?
5 ಶತ್ರುಗಳು ಸುತ್ತುಗಟ್ಟಿ ಇವನ ಮೇಲೆ
ಬೀಳಲು,
ಮಹೋನ್ನತ ಪರಾಕ್ರಮ ಆದಾತನಿಗೆ
ಮೊರೆಯಿಟ್ಟನು.
ಮಹಾದೇವನು ಇವನ ಮೊರೆಯನ್ನು ಕೇಳಿದನು
ಬಲವಾದ ಕಲ್ಮಳೆಯನ್ನು ಸುರಿಸಿದನು.

6 ಪ್ರಚಂಡ ಯುದ್ಧ ನಡೆಸಿದನು ಶತ್ರು
ಜನಾಂಗದ ಮೇಲೆ
ವಿರೋಧಿಗಳನ್ನು ನಾಶಗೊಳಿಸಿದನು
(ಬೆಹೋರೋನಿನ) ಇಳಿಜಾರಿನಲ್ಲೆ.
ಮನವರಿಕೆಯಾಯಿತಾಗ ಜನಾಂಗಗಳಿಗೆ
ಅವನ ಯುದ್ಧಕವಚ ಎಂಥದೆಂದು!
ಸರ್ವೇಶ್ವರನ ದೃಷ್ಟಿಯಲ್ಲಿ ಅವನು ಯುದ್ಧ
ಮಾಡುತ್ತಿದ್ದಾನೆಂದು.
ಏಕೆಂದರೆ ಪರಮಪರಾಕ್ರಮಶಾಲಿಯೇ ಅವನಿಗೆ
ನಾಯಕನಾಗಿದ್ದನು.

**ಕಾಲೇಬ**

7 ಮೋಶೆಯ ಕಾಲದಲಿ ಯೆಹೋಶುವನು
ತೋರಿದನು ಪ್ರಾಮಾಣಿಕತೆಯನ್ನು
ಎಫೆನ್ನೆಯ ಮಗ ಕಾಲೇಬನೊಂದಿಗೆ
ಕೈಗೂಡಿಸಿಕೊಂಡನು
ಇವರಿಬ್ಬರೂ ಸೇರಿ ಎದುರಿಸಿದರು ವಿರೋಧ
ಪಕ್ಷದವರನ್ನು
ತಪ್ಪಿಸಿದರು ಪಾಪದೋಷಗಳಿಂದ ಜನರನ್ನು
ಸಾಂತ್ವನಪಡಿಸಿದರು ದುರುಳರ
ಗೊಣಗಾಟವನ್ನು.
8 ಆರು ಲಕ್ಷ ಕಾಲಾಳುಗಳಲ್ಲಿ ಅಳಿದುಳಿದವರು
ಇವರಿಬ್ಬರೇ,
ಜನರನ್ನು ತಮ್ಮ ಸ್ವಾಸ್ತ್ಯಕ್ಕೆ,
ಹಾಲೂಜೇನೂ ಹರಿಯುವ ನಾಡಿಗೆ
ತಂದವರೂ ಇವರೇ.
9 ಸರ್ವೇಶ್ವರ ಬಲವನ್ನು ಅನುಗ್ರಹಿಸಿದನು
ಕಾಲೇಬನಿಗೆ
ಅದು ಅವನೊಂದಿಗೆ ಇತ್ತು ಅವನ
ಮುಪ್ಪಿನವರೆಗೆ
ಆದುದರಿಂದ ಏರಿಹೋದನವನು ಮಲೆನಾಡಿಗೆ
ಆ ನಾಡು ಸ್ವಾಸ್ತ್ಯವಾಯಿತು ಅವನ
ಸಂತಾನದವರಿಗೆ.
10 ದೇವರ ಚಿತ್ತಾನುಸಾರ ನಡೆಯುವುದು
ಎಷ್ಟು ಒಳಿತು !
ಇದನ್ನು ಇಸ್ರಯೇಲ ಜನರು ಕಣ್ಣಾರೆ
ನೋಡುವಂತಾಯಿತು.

**ನ್ಯಾಯಸ್ಥಾಪಕರು**

11 ಇದರಿಂದ ಪೂಜ್ಯವಾಗಲಿ ಪ್ರತಿಯೊಬ್ಬ
ನ್ಯಾಯಸ್ಥಾಪಕನ ಸ್ಮರಣೆ
ಕಾರಣ, ಬಾಳಿದರವರು ದೇವದ್ರೋಹಗೈಯದೆ,
ಸರ್ವೇಶ್ವರನಿಂದ ಅಗಲದೆ.
12 ಇದ್ದ ಸ್ಥಳದಿಂದಲೆ ಚಿಗುರಲಿ ಅವರ
ಎಲುಬುಗಳು
ಇವರ ಮಕ್ಕಳಿಗೂ ಬರಲಿ
ಕೀರ್ತಿಕುಲಶವಾದ ಅವರ ಹೆಸರು !

**ಸಾಮುವೇಲನು**

13 ಸಾಮುವೇಲನು ಸರ್ವೇಶ್ವರನಿಗೆ
ಪ್ರಿಯನಾಗಿದ್ದನು
ಸರ್ವೇಶ್ವರನ ಪ್ರವಾದಿಯಾಗಿದ್ದು ರಾಜ್ಯವನ್ನು
ಸ್ಥಾಪಿಸಿದನು
ಆತನ ಜನಾಂಗಕ್ಕಾಗಿ ಅರಸರನ್ನು
ಅಭಿಷೇಕಿಸಿದನು.
14 ಸರ್ವೇಶ್ವರನ ಧರ್ಮಶಾಸ್ತ್ರಕ್ಕೆ ತಕ್ಕಂತೆ
ಜನಸಮೂಹಕ್ಕೆ ನ್ಯಾಯತೀರಿಸಿದನು.
ಸರ್ವೇಶ್ವರನು ಇಸ್ರಯೇಲರನ್ನು ಕಾಪಾಡಿದನು.
15 ಇವನು ಪ್ರವಾದಿಯೆಂಬುದು ವ್ಯಕ್ತವಾಯಿತು
ಇವನ ನೀತಿಸತ್ಯತೆಗಳಿಂದಲೆ
ಇವನ ದರ್ಶನಗಳು ಸತ್ಯವೆಂದು ಕಂಡುಬಂತು
ಇವನ ನುಡಿಗಳಿಂದಲೆ.
16 ಶತ್ರುಗಳು ಮುತ್ತಿದಾಗ ಪರಾಕ್ರಮಿಯಾದ
ಸರ್ವೇಶ್ವರನಿಗೆ ಮೊರೆಯಿಟ್ಟನು
ಹಾಲುಕುಡಿಯುವ ಕುರಿಮರಿಯನ್ನು ಆತನಿಗೆ
ಬಲಿಯಾಗಿ ಅರ್ಪಿಸಿದನು.
17 ಸರ್ವೇಶ್ವರ ಗುಡುಗಿದನು ಆಕಾಶದಿಂದ
ತನ್ನ ಧ್ವನಿಕೇಳುವಂತೆ ಮಾಡಿದ ಮಹಾ
ಶಬ್ದದಿಂದ.
18 ಸಂಪೂರ್ಣ ನಾಶಗೊಳಿಸಿದನು
ಟೈರ್ ಸೀಮೆಯ ಅಧಿಪತಿಗಳನ್ನು,
ಆ ಫಿಲಿಷ್ಟಿಯರ ಪ್ರಭುಗಳನ್ನು.
19 ಇವನು ಶಾಶ್ವತ ನಿದ್ರೆ ಹೊಂದುವ ಮುಂಚೆ
ಸರ್ವೇಶ್ವರನ ಹಾಗು ಆತನ ಅಭಿಷಿಕ್ತನ
ಸನ್ನಿಧಿಯಲ್ಲೆ
‘ನಾನು ಯಾರಿಂದಲೂ
ಹಣ ತೆಗೆದುಕೊಳ್ಳಲಿಲ್ಲ,
ಕೆರಗಳನ್ನು ಕೂಡ ತೆಗೆದುಕೊಳ್ಳಲಿಲ್ಲ’ ಎಂದು

ಪ್ರಮಾಣ ಮಾಡಿ ನುಡಿದನು,
ಯಾರಿಂದಲೂ ತಪ್ಪು ಕಂಡು ಹಿಡಿಯಲಾಗಲಿಲ್ಲ
ಅವನೊಳು.
20 ಪ್ರವಾದನೆ ಮಾಡಿದನವನು ತೀರಿಹೋದ
ಮೇಲೆಯೂ
ಅರಸನಿಗೆ ತೋರಿಸಿದ ಆತನ ಅಂತ್ಯಸ್ಥಿತಿಯನ್ನು
ಆನರ ದುಷ್ಟತನದ ಪರಿಹಾರಕ್ಕಾಗಿ ಎತ್ತಿದನು
ಭೂಮಿಯೊಳಗಿಂದ ತನ್ನ ಧ್ವನಿಯನ್ನು.

### ನಾತಾನನು ಮತ್ತು ದಾವೀದನು

**47** ಇವನ ತರುವಾಯ ದಾವೀದನ
ಕಾಲದೊಳು
ನಾತಾನನು ಎದ್ದನು ಪ್ರವಾದನೆ ಮಾಡಲು.
2 ಶಾಂತಿ ಬಲಿಪಶುವಿನಿಂದ ಕೊಬ್ಬನ್ನು
ಬೇರ್ಪಡಿಸುವಂತೆ
ಇಸ್ರಯೇಲರಿಂದ ಮೀಸಲಾದವನು ದಾವೀದನೆ.
3 ಸಿಂಹಗಳನ್ನು ಆಡಿಸಿದನಿವನು ಆಡುಮರಿಗಳಂತೆ
ಕರಡಿಗಳೊಂದಿಗೆ ಆಡಿದನು
ಕುರಿಮರಿಗಳೊಂದಿಗೆ ಆಡುವಂತೆ.
4 ಈತನೇ ಅಲ್ಲವೆ ತಾರುಣ್ಯದಲಿ ಕವಣೆಕಲ್ಲನು
ಕೈಗೆತ್ತಿಕೊಂಡವನು?
ಬಲಾಢ್ಯನೂ ಜಂಬಕೋರನೂ ಆದ
ಗೊಲ್ಯಾತನನ್ನು ಸಂಹರಿಸಿ
ನೆಲಕ್ಕುರುಳಿಸಿದವನು?
ಈ ಪರಿ ತನ್ನ ಜನಾಂಗದ ಅವಮಾನವನ್ನು
ಹೋಗಲಾಡಿಸಿದವನು?
5 ಇವನು ಮೊರೆಯಿಡಲು ಮಹೋನ್ನತ
ಸರ್ವೇಶ್ವರನಿಗೆ
ಶಕ್ತಿ ನೀಡಿದನಾತ ಇವನ ಭುಜಬಲಕ್ಕೆ
ಯುದ್ಧವೀರನಾದ ಆ ವ್ಯಕ್ತಿಯನ್ನು
ಸಂಹರಿಸುವುದಕ್ಕೆ
ತನ್ನ ಜನಾಂಗದವರ ಕೀರ್ತಿಪತಾಕೆಯನು
ಮೇಲೆತ್ತುವುದಕ್ಕೆ.
6 ಎಂತಲೇ ಜನರು ಗೌರವಿಸಿದರವನನು
'ಹತ್ತು ಸಾವಿರಗಟ್ಟಲೆ' ಕೊಂದುದಕ್ಕಾಗಿ
ಹೊಗಳಿದರವನನ್ನು ಸರ್ವೇಶ್ವರನ
ಆಶೀರ್ವಾದಗಳಿಗಾಗಿ
ಮಹಿಮೆಯ ಮುಕುಟ ಕೊಡಲಾಯಿತವನಿಗೆ
ಅದಕ್ಕಾಗಿ.

7 ನಾಶಗೊಳಿಸಿದನು ಸುತ್ತಲೂ ಇದ್ದ
ಶತ್ರುಗಳನ್ನು
ಸೋಲಿಸಿದನು ತನ್ನ ವಿರೋಧಿಗಳಾದ
ಫಿಲಿಷ್ಟಿಯರನ್ನು
ಮುರಿದು ಪುಡಿಪುಡಿಮಾಡಿದನು ಅವರ
ಕಳಸಕೊಂಬನ್ನು
ಹಾಗೆಯೇ ಇರುವುದದು ಇಂದಿನವರೆಗು.
8 ಪರಿಶುದ್ಧನು, ಮಹೋನ್ನತನು ಆದಾತನಿಗೆ
ಸಲ್ಲಿಸಿದನು ಧನ್ಯವಾದ
ತನ್ನ ಎಲ್ಲ ಕಾರ್ಯಗಳಲ್ಲೂ ಗಂಭೀರ
ವಚನಗಳಿಂದ.
ಆತನನ್ನು ಕೀರ್ತಿಸಿ ಹಾಡಿದನು
ಪೂರ್ಣಹೃದಯದಿಂದ,
ತನ್ನ ಸೃಷ್ಟಿಕರ್ತನನ್ನು ಪ್ರೀತಿವಾತ್ಸಲ್ಯದಿಂದ.
9 ಇದಲ್ಲದೆ ಗಾಯಕರನ್ನಿರಿಸಿದನು ಬಲಿಪೀಠದ
ಮುಂದೆ
ಮಧುರ ಗೀತವನ್ನು ಹಾಡಿ ವಂದಿಸುವಂತೆ.
10 ವಿಜೃಂಭಣೆಯನ್ನು ತಂದನು ಉತ್ಸವಗಳಿಗೆ
ಉತ್ಸವಕಾಲಗಳಿಗಿತ್ತನು ಪೂರ್ಣವಾದ
ಕ್ರಮಬದ್ಧತೆ.
ಏರ್ಪಡಿಸಿದನು ಆ ಸಂದರ್ಭಗಳಲ್ಲಿ
ಸರ್ವೇಶ್ವರನ ಶ್ರೀನಾಮವನ್ನು
ಕೀರ್ತಿಸುವಂತೆ
ಪವಿತ್ರಾಲಯದಲ್ಲಿ ಬೆಳಗಿನಿಂದ ಆ ಧ್ವನಿ
ಕೇಳಿಬರುವಂತೆ.
11 ಸರ್ವೇಶ್ವರ ಪರಿಹರಿಸಿದನು ಇವನ ಪಾಪವನ್ನು
ಶಾಶ್ವತವಾಗಿಸಿದನು ಅವನ ಕೀರ್ತಿ
ಪತಾಕೆಯನ್ನು.
ಒಡಂಬಡಿಕೆಮಾಡಿ ಶಾಶ್ವತಗೊಳಿಸಿದನು
ಅರಸೊತ್ತಿಗೆಯನ್ನು
ದಯಪಾಲಿಸಿದನವನಿಗೆ ಇಸ್ರಯೇಲರಲ್ಲಿ
ಮಹಿಮಾ ಸಿಂಹಾಸನವನ್ನು.

**ಸೊಲೊಮೋನನು**

12 ದಾವೀದನ ತರುವಾಯ ಎದ್ದವನು
ಬುದ್ಧಿವಂತನಾದ ಅವನ ಮಗನು
ತಂದೆಯ ನಿಮಿತ್ತ ನೆಮ್ಮದಿಯಿಂದ ಬಾಳಿದ
ಸೊಲೊಮೋನನು.
13 ಸೊಲೊಮೋನನು ಆಳಿದ್ದು ಶಾಂತಿಯುತ
ಕಾಲದಲ್ಲಿ

ದೇವನೇ ಏರ್ಪಡಿಸಿದ್ದನು ಸಮಾಧಾನ
ನೆಲೆಸಿರುವಂತೆ ಸುತ್ತಮುತ್ತಲಲ್ಲಿ;
ತನ್ನ ಹೆಸರಿಗಾಗಿ ಇವನೊಂದು
ಪವಿತ್ರಾಲಯವನ್ನು ನಿರ್ಮಿಸುವಂತೆ
ಈ ಪರಿ ಶಾಶ್ವತವಾದ ಪವಿತ್ರ ಸ್ಥಾನವನ್ನು
ತನಗೆ ಸಿದ್ಧಗೊಳಿಸುವಂತೆ.
14 ನಿನ್ನ ತಾರುಣ್ಯದಲ್ಲೆ ನೀನೆಷ್ಟು
ಜಾಣನಾದೆಯಲ್ಲಾ !
ನದಿಯಂತೆ ಜ್ಞಾನದಿಂದ
ತುಂಬಿಹರಿದೆಯಲ್ಲಾ!
15 ಧರೆಯೆಲ್ಲಾ ತುಂಬಿಕೊಂಡಿತು ನಿನ್ನ
ಪ್ರತಿಭೆಯಿಂದ
ತುಂಬಿಸಿದೆ ಅದನ್ನು ನಿನ್ನ ಒಗಟು
ಜ್ಞಾನೋಕ್ತಿಗಳಿಂದ.
16 ನಿನ್ನ ಹೆಸರು ಹಬ್ಬಿತು ದೂರದ್ವೀಪಗಳವರೆಗೆ
ಶಾಂತಿಸಮಾಧಾನಕ್ಕೆ ನೀನು ಪ್ರಿಯ ಹೆಸರಾದೆ.
17 ಆಶ್ಚರ್ಯಚಕಿತರಾದರು ಪರದೇಶದವರು
ನಿನ್ನ ಜ್ಞಾನೋಕ್ತಿಗಳಿಗಾಗಿ
ನಿನ್ನ ಕೀರ್ತನೆ, ಒಗಟುಗಳಿಗಾಗಿ,
ಅವುಗಳ ಅರ್ಥ ವಿವರಣೆಗಾಗಿ.
18 ದೇವರಾದ ಸರ್ವೇಶ್ವರನ ಹೆಸರಿನಿಂದಲೆ,
'ಇಸ್ರಯೇಲರ ದೇವರು'
ಎಂದೆನಿಸಿಕೊಂಡಾತನಿಂದಲೆ
ಚಿನ್ನವನ್ನು ತಗಡಿನಂತೆ ಶೇಖರಿಸಿದೆ
ಬೆಳ್ಳಿಯನ್ನು ಸೀಸದಂತೆ ರಾಶಿಮಾಡಿದೆ.
19 ಬಗ್ಗಿಸಿದೆ ನಿನ್ನ ನಡುವನ್ನು ಹೆಂಗಸರಿಗೆ
ಅದರಿಂದ ನಿನ್ನ ದೇಹ ಅಧೀನವಾಯಿತವರಿಗೆ.
20 ಹೀಗೆ ನಿನ್ನ ಗೌರವವನ್ನು ಮಲಿನಮಾಡಿಕೊಂಡೆ
ನಿನ್ನ ಮಕ್ಕಳ ಮೇಲೆ ದೇವಕೋಪವನ್ನು
ಬರಮಾಡಿಕೊಂಡೆ.
ಹೀಗೆ ನಿನ್ನ ಸಂತಾನವನ್ನು ಅಶುದ್ಧಗೊಳಿಸಿದೆ
ಈ ಮೂರ್ಖತನಕ್ಕಾಗಿ ನಾನು ವ್ಯಸನಗೊಂಡೆ !
21 ಇದರಿಂದ ಇಬ್ಭಾಗವಾಯಿತು ನಿನ್ನ ದೊರೆತನ
ಅವಿಧೇಯ ರಾಜ್ಯವೊಂದು ಆಳಿತು
ಎಫ್ರಯಿಮಿನಿಂದ.
22 ಸರ್ವೇಶ್ವರನೋ ತನ್ನ ದಯೆಯನೆಂದೂ
ತಪ್ಪಿಸುವುದಿಲ್ಲ
ಆತ ತನ್ನ ಕಾರ್ಯ ಯಾವುದನ್ನೂ
ನಾಶಗೊಳಿಸುವುದಿಲ್ಲ
ತಾನಾಯ್ದುಕೊಂಡ ಸಂತಾನವನ್ನು

ಅಳಿಸಿಬಿಡುವುದಿಲ್ಲ
ತನ್ನನ್ನು ಪ್ರೀತಿಸುವವನ ಸಂತಾನವನ್ನು
ತೆಗೆದು ಹಾಕುವುದಿಲ್ಲ.
ಉಳಿಸಿದನಾತ ಒಂದು ಜನಶೇಷವನ್ನು
ಇಸ್ರಯೇಲಿಗೆ
ಅವರಿಂದ ಒಂದು ಬೇರನ್ನು ಅನುಗ್ರಹಿಸಿದನು
ದಾವೀದನಿಗೆ.

**ರೆಹಬ್ಬಾಮನು ಮತ್ತು ಯಾರೊಬ್ಬಾಮನು**

23 ಹೀಗೆ ಸೊಲೊಮೋನನು ವಿಶ್ರಮಿಸಿಕೊಂಡನು
ತನ್ನ ಪೂರ್ವಜರೊಂದಿಗೆ
ತನ್ನ ಸಂತಾನದಲಿ ರೆಹಬ್ಬಾಮನನ್ನು
ಬಿಟ್ಟುಹೋದನು ತನ್ನ ಹಿಂದೆ.
ಅಜ್ಞಾನಿಯೂ ಅವಿವೇಕಿಯೂ ಆಗಿದ್ದನಿವನು
ಜನಾಂಗದಲ್ಲೆ.
ಆನರು ತಿರುಗಿಬೀಳುವಂತೆ ಮಾಡಿದನಿವನು
ತನ್ನ ದುರಾಲೋಚನೆಯಿಂದಲೇ.
ನೆಬಾಟನ ಮಗನಾದ ಯಾರೊಬ್ಬಾಮನು
ಕೂಡ ಅಂತವನೇ.
ಇಸ್ರಯೇಲರು ಪಾಪಮಾಡುವಂತೆ
ಪ್ರಚೋದಿಸಿದವನು ಅವನೇ
ಎಫ್ರಯಿಮಿಗೆ ಪಾಪಮಾರ್ಗವನ್ನು
ತೆರೆದಿಟ್ಟವನು ಅವನೇ.
24 ಇವರ ಪಾಪಗಳು ಹೆಚ್ಚಿದವು ಬಹಳವಾಗಿ
ನಾಡಿನಿಂದ ಹೊರಗೆ ದಬ್ಬಲ್ಪಟ್ಟರು
ಈ ಕಾರಣಕ್ಕಾಗಿ.
25 ಎಲ್ಲ ಬಗೆಯ ದುಷ್ಟತನದಲ್ಲಿ
ನಿರತರಾದರವರು
ಪ್ರತೀಕಾರವು ಅವರ ಮೇಲೆ ಬರುವವರೆಗು.

**ಎಲೀಯನು**

**48** ಆಮೇಲೆ ಪ್ರವಾದಿ ಎಲೀಯನೆದ್ದನು
ಬೆಂಕಿಯಂತೆ
ಉರಿಯಿತವನ ನುಡಿ ಪಂಜಿನಂತೆ.
2 ಕ್ಷಾಮವನ್ನು ಬರಮಾಡಿದನಿವನು ಜನರ
ಮೇಲೆ
ಅವರನ್ನು ಕುಂದಿಸಿದನು ತನ್ನ ರೋಷದಿಂದಲೆ.
3 ಆಕಾಶವನ್ನೇ ಮುಚ್ಚಿಬಿಟ್ಟನು
ಸರ್ವೇಶ್ವರನ ಹೆಸರಿನಲ್ಲಿ

ಬೆಂಕಿಯಿಳಿಯುವಂತೆ ಮಾಡಿದನು
ಮೂರುಸಾರಿ.
4 ಎಲೈ ಎಲೀಯನೇ, ಮಹತ್ಕಾರ್ಯಗಳಲ್ಲಿ
ನೀನು ಎಷ್ಟು ಘನವಂತನಾಗಿದ್ದೆ !
ನಿನ್ನಂತೆ ಹೆಚ್ಚಳಪಡುವವರು ಯಾರಿದ್ದಾರೆ?
5 ಸತ್ತವನನ್ನು ನೀನೆಬ್ಬಿಸಿದೆ ಮರಣದಿಂದ,
ಪಾತಾಳದಿಂದ
ಇದು ಸಾಧ್ಯವಾಯಿತು ಮಹೋನ್ನತನ ವಾಕ್ಯ
ಶಕ್ತಿಯಿಂದ.
6 ಅರಸುಗಳನ್ನು ನಾಶನಕ್ಕೆ ಗುರಿಮಾಡಿದವನು
ನೀನು
ಗಣ್ಯವ್ಯಕ್ತಿಗಳನ್ನು ಮಂಚದಿಂದ ಇಳಿಸಿದವನು
ನೀನು.
7 ಸೀನಾಯಿನಲ್ಲಿ ಗದರಿಸಿಕೊಂಡವನು ನೀನು
ಹೋರೇಬಿನಲ್ಲಿ ಮುಯ್ಯಿತೀರಿಸುವ ನಿರ್ಣಯ
ಕೇಳಿಸಿಕೊಂಡವನು ನೀನು.
8 ಪ್ರತೀಕಾರ ಮಾಡುವುದಕ್ಕೆ ಅರಸರನ್ನು,
ನಿನ್ನಾನಂತರ ಇರಬೇಕಾದ ಪ್ರವಾದಿಯನ್ನು
ಅಭಿಷೇಕಿಸಿದವನು ನೀನು.
9 ನೀ ಒಯ್ಯಲ್ಪಟ್ಟೆ ಬೆಂಕಿಯ ಬಿರುಗಾಳಿಯಲ್ಲಿ
ಅಗ್ನಿಮಯ ಕುದುರೆಗಳೆಳೆದ ರಥದಲ್ಲಿ.
10 ಕೋಪ ರೌದ್ರಕ್ಕೇರುವುದಕ್ಕೆ ಮುಂಚೆ ಅದನ್ನು
ಶಾಂತಪಡಿಸುವುದಕ್ಕಾಗಿ
ತಂದೆಯ ಹೃದಯವನ್ನು ಮಗನ ಕಡೆಗೆ
ತಿರುಗಿಸುವುದಕ್ಕಾಗಿ
ಇಸ್ರಯೇಲಿನ ಕುಲಗಳನ್ನು ಯಥಾಸ್ಥಿತಿಗೆ
ತರುವುದಕ್ಕಾಗಿ
ತಕ್ಕಕಾಲದಲ್ಲಿ ಗದರಿಸುವಾತ ನೀನೆಂದು
ಬರೆದಿದೆ ನಿನ್ನ ವಿಷಯವಾಗಿ.
11 ನಿನ್ನನು ನೋಡುವವರು ಧನ್ಯರು
ಪ್ರೀತಿಯಿಂದ ನಿಧನರಾದವರು ಧನ್ಯರು !
ಕಾರಣ, ನಾವು ಸಹ ನಿಜವಾಗಿ ಜೀವಿಸುವೆವು.

### ಎಲೀಷ

12 ಸುಳಿಗಾಳಿಯಿಂದ ಆವರಿಸಲ್ಪಟ್ಟವನು
ಎಲೀಯನು
ಅವನ ಆತ್ಮದಿಂದ ತುಂಬಿಕೊಂಡವನು
ಎಲೀಷನು.
ಇವನು ತನ್ನ ಜೀವನದಲ್ಲಿ ಜಗ್ಗಲಿಲ್ಲ
ಯಾವ ಅರಸನ ಬೆದರಿಕೆಗು

ಇವನನ್ನು ಅಧೀನದಲ್ಲಿಟ್ಟುಕೊಳ್ಳುವ ಶಕ್ತಿ
ಇರಲಿಲ್ಲ ಯಾರಿಗು.
13 ಇವನು ಸೋಲಲಿಲ್ಲ ಯಾವ ಮಾತಿಗು
ಇವನ ದೇಹ ಪ್ರವಾದಿಸಿತು ಸತ್ತ ಮೇಲೂ.
14 ಜೀವಮಾನಕಾಲದಲ್ಲಿ ಎಸಗಿದನು
ಮಹತ್ಕಾರ್ಯಗಳನ್ನು
ಸತ್ತಮೇಲೂ ಅವನ ಕಾರ್ಯಗಳು
ಅಗಾಧವಾಗಿದ್ದವು.
15 ಜನರು ಪಶ್ಚಾತ್ತಾಪಪಡಲಿಲ್ಲ
ನಾಡಿನಿಂದ ಕೊಳ್ಳೆಯಾಗಿ ಒಯ್ಯಲ್ಪಡುವ
ವರೆಗೂ ಪಾಪಗಳನ್ನು ಬಿಡಲಿಲ್ಲ.
ಹೀಗೆ ಚದರಿಹೋದರು ಭೂಮಿಯ ಮೇಲೆಲ್ಲಾ
ಆಗ ಉಳಿದುಕೊಂಡವರು ಕೆಲವರು ಮಾತ್ರ
ದಾವೀದನ ಗೋತ್ರದ ಒಬ್ಬ ಒಡೆಯನು
ಮಾತ್ರ;
16 ಇವರಲ್ಲಿ ಕೆಲವರು ನಡೆದುಕೊಂಡರು
ದೇವರಿಗೆ ಮೆಚ್ಚಿಕೆಯಾಗಿ
ಇನ್ನು ಕೆಲವರು ಕಟ್ಟಿಕೊಂಡರು
ಪಾಪಗಳನ್ನು ಹೆಚ್ಚು ಹೆಚ್ಚಾಗಿ.

## ಹಿಜ್ಕೀಯ

17 ಹಿಜ್ಕೀಯನು ಭದ್ರಪಡಿಸಿದನು ಪಟ್ಟಣವನ್ನು
ಅದರೊಳಗೆ ನೀರನ್ನು ತರುವ ವ್ಯವಸ್ಥೆ
ಮಾಡಿದನು
ಕಬ್ಬಿಣದ ಹಾರೆಯಿಂದ ತೋಡಿಸಿದನು
ಬಂಡೆಯನ್ನು
ನೀರಿಗಾಗಿ ಕಟ್ಟಿಸಿದನು ಬಾವಿಗಳನ್ನು.
18 ಸನ್ಹೇರೀಬನು ಬಂದನು ಇವನ ಕಾಲದಲ್ಲಿ
ಆದರೆ ತಾನು ಹಿಂದೆ ಉಳಿದು, ರಬ್ಷಾಕೆಯನ್ನು
ಕಳುಹಿಸಿದನು ಮುಂದಕೆ:
ಸಿಯೋನಿನ ವಿರುದ್ಧ ಕೈಯೆತ್ತಿದವನು ಇವನೇ
ಸೊಕ್ಕಿನಿಂದ ಅನೇಕ ವಿಷಯಗಳ ಬಗ್ಗೆ
ಕೊಚ್ಚಿಕೊಂಡವನು ಇವನೇ.
19 ಜನರ ಹೃದಯಗಳೂ ಕೈಗಳೂ ನಡುಗಿದವು
ಆಗ
ಹೆರಿಗೆಯ ವೇದನೆಯಂತೆ ಯಾತನೆಗೆ
ಒಳಗಾದರು, ಅಕಟಾ !
20 ದಯಾಮಯ ಸರ್ವೇಶ್ವರನಿಗೆ ಕೈಯೆತ್ತಿ
ಮೊರೆಯಿಟ್ಟರು
ಪರಿಶುದ್ಧ ಪ್ರಭು ಪರಲೋಕದಿಂದ

ಆ ಪ್ರಾರ್ಥನೆಯನ್ನಾಲಿಸಿದನು
ಯೆಶಾಯನ ಮುಖಾಂತರ ಅವರನ್ನು
ಕಾಪಾಡಿದನು.
21 ಸರ್ವೇಶ್ವರನು ಅಸ್ಸೀರಿಯರ ಪಾಳೆಯವನ್ನು
ತಾಕಿದನು
ಆತನ ದೂತ ಅವರನ್ನು ಸಂಪೂರ್ಣವಾಗಿ
ನಾಶಪಡಿಸಿದನು.

**ಯೆಶಾಯ**

22 ಹಿಜ್ಕೀಯನು ನಡೆದನು ದೇವರಿಗೆ
ಮೆಚ್ಚಿಗೆಯಾಗಿ
ತನ್ನ ಪೂರ್ವಜ ದಾವೀದನ ಮಾರ್ಗದಲ್ಲಿ
ನಡೆದನು ಸ್ಥಿರವಾಗಿ
ದರ್ಶನಗಳಲ್ಲಿ ಮಹಾತ್ಮ, ನಂಬಿಗಸ್ಥನಾಗಿ
ಪ್ರವಾದಿ ಯೆಶಾಯನ
ಅಪ್ಪಣೆಗನುಸಾರವಾಗಿ.
23 ಈ ಯೆಶಾಯನ ಕಾಲದಲ್ಲೆ ಸೂರ್ಯನು
ಹಿಂದಕ್ಕೆ ಸರಿದುದು
ಇವನೇ ಅರಸನ ಜೀವನಾವಧಿ ಹೆಚ್ಚುವಂತೆ
ಮಾಡಿದವನು.
24 ತನ್ನಲ್ಲಿದ್ದ ಶಕ್ತಿಯುತ ಚೈತನ್ಯದ ಮುಖಾಂತರ
ಕೊನೆಯಲ್ಲಿ ಸಂಭವಿಸಲಿರುವುದನ್ನು
ಕಂಡುಕೊಂಡ
ಸಿಯೋನಿನಲ್ಲಿ ಗೋಳಾಡುತ್ತಿದ್ದವರನ್ನು
ಸಂತೈಸಿದ.
25 ಕಾಲಾಂತ್ಯದವರೆಗೆ ನೆರವೇರಬೇಕಾದವು
ಗಳನ್ನೂ ನಿಗೂಢ ವಿಷಯಗಳನ್ನೂ
ಅವು ತಲೆದೋರುವುದಕೆ ಮುಂಚಿತವಾಗಿಯೆ
ಈತ ಪ್ರಕಟಿಸಿದನು.

**ಯೋಷೀಯ**

**49** ನಮಗಿದೆ ಯೋಷೀಯನ ಸ್ಮರಣೆ
ಗಂಧಿಗರು ಮಿಶ್ರಮಾಡಿದ
ಬುಕ್ಕಿಟ್ಟಿನಂತೆ,
ಅವನ ಸವಿನೆನಪಿದೆ ಪ್ರತಿಯೊಬ್ಬರ ಬಾಯಲ್ಲಿ
ಮಧುರವಾದ ಜೇನಿನಂತೆ
ಮಧುಪಾನ ಕೂಟದಲ್ಲಿನ ಗಾಯನದಂತೆ.
2 ಜನರ ಪರಿವರ್ತನೆಯ ವಿಷಯದಲ್ಲಿ
ಯಥಾರ್ಥವಾಗಿದ್ದನು

ಪಾಪದ ಅಸಹ್ಯಕೃತ್ಯಗಳನು ತೆಗೆದುಹಾಕಿದನು.
3 ತನ್ನ ಹೃದಯವನ್ನು ದೇವರ
ಸತ್‍ಸಂಬಂಧದಲ್ಲಿ ಇಟ್ಟುಕೊಂಡನು
ದುರ್ಜನರ ದಿನಗಳಲ್ಲಿ ಸದ್ಧರ್ಮವನ್ನು
ಬಲಪಡಿಸಿದನು.

**ಯೆರೆಮೀಯ**

4 ದಾವೀದ, ಹಿಜ್ಕೀಯ, ಯೋಷೀಯ
ಇವರನ್ನುಳಿದು, ಇತರರೆಲ್ಲ ತಪ್ಪಿತಸ್ಥರು
ಮಹೋನ್ನತನ ಧರ್ಮಶಾಸ್ತ್ರವನ್ನು ಮೀರಿ
ನಡೆದರು
ಜುದೇಯದ ಅರಸರು ಕಣ್ಮರೆಯಾಗಿ
ಹೋದರು.
5 ಕಾರಣ, ವರ್ಗಾಯಿಸಿದರು ತಮ್ಮ
ಅಧಿಕಾರವನ್ನು ಬೇರೆಯವರಿಗೆ
ತಮ್ಮ ಗೌರವವನ್ನು ಹೊರಜನಾಂಗದವರಿಗೆ.
6 ಬೆಂಕಿಯಿಕ್ಕಿದರವರು ಮಹಾ
ಪವಿತ್ರಾಲಯವಿದ್ದ ಶ್ರೀ ನಗರಕ್ಕೆ
ಹಾಳುಮಾಡಿದರು ಅದರ ಹಾದಿಬೀದಿಗಳನ್ನು,
ಯೆರೆಮೀಯನು ವಚನಿಸಿದಂತೆ.
7 ಕೇಡನ್ನು ಬಯಸಿದರು ಆ ಯೆರೆಮೀಯನಿಗೆ
ಕಿತ್ತು ನಾಶಮಾಡುವುದಕ್ಕೆ, ಕೆಡವುದಕ್ಕೆ,
ಕಟ್ಟುವುದಕ್ಕೆ,
ಗರ್ಭದಿಂದಲೆ ಪ್ರತಿಷ್ಠೆ ಹೊಂದಿದ್ದ
ಆ ಪ್ರವಾದಿಗೆ.

**ಯೆಜೆಕಿಯೇಲ್**

8 ಸರ್ವೇಶ್ವರನ ಮಹಿಮೆಯನ್ನು ದರ್ಶಿಸಿದವನೇ
ಯೆಜೆಕಿಯೇಲನು
ಕೆರೂಬಿಯರ ರಥದ ಮೇಲೆ ಬೆಳಗಿದಾ
ಮಹಿಮೆಯನ್ನಾತ ಕಂಡನು.
9 ಬಾರಿ ಮಳೆಸುರಿಸಿ ಬಾಧೆಯಿತ್ತನು ಶತ್ರುಗಳಿಗೆ
ಒಳಿತನ್ನು ಮಾಡಲು ಮರೆಯಲಿಲ್ಲ
ಸನ್ಮಾರ್ಗದಲ್ಲಿದ್ದವರಿಗೆ.

**ಹನ್ನೆರಡು ಪ್ರವಾದಿಗಳು**

10 ಹನ್ನೆರಡು ಪ್ರವಾದಿಗಳ ಎಲುಬುಗಳು ಮರಳಿ
ಚಿಗುರಲಿ ತಾವಿರುವಲ್ಲೆ
ಕಾರಣ, ಇಸ್ರಯೇಲರನ್ನು ಸಂತೈಸಿ,
ಶ್ರದ್ಧೆ ನಿರೀಕ್ಷೆಯಿಂದ ದುಡಿದು,
ಅವರಿಗಿತ್ತರು ಬಿಡುಗಡೆ.

### ಜೆರುಬ್ಬಾಬೆಲ ಮತ್ತು ಯೆಷೂವ

11 ಜೆರುಬ್ಬಾಬೆಲನನ್ನು ನಾವು
ಹೊಗಳುವುದಾದರು ಹೇಗೆ?
ಅವನು ಬಲಗೈಯ
ಮುದ್ರೆಯುಂಗುರದಂತಿದ್ದನವನಲ್ಲವೆ?
12 ಯೋಚಾದಾಕನ ಮಗ ಯೆಷೂವನೂ ಇದ್ದನು
ಇವನಂತೆಯೆ.
ತಮ್ಮ ದಿನಗಳಲ್ಲಿ ದೇವಮಂದಿರವನ್ನು ಪುನಃ
ಕಟ್ಟಿದವರು ಇವರೇ.
ಸರ್ವೇಶ್ವರನಿಗೆ ಮೀಸಲಾದ ಆಲಯವನ್ನು
ಇವರು ನಿರ್ಮಿಸಿದರು
ಮಾತ್ರವಲ್ಲ, ಅದನ್ನು ಶಾಶ್ವತ ಮಹಿಮೆಗಾಗಿ
ಸಿದ್ಧಗೊಳಿಸಿದರು.

### ನೆಹೆಮಿಯ

13 ಅದರಂತೆಯೇ ಹಿರಿದಾದುದು ನೆಹೆಮಿಯನ
ಕೀರ್ತಿಯು
ಬಿದ್ದುಹೋದ ಗೋಡೆಗಳನ್ನು ಸರಿಯಾಗಿ
ಎಬ್ಬಿಸಿದವನು ಇವನು
ಕದಗಳನ್ನೂ ಅಗುಳಿಗಳನ್ನೂ ಮಾಡಿಸಿದನು
ನಮ್ಮ ಮನೆಗಳನ್ನು ಮರಳಿ ಕಟ್ಟಿಸಿದನು.

### ಹಿನ್ನೋಟ

14 ಹನೋಕನಂಥ ಮನುಷ್ಯನೇ ಸೃಷ್ಟಿಯಾಗಲಿಲ್ಲ
ಬುವಿಯ ಮೇಲೆ
ಏಕೆಂದರೆ ಒಯ್ಯಲ್ಪಟ್ಟನವನು ಬುವಿಯ
ಮೇಲಕ್ಕೆ.
15 ಅಂತೆಯೇ ಜೋಸೆಫನಂಥ ಮನುಷ್ಯ
ಹುಟ್ಟಲಿಲ್ಲ
ಆಗಿದ್ದನವನು ತನ್ನ ಸಹೋದರರಿಗೆ ನಾಯಕ,
ಜನಾಂಗಕೆ ಆಧಾರ;
ಅವನ ಎಲುಬುಗಳಿಗೂ ದೊರಕಿತು ಮಹಾ
ಗೌರವ!
16 ಶೇಮನೂ ಸೇತನೂ ಮಹಿಮಾನ್ವಿತರು ಎಲ್ಲ
ಮಾನವರೊಳು
ಆದಾಮನೇ ಶ್ರೇಷ್ಠನು ಸೃಷ್ಟಿಯಲ್ಲುಂಟಾದ
ಎಲ್ಲ ಜೀವಿಗಳೊಳು.

## ಮಹಾಯಾಜಕ ಸಿಮೋನ್

**50** ಮಹಾಯಾಜಕನೂ ಒನೀಯನ
ಮಗನೂ ಆದ ಸಿಮೋನನು
ತನ್ನ ಜೀವನಕಾಲದಲ್ಲಿ ದೇವಮಂದಿರವನ್ನು
ಜೀರ್ಣೋದ್ಧಾರ ಮಾಡಿದನು
ತನ್ನ ದಿನಗಳಲ್ಲಿ ಮಹಾದೇವಾಲಯವನ್ನು
ಭದ್ರಪಡಿಸಿದನು.
2 ಕಟ್ಟಿಸಿದನವನು ಅಸ್ತಿವಾರದಿಂದ ಹಿಡಿದು
ಇಮ್ಮಡಿಗೋಡೆಯನ್ನು ಪೂರ್ತಿಯಾಗಿ
ಮಹಾದೇವಾಲಯದ ಆವರಣದ ಗೋಡೆಯ
ಕಟ್ಟಿಸಿದನು ಎತ್ತರವಾಗಿ.
3 ಇವನ ಕಾಲದಲ್ಲಿ ತೋಡಿ ಕಂಡು
ಹಿಡಿಯಲಾಯಿತು
'ಕಂಚಿನ ಕಡಲು' ಎಂಬ ಪಾತ್ರೆಯನ್ನು.
4 ತನ್ನ ಜನಾಂಗವು ಸೋತುಹೋಗಬಾರದೆಂದು
ಆಲೋಚನೆ ಮಾಡಿದನು
ಮುತ್ತಿಗೆಯ ಕಾಲಕ್ಕಾಗಿ ಪಟ್ಟಣವನ್ನು
ಭದ್ರಪಡಿಸಿದನು.
5 ಘನ ಗಂಭೀರವಾಗಿ ಕಾಣಿಸಿಕೊಳ್ಳುತ್ತಿದ್ದನು
ಪವಿತ್ರಾಲಯದಿಂದ ಹೊರಬಂದಾಗ,
ಜನರು ಅವನ ಸುತ್ತಲೂ ಸೇರಿಬಂದಾಗ!
6 ಅವನಿದ್ದನು ಮೋಡಗಳ ಮಧ್ಯೆ ಬೆಳಗುವ
ಬೆಳಗಿನ ಚುಕ್ಕೆಯಂತೆ, ಪೂರ್ಣಚಂದ್ರನಂತೆ,
7 ಮಹೋನ್ನತನ ಆಲಯದ ಮೇಲೆ ಹೊಳೆದ
ಸೂರ್ಯನಂತೆ,
ಘನಮೇಘಗಳ ಮಧ್ಯೆ ಮೆರೆಯುವ
ಮಳೆಬಿಲ್ಲಿನಂತೆ,
8 ವಸಂತಕಾಲದ ಗುಲಾಬಿ ಹೂಗಳಂತೆ
ಬುಗ್ಗೆಯ ಬಳಿಯಲ್ಲಿರುವ ನೈದಿಲೆಯಂತೆ
ಬೇಸಿಗೆಯಲಿ ಎದ್ದ ಧೂಪಮರದ
ಅಂಕುರದಂತೆ;
9 ಧೂಪದ ಪಾತ್ರೆಯಲ್ಲಿ ಉರಿಯುವ
ಸಾಂಬ್ರಾಣಿಯಂತೆ
ಚಿನ್ನದ ತಗಡಿನಿಂದ ಮಾಡಿದ ರತ್ನಖಚಿತ
ಪಾತ್ರೆಯಂತೆ;
10 ಕಂಗೊಳಿಸುತ್ತಿದ್ದನು ಫಲವನ್ನು ಬಿಡುವ
ಓಲಿವ್ ಮರದಂತೆ
ಮುಗಿಲು ಮುಟ್ಟುವ ಹಾಗೆ ಬೆಳೆದ
ತುರಾಯಿ ಮರದಂತೆ.

11 ವೈಭವದ ವಸ್ತ್ರವನ್ನು ಗೌರವಯುತ
ಪದಕವನ್ನು ಧರಿಸಿಕೊಂಡಾಗ
ಪವಿತ್ರ ವೇದಿಕೆಯ ಮೇಲೆ ಅವುಗಳೊಂದಿಗೆ
ಏರಿದಾಗ
ಪವಿತ್ರ ಸ್ಥಳದ ಆವರಣಕ್ಕೆ ಅವನೊಂದು
ಭೂಷಣವಾಗಿದ್ದ.
12 ಯಾಜಕರ ಕೈಯಿಂದ ಅರ್ಪಣಾ
ಭಾಗಗಳನ್ನು ತೆಗೆದುಕೊಂಡಿರಲು
ವೇದಿಕೆಯ ಅಗ್ನಿಕುಂಡದ ಬಳಿ ನಿಂತಿರಲು
ಇತರ ಯಾಜಕರು ಅವನ ಸುತ್ತ
ನಿಲ್ಲುತ್ತಿದ್ದರು.
ಆಗ ಕಂಡುಬಂದನವನು ಲೆಬನೋನಿನ
ದೇವದಾರು ಮರದಂತೆ
ಸುತ್ತು ನಿಂತವರಿದ್ದರು ಖರ್ಜೂರ ಮರದ
ಕಾಂಡಗಳಂತೆ.
13 ಆರೋನನ ಪುತ್ರರೆಲ್ಲರು ನಿಂತು
ಕೊಳ್ಳುತ್ತಿದ್ದರು
ಇಸ್ರಯೇಲರ ಸಭೆಯ ಸಮ್ಮುಖದಲಿ
ಘನತೆ ಗೌರವದಿಂದ ಸರ್ವೇಶ್ವರನಿಗೆ
ಅರ್ಪಣೆಗಳ ಹಿಡಿದು ಕೈಯಲ್ಲಿ.
14–15 ಬಲಿಪೀಠದ ಬಳಿ ಆರಾಧನೆಯನ್ನು
ಮುಗಿಸಿದ ಬಳಿಕ
ಮಹೋನ್ನತನೂ ಸರ್ವಶಕ್ತನೂ ಆದವಗೆ
ಕಾಣಿಕೆಯನ್ನು ಸಮರ್ಪಿಸಿದ ನಂತರ
ಬಟ್ಟಲಿಗೆ ಕೈಹಾಕಿ, ದ್ರಾಕ್ಷಿಯ ರಸವನೆತ್ತಿ
ಸುರಿಯುತ್ತಿದ್ದನ್ನು ವೇದಿಯ ಬುಡಕೆ
ಮಹೋನ್ನತನೂ ಸಕಲರ ಅರಸನೂ
ಆದಾತನಿಗೆ ಸುಗಂಧವಾಗಿರುವಂತೆ.
16 ತರುವಾಯ ಆರೋನನ ಪುತ್ರರು
ಆರ್ಭಟಿಸುತ್ತಿದ್ದರು
ತಗಡಿನ ತುತೂರಿಗಳನ್ನು ಊದುತ್ತಿದ್ದರು
ಮಹೋನ್ನತನನ್ನು ಆತನ ಎದುರಿನಲ್ಲೇ
ಜ್ಞಾಪಕಪಡಿಸಲೆಂದು
ಎಲ್ಲರಿಗೂ ಕೇಳಿಸುವಂತೆ ಮಹಾಧ್ವನಿ
ಗೈಯುತ್ತಿದ್ದರು.
17 ಕೂಡಲೇ ಜನರೆಲ್ಲರೂ ನೆಲದಮೇಲೆ
ಬೀಳುತ್ತಿದ್ದರು ಬೋರಲಾಗಿ
ತಮ್ಮ ಮಹೋನ್ನತ, ಸರ್ವಶಕ್ತ
ಸರ್ವೇಶ್ವರನನ್ನು ಆರಾಧಿಸುವುದಕ್ಕಾಗಿ.
18 ಆತನನು ಕೊಂಡಾಡುತ್ತಿದ್ದರು ಗಾಯಕರು

ಸ್ವರವೆತ್ತಿ
ಇಡೀ ದೇವಮಂದಿರದಲ್ಲಿ ಕೇಳಿಸುತ್ತಿತ್ತಾ
ರಾಗವು ಇಂಪಾಗಿ.
19 ಆರಾಧನೆ ಮುಗಿಯುವವರೆಗೆ ಜನರು
ಪ್ರಾರ್ಥಿಸುತ್ತಿದ್ದರು ಆ ಕರುಣಾ
ಸಾಗರನನ್ನು,
ಆ ಮಹೋನ್ನತನನ್ನು ಬೇಡಿಕೊಂಡು
ಮುಗಿಸುತ್ತಿದ್ದರು ಆರಾಧನೆಯನ್ನು.
20 ಬಳಿಕ ಕೆಳಗಿಳಿದು ತನ್ನ ಕೈಗಳನ್ನೆತ್ತುತ್ತಿದ್ದನು,
ಇಸ್ರಯೇಲ್ ಸಭೆಗೆ
ದೇವರ ಆಶೀರ್ವಾದವನ್ನು ನೀಡುವುದಕ್ಕೆ
ಆತನ ಶ್ರೀನಾಮವನ್ನು ಉಚ್ಚರಿಸುವುದಕ್ಕೆ.
21 ತಲೆ ಬಾಗುತ್ತಿದ್ದರು ಜನರು ಮತ್ತೊಮ್ಮೆ
ಮಹೋನ್ನತನ ಆಶೀರ್ವಾದವನ್ನು
ಸ್ವೀಕರಿಸುವುದಕ್ಕೆ.

**ಪ್ರಬೋಧನೆ**

22 ಈಗ ನೀವೆಲ್ಲರು ಕೊಂಡಾಡಿ ದೇವರನ್ನು
ಆತ ನಡೆಸುವನು ಮಹತ್ಕಾರ್ಯಗಳನ್ನು
ಎಲ್ಲೆಡೆಗಳಲ್ಲು
ಹುಟ್ಟಿನಿಂದ ನಮ್ಮ ದಿನಗಳನ್ನು ಹೆಚ್ಚಿಸು
ವಂಥವನು ಆತನು.
ಕೊಂಡಾಡಿ, ತನ್ನ ಕರುಣೆಗನುಸಾರ
ನಮ್ಮೊಂದಿಗೆ ವರ್ತಿಸುವಾ ದೇವರನ್ನು.
23 ಆತನು ನಮಗೆ ಉಲ್ಲಾಸದ ಹೃದಯವನ್ನು
ದಯಪಾಲಿಸಲಿ
ನಮ್ಮ ದಿನಗಳಲ್ಲಿ ಶಾಂತಿಯನ್ನು ಅನುಗ್ರಹಿಸಲಿ
ಅದು ಇಸ್ರಯೇಲರಲ್ಲಿ ಶಾಶ್ವತವಾಗಿರಲಿ!
24 ಹೀಗೆ ಆತನ ಕೃಪೆ ನಮ್ಮಲ್ಲಿ ದೃಢವಾಗಿರಲಿ
ತನ್ನ ಕಾಲದಲ್ಲಿ ಆತ ನಮ್ಮನು ಬಿಡುಗಡೆ
ಮಾಡಲಿ !
25 ಎರಡು ಜನಾಂಗಗಳ ವಿಷಯದಲ್ಲಿ
ಸಿಟ್ಟುಗೊಂಡಿದೆ ನನ್ನ ಆತ್ಮ
ಮೂರನೆಯದು ಜನಾಂಗವೇ ಅಲ್ಲ.
26 ಸಮಾರ್ಯದ ಗುಡ್ಡದ ಮೇಲೆ
ಕುಳಿತಿರುವವರು,
ಫಿಲಿಷ್ಟಿಯರು ಹಾಗು ಶೆಕೆಮಿನಲ್ಲಿ ವಾಸಿಸುವ
ಮೂಢರು.

**ವಿದಾಯ ವಂದನೆ**

27 ಜೆರುಸಲೇಮಿನ ಸಿರಾಖ ಎಲ್ಲಾಜಾರನ ಮಗ
ಯೆಷೂವನೆಂಬ ನಾನು
ಈ ಗ್ರಂಥದಲ್ಲಿ ಜ್ಞಾನವನ್ನು, ವಿವೇಕವನ್ನು,
ಸುಶಿಕ್ಷಣವನ್ನು ಬರೆದಿರುವೆನು;
ನನ್ನ ಹೃದಯದಿಂದ ಸುಜ್ಞಾನವನ್ನು
ಸುರಿಸಿರುವೆನು.
28 ಇವುಗಳನ್ನು ಅನುಸರಿಸುವವನು ಧನ್ಯನು !
ಇವುಗಳನ್ನು ತನ್ನ ಹೃದಯದಲ್ಲಿ
ಇಟ್ಟುಕೊಳ್ಳುವವನು ಜಾಣನು.
29 ಇದರಂತೆ ನಡೆದರೆ ಸರ್ವವಿಷಯಗಳಲ್ಲೂ
ಬಲ್ಲಿದನಾಗುವನು
ಸರ್ವೇಶ್ವರನ ಪ್ರಭೆಯೇ ಅವನಿಗೆ ಮಾರ್ಗದರ್ಶಿ
ಆಗಿರುವುದು.

## ಅನುಬಂಧ

### ವಂದನಾಗೀತೆ

**51** ಹೇ ಸರ್ವೇಶ್ವರಾ, ಅರಸರೇ,
ಸ್ತುತಿಸುವೆ ನಾ ನಿಮ್ಮನ್ನು
ನನ್ನ ರಕ್ಷಕರಾದ ದೇವರೇ, ಕೊಂಡಾಡುವೆ
ನಾ ನಿಮ್ಮನ್ನು
ಸ್ತುತಿಸುವೆ ನಾ ನಿಮ್ಮ ನಾಮವನ್ನು.
2 ನೀವೇ ನನ್ನ ಪಾಲಕ ಹಾಗು ಸಹಾಯಕ
ನಿಮ್ಮ ನೆರವಿಂದ ನನ್ನ ದೇಶ ಪಾರಾಗಿದೆ
ವಿನಾಶದಿಂದ,
ವಂಚಿಸುವ ನಾಲಿಗೆಯ ಕುಯುಕ್ತಿಯಿಂದ,
ಸುಳ್ಳಾಡುವ ತುಟಿಗಳಿಂದ.
ನನ್ನ ಬಳಿ ನಿಂತವರೆದುರಿನಲ್ಲಿ ನೀವಾಗಿರುವಿರಿ
ನನ್ನ ಸಹಾಯಕ.
3 ಕಾಪಾಡಿದಿರಿ ನನ್ನನ್ನು ನಿಮ್ಮ ಪರಮ
ಕಾರುಣ್ಯದ ನಿಮಿತ್ತ
ನಿಮ್ಮ ನಾಮದ ಮಹತ್ತಿನ ಪ್ರಯುಕ್ತ.
ರಕ್ಷಿಸಿದಿರಿ, ನನ್ನ ಹಾಳುಮಾಡಲು ಹಲ್ಲು
ಕಡಿಯುತ ಸಜ್ಜಾಗಿದ್ದವರಿಂದ;
ರಕ್ಷಿಸಿದಿರಿ, ನನ್ನ ಜೀವತೆಗೆಯಲು
ಹವಣಿಸುತ್ತಿದ್ದವರ ಕೈಯಿಂದ,
ನನಗೆ ಬಂದೊದಗಿದ್ದ ಅನೇಕಾನೇಕ
ಕಷ್ಟಗಳಿಂದ.
4 ನನ್ನ ಉಳಿಸಿದಿರಿ ಸುತ್ತುವರಿದ,
ಉಸಿರುಗಟ್ಟಿಸುವ ಉರಿಯಿಂದ,

ನಾನೇ ಹೊತ್ತಿಸಿದ ಬೆಂಕಿಯಿಂದ.
5–6 ಕಾಪಾಡಿದಿರಿ ಪಾತಾಳಗರ್ಭದ
ಅಂತರಾಳದಿಂದ
ಹೊಲೆನಾಲಿಗೆಯಿಂದ, ಸುಳ್ಳುನುಡಿಗಳಿಂದ,
ಅರಸನೆದುರಿಗೆ ಚಾಡಿಹೇಳಿದ ದುರ್ಜನರ
ನಾಲಿಗೆಯಿಂದ.
ನನ್ನ ಆತ್ಮ ಸಮೀಪವಾಗಿತ್ತು ಮರಣಕ್ಕೆ
ನನ್ನ ಪ್ರಾಣವು ಹತ್ತಿರವಾಗಿತ್ತು
ಕೆಳಪಾತಾಳಕ್ಕೆ.
7 ಬಳಸಿಬಂದಿರಲವರು ನನ್ನ ಸುತ್ತಲು
ನನಗಿರಲಿಲ್ಲ ಸಹಾಯಕರಾರು
ನಿರೀಕ್ಷಿಸಿದೆ ನಾ ಮನುಜರ ಸಹಾಯವನು;
ಅದು ಸಿಕ್ಕದೆ ಹೋಯಿತು.
8 ಆಗ ಸರ್ವೇಶ್ವರಾ, ನೆನೆಸಿಕೊಂಡೆ ನಾ ನಿಮ್ಮ
ಕೃಪೆಯನ್ನು
ಯುಗಯುಗಾಂತರಕ್ಕು ಇರುವ ನಿಮ್ಮ ಕಾರ್ಯ
ಸಾಧನೆಯನ್ನು.
ನಿಮ್ಮನ್ನು ನಿರೀಕ್ಷಿಸಿಕೊಂಡಿರುವವರನ್ನು
ಬಿಡಿಸುವವರು ನೀವು
ಶತ್ರುಗಳ ಕೈಯಿಂದವರನ್ನು ರಕ್ಷಿಸುವವರು
ನೀವು.
9 ಭೂಮಿಯಿಂದ ಮೇಲಕ್ಕೇರಿಸಿದಿರಿ
ನನ್ನ ಮನವಿಯನ್ನು
ಬೇಡಿಕೊಳ್ಳಲು, ರಕ್ಷಿಸಿದಿರಿ
ಮರಣದಿಂದೆನ್ನನ್ನು.
10 ನನ್ನೊಡೆಯನ ತಂದೆಯಾದ ಸರ್ವೇಶ್ವರನಿಗೆ
ಮೊರೆಯಿಟ್ಟೆನು
ನನ್ನ ಕಷ್ಟಕಾಲದೊಳು, ಸೊಕ್ಕಿನವರ ವಿರುದ್ಧ,
ಸಹಾಯವಿಲ್ಲದ ತರುಣದೊಳು
ನನ್ನನ್ನು ಕೈಬಿಡಬೇಡವೆಂದು ಕೇಳಿಕೊಂಡೆನು.
11 ಎಡೆಬಿಡದೆ ನಾ ಕೀರ್ತಿಸುವೆ ನಿನ್ನ ನಾಮವನು
ಕೃತಜ್ಞತಾ ಸ್ತುತಿಯೊಡನೆ ನಿಮ್ಮನು
ಕೊಂಡಾಡುವೆನು.
ನೀವಾಲಿಸಿದಿರಿ ನನ್ನ ಮನವಿಯನ್ನು.
12 ವಿನಾಶದಿಂದ ನನ್ನನ್ನು ರಕ್ಷಿಸಿದಿರಿ
ಕಷ್ಟಕಾಲದಲ್ಲಿ ಎನ್ನನ್ನು ಕಾಪಾಡಿದಿರಿ
ಎಂದೇ ಕೃತಜ್ಞತಾಸ್ತುತಿ ಸಲ್ಲಿಸುವೆ;
ನಿಮ್ಮ ನಾಮವನ್ನು ಸರ್ವೇಶ್ವರಾ,
ಕೊಂಡಾಡುವೆ.

## ಸುಜ್ಞಾನದ ಅನ್ವೇಷಣೆ

13 ನಾನಿನ್ನೂ ಎಳೆಯವನಾಗಿದ್ದಾಗ,
ದೇಶಾಂತರ ಹೋಗುವುದಕ್ಕೆ ಮುನ್ನ
ಬಹಿರಂಗ ಪ್ರಾರ್ಥನೆಯಲ್ಲಿ
ಜ್ಞಾನವನ್ನರಸಿದೆನಯ್ಯಾ.
14 ಮಹಾಮಂದಿರದ ಎದುರಿನಲ್ಲಿ ನಾನದನ್ನು
ಕೇಳಿಕೊಂಡೆ
ಕಡೆಯವರೆಗೂ ಅದನ್ನು ಹುಡುಕಿದೆ.
15 ದ್ರಾಕ್ಷಿ ಹೂಬಿಡುವ ಕಾಲದಿಂದ
ಫಲಬಿಡುವ ತನಕ
ಜ್ಞಾನದಲ್ಲಿ ಆನಂದಿಸಿತು ನನ್ನ ಹೃದಯ
ಸರಳತೆಯಲ್ಲೇ ನಡೆಯಿತು ನನ್ನ ಪಾದ
ನಾನದನ್ನು ಅರಸುತ್ತಾ ಬಂದೆ ಯೌವನದಿಂದ.
16 ನನ್ನ ಕಿವಿಯನ್ನು ಕೊಂಚ ಬಾಗಿಸಿ,
ಅದನ್ನು ಸ್ವೀಕರಿಸಿದೆ
ಅದರಿಂದ ಒಳ್ಳೆಯ ಶಿಕ್ಷಣವನ್ನು
ಪಡೆದುಕೊಂಡೆ.
17 ಆದುದರಿಂದ ನಾ ಮುಂದುವರಿದೆ
ಸುಜ್ಞಾನ ನೀಡುವಾತನನ್ನು ನಾ ಕೊಂಡಾಡುವೆ.
18 ಅದನ್ನು ಅಭ್ಯಾಸಿಸಲು ನಿಶ್ಚಯಮಾಡಿದೆ
ಒಳಿತನ್ನು ಕುರಿತು ಆಸಕ್ತನಾದೆ
ನಾನೆಂದಿಗೂ ಆಶಾಭಂಗಪಡೆ.
19 ಹೋರಾಡಿತು ನನ್ನಾತ್ಮ ಅದನ್ನು ಗಳಿಸಲು
ನಿಷ್ಠೆಯಿಂದಿದ್ದೆ ನನ್ನ ಕಾರ್ಯಕಷ್ಟದೊಳು
ನನ್ನ ಕೈಯೆತ್ತಿದೆ ಆಕಾಶದ ಕಡೆಗೆ
ನನ್ನ ಅಜ್ಞಾನಕ್ಕಾಗಿ ನಾನೇ ಹಲುಬಿಕೊಂಡೆ.
20 ಇಚ್ಛೆಯಿಂದ ನಾನದರ ಮೇಲೆ ಮನಸ್ಸಿಟ್ಟೆ
ನಿರ್ಮಲತೆಯಲ್ಲಿ ಅದನ್ನು ಕಂಡುಕೊಂಡೆ
ಮೊದಲಿನಿಂದಲೇ ಅದರೊಂದಿಗೆ ಸೇರುವ
ಬುದ್ಧಿಯನ್ನು ಪಡೆದೆ
ಇನ್ನು ನಾನೆಂದಿಗೂ ಅದನ್ನು ಕೈಬಿಡಲಾರೆ.
21 ನನ್ನ ಅಂತರಂಗ ಚಿಂತಿಸಿತು ಅದನ್ನು
ಅರಸುವುದಕ್ಕಾಗಿ
ಒಳ್ಳೆಯ ಸ್ವಾಸ್ತ್ಯವನ್ನು ಪಡೆದುಕೊಂಡೆ
ಅದರಿಂದಾಗಿ.
22 ಪ್ರತಿಫಲವಾಗಿ ಕೊಟ್ಟರು ಸರ್ವೇಶ್ವರ
ನನಗೆ ವಾಕ್ಚಾತುರ್ಯವನ್ನು
ಆದುದರಿಂದಲೇ ಕೊಂಡಾಡುವೆ ನಾನವರನ್ನು.
23 ಅಶಿಕ್ಷಿತರೇ, ನನ್ನ ಬಳಿಗೆ ಬನ್ನಿ
ಶಿಕ್ಷಣದ ಮನೆಯಲ್ಲಿ ತಂಗಿ.

24 ಈ ವಿಚಾರದಲ್ಲಿ ನಮಗೆ ಕೊರತೆಯಿದೆ
ಎಂದು ನೀವು ಹೇಳುವುದೇಕೆ?
ನಿಮ್ಮ ಆತ್ಮಗಳು ಬಹಳವಾಗಿ
ದಾಹಗೊಂಡಿರುವುದೇಕೆ?
25 ನಾನು ಬಾಯ್ದೆರೆದು ಮಾತಾಡಿದೆ
ನೀವದನ್ನು ತೆಗೆದುಕೊಳ್ಳಿ ಹಣವಿಲ್ಲದೆ.
26 ನಿಮ್ಮ ಕೊರಳನ್ನು ಒಡ್ಡಿ ಅದರ ನೊಗಕ್ಕೆ
ದೊರಕಲಿ ಸುಶಿಕ್ಷಣ ನಿಮ್ಮ ಆತ್ಮಕ್ಕೆ
ದೊರಕಲಿದೆ ಅದು ನಿಮ್ಮ ಸಮೀಪದಲ್ಲೆ.
27 ಕಣ್ಣಾರೆ ನೋಡಿರಿ ನೀವಿದನ್ನು:
'ನಾಪಟ್ಟ ದುಡಿಮೆ ಅಲ್ಲ, ಪಡೆದ ವಿಶ್ರಾಂತಿ
ಬಹಳ' ಎಂಬುದನ್ನು.
28 ಪಡೆದುಕೊಳ್ಳಿ ಶಿಕ್ಷಣವನ್ನು ಬೆಳ್ಳಿಯಿಂದ
ಗಳಿಸಿಕೊಳ್ಳಿ ಬಂಗಾರವನ್ನು ಅದರಿಂದ.
29 ಆನಂದಿಸಲಿ ನಿಮ್ಮಾತ್ಮ ಸರ್ವೇಶ್ವರನ
ಕೃಪೆಯಲ್ಲಿ
ನಾಚಿಕೆಪಡದಿರಿ ಆತನನ್ನು
ಕೊಂಡಾಡುವುದರಲ್ಲಿ.
30 ಕಾರ್ಯಸಾಧಿಸಿರಿ ಕಾಲಬರುವ ಮುಂಚೆ
ಪ್ರತಿಫಲವನ್ನೀಯುವನಾತ
ಸೂಕ್ತ ಕಾಲದಲ್ಲೆ.